ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 24 ಶುಕ್ರವಾರ 2023

₹4

ದೂರವಾಣಿ: 2496520, 2496521, 2496526, 2496527, 2496528, FAX: 0821–2496525

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ. ದೇವರಾಜ ಅರಸು ರಸ್ತೆ, Ph: 2428695


43

ಸಂಪುಟ: 43 | ಸಂಚಿಕೆ: 333 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಮೈಸೂರು ಮಿತ್ರ

ಕೆ.ಆರ್.ಕ್ಷೇತ್ರ ಏ.20ಕ್ಕೆ ಬೋರ್‌ವೆಲ್ ಮುಕ್ತವಾಗಲಿದೆ: ಶಾಸಕ ರಾಮದಾಸ್



ಮೈಸೂರು, ಮಾ.23–ಕೃಷ್ಣರಾಜ ಕ್ಷೇತ್ರವನ್ನು ಬೋರ್‌ವೆಲ್ ಮುಕ್ತ ಕ್ಷೇತ್ರವಾಗಿಸುವ ಕನಸು ಏ.20ರಂದು ಈಡೇರಲಿದೆ ಎಂದು ಶಾಸಕ ಎಸ್.ಎ.ರಾಮದಾಸ್ ತಿಳಿಸಿದರು.

ಬಿದರಗೂಡು ಸಮೀಪ ಇರುವ ಕಬಿನಿ ಜಲಾ ಸಂಗ್ರಹಗಾರಕ್ಕೆ ಗುರುವಾರ ನಗರ ಪಾಲಿಕೆ ಆಯುಕ್ತರು, ವಾಣಿವಿಲಾಸ, ಜಲಮಂಡಳಿ, ವಿದ್ಯುತ್ ಇಲಾಖೆ, ನೀರಾವರಿ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳ ತಂಡದೊಂದಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದ ಬಳಿಕ ಮಾಧ್ಯಮಗಳೊಂದಿಗೆ ಅವರು ಮಾತನಾಡಿದರು.

ಕೃಷ್ಣರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯನ್ನು ಬೋರ್‌ವೆಲ್ ಮುಕ್ತ ಕ್ಷೇತ್ರವಾಗಿಸುವ ನಿಟ್ಟಿನಲ್ಲಿ ಕಂಡಿದ್ದ ಕನಸು ನನಸಾಗುತ್ತಿದ್ದು, ಏಪ್ರಿಲ್ 20ರಿಂದ ಕ್ಷೇತ್ರಕ್ಕೆ ಹೆಚ್ಚುವರಿಯಾಗಿ 30 ಎಂಎಲ್‌ಡಿ ನೀರು ಹರಿದುಬರಲಿದೆ. ಪ್ರಸ್ತುತ ಕ್ಷೇತ್ರಕ್ಕೆ 60 ಎಂಎಲ್ ಡಿ ನೀರು ಬರುತ್ತಿದೆ. 30 ಎಂಎಲ್‌ಡಿ ನೀರನ್ನು ಹೆಚ್ಚುವರಿಯಾಗಿ ತರುವ ಮೂಲಕ ಕ್ಷೇತ್ರವನ್ನು ಬೋರ್‌ವೆಲ್ ಮುಕ್ತ ಮಾಡುವ ಸಂಕಲ್ಪ ಮಾಡಲಾಗಿತ್ತು. ಅಂದುಕೊಂಡಂತೆ ಯೋಜನೆ ಭಾಗಶಃ ಪೂರ್ಣವಾಗಿದೆ. ಏಪ್ರಿಲ್ 20ರಂದು ಕ್ಷೇತ್ರಕ್ಕೆ ಕಬಿನಿ ನೀರು ಹರಿಯಲಿದ್ದು, ಮೂರು ತಿಂಗಳ ನಂತರ ಇನ್ನೂ 30 ಎಂಎಲ್‌ಡಿ ನೀರು ಹೆಚ್ಚುವರಿಯಾಗಿ ಬರಲಿದೆ. ಇದರಿಂದ 120 ಎಂಎಲ್‌ಡಿ ನೀರು ದೊರೆಯಲಿದೆ ಎಂದ ಅವರು ನೀರಿನ ಹರಿವಿನ ಲೆಕ್ಕಾಚಾರ ಮಾಡಬೇಕಾದ ಹಿನ್ನೆಲೆಯಲ್ಲಿ ಇದೇ ತಿಂಗಳ 27ರಂದು ಕ್ಷೇತ್ರದಲ್ಲಿ ಎಂಟು ಗಂಟೆಗಳ ಕಾಲ ನೀರಿನ ಸೇವೆಯಲ್ಲಿ ವ್ಯತ್ಯಯ ಆಗಲಿದೆ. ಅಂದು ಸಾರ್ವಜನಿಕರು ಸಹಕರಿಸುವಂತೆ ತಿಳಿಸಿದರು. ಈ ವೇಳೆ ನಗರಪಾಲಿಕೆ ಆಯುಕ್ತ ಲಕ್ಷ್ಮಿಕಾಂತರೆಡ್ಡಿ, ಉಪಮೇಯರ್ ಡಾ.ಜಿ.ರೂಪಾ ಮತ್ತಿತರರು ಇದ್ದರು.

ಎನ್.ಆರ್.ಕ್ಷೇತ್ರದಲ್ಲಿ ಸ್ಪರ್ಧಿಸುವಂತೆ ಸಿದ್ದರಾಮಯ್ಯರ ಆಹ್ವಾನಿಸಲು ಶಾಸಕ ತನ್ವೀರ್ ಸೇಠ್, ಕಾರ್ಪೊರೇಟರ್‌ಗಳು ನಿರ್ಧಾರ



ಮೈಸೂರು, ಮಾ.23–ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಯಾವ ಕ್ಷೇತ್ರದಲ್ಲಿ ಸ್ಪರ್ಧಿಸಲಿದ್ದಾರೆ ಎಂಬ ಗೊಂದಲ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಅವರನ್ನು ಮೈಸೂರಿನ ನರಸಿಂಹರಾಜ ಕ್ಷೇತ್ರದಲ್ಲಿ ಸ್ಪರ್ಧಿಸುವಂತೆ ಆಹ್ವಾನಿಸಲು ಮೈಸೂರಿನ ಎಲ್ಲಾ ಕಾಂಗ್ರೆಸ್ ಕಾರ್ಪೊರೇಟರ್‌ಗಳು ಮತ್ತು ಎನ್.ಆರ್.ಕ್ಷೇತ್ರದ ಶಾಸಕ ತನ್ವೀರ್ ಸೇಠ್ ನಿರ್ಧರಿಸಿದ್ದಾರೆ.

ಇಂದು ಬೆಳಗ್ಗೆ ಕಾಂಗ್ರೆಸ್‌ನ ಎಲ್ಲಾ ಕಾರ್ಪೊರೇಟರ್‌ಗಳು ಶಾಸಕ ತನ್ವೀರ್ ಸೇಠ್ ಅವರ ನಿವಾಸಕ್ಕೆ ತೆರಳಿ ಸಿದ್ದರಾಮಯ್ಯ ಮೈಸೂರು ಭಾಗದಲ್ಲೇ ಸ್ಪರ್ಧಿಸಬೇಕು ಎಂಬುದರ ಬಗ್ಗೆ ಚರ್ಚೆ ನಡೆಸಿದ್ದಾರೆ. ಈಗಾಗಲೇ ತಾವು ಆರೋಗ್ಯ ಕಾರಣದಿಂದಾಗಿ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ಎಐಸಿಸಿ ಮತ್ತು ಕೆಪಿಸಿಸಿಗೆ ಪತ್ರ ಬರೆದಿರುವ ಹಿನ್ನೆಲೆಯಲ್ಲಿ ಸಿದ್ದರಾಮಯ್ಯನವರನ್ನು ಎನ್.ಆರ್.ಕ್ಷೇತ್ರದಲ್ಲಿ ಸ್ಪರ್ಧಿಸುವಂತೆ ಆಹ್ವಾನಿಸೋಣ ಎಂಬ



ಕಾರ್ಪೊರೇಟರ್‌ಗಳ ಸಲಹೆಗೆ ಶಾಸಕ ತನ್ವೀರ್ ಸೇಠ್ ಒಪ್ಪಿಗೆ ಸೂಚಿಸಿದ್ದು, ಎಲ್ಲರೂ ಸಿದ್ದರಾಮಯ್ಯನವರ ಬಳಿ ನಿಯೋಗ ತೆರಳಿ ಆಹ್ವಾನಿಸೋಣ ಎಂದು ತೀರ್ಮಾನಿಸಲಾಗಿತ್ತು.

ಸಿದ್ದರಾಮಯ್ಯ ಅವರು ಇಂದು ಬೆಂಗಳೂರಿನಲ್ಲೇ ಇದ್ದಾರೆ. ನೆಲಮಂಗಲ ಕ್ಷೇತ್ರದ ಮಾಜಿ ಶಾಸಕ ಅಂಜನಾಮೂರ್ತಿ ನಿಧನ ಹೊಂದಿರುವುದರಿಂದ ಸಿದ್ದರಾಮಯ್ಯ ನೆಲಮಂಗಲಕ್ಕೆ ತೆರಳಿ ಬೆಂಗಳೂರಿಗೆ ಸಂಜೆ ವೇಳೆಗೆ ಹಿಂತಿರುಗಲಿರುವುದರಿಂದ ತನ್ವೀರ್ ಸೇಠ್ ನೇತೃತ್ವದ ನಿಯೋಗ ಸಂಜೆ ಬೆಂಗಳೂರಿಗೆ ತೆರಳಲು ತೀರ್ಮಾನಿಸಿ ಸಿದ್ದರಾಮಯ್ಯ ಅವರನ್ನು ಸಂಪರ್ಕಿಸಲಾಗಿ, ಅವರು ಯಾವುದೇ ನಿಯೋಗ ಬೆಂಗಳೂರಿಗೆ ಬರುವುದು ಬೇಡ. ಸದ್ಯದಲ್ಲೇ ತಾವೇ ಮೈಸೂರಿಗೆ ಬರಲಿದ್ದು, ಆ ವೇಳೆ ಚರ್ಚಿಸೋಣ ಎಂದು ಹೇಳಿದ ಕಾರಣ ಕಾಂಗ್ರೆಸ್ ನಿಯೋಗ ಬೆಂಗಳೂರಿಗೆ ತೆರಳುವ ಕಾರ್ಯಕ್ರಮವನ್ನು ಮುಂದೂಡಿದೆ.

ಈ ಸಂಬಂಧ ಮಾಧ್ಯಮದೊಂದಿಗೆ ಮಾತನಾಡಿದ ಶಾಸಕ ತನ್ವೀರ್ ಸೇಠ್, ಸಿದ್ದರಾಮಯ್ಯ ಅವರು ನರಸಿಂಹರಾಜ ಕ್ಷೇತ್ರದಲ್ಲೇ ಸ್ಪರ್ಧಿಸಲಿ ಎಂದು ಈ ಹಿಂದೆಯೂ ಕೂಡ ನಾನು ಹೇಳಿದ್ದೇನೆ. ಇಂದಿನ ರಾಜಕೀಯ ವಾತಾವರಣದಲ್ಲಿ ಎತ್ತರಕ್ಕೆ ಬೆಳೆದಿರುವ ನಾಯಕ, ಸಾಮಾಜಿಕ ಕಳಕಳಿಯಿಂದ ಎಲ್ಲಾ ಜಾತಿ–ಜನಾಂಗಗಳ ಏಳಿಗೆಗಾಗಿ ಉತ್ತಮ ಕಾರ್ಯಕ್ರಮಗಳನ್ನು ಕೊಟ್ಟ ಸಿದ್ದರಾಮಯ್ಯ ಅವರು ರಾಜ್ಯದ ಬೇರೆ ಭಾಗದಿಂದ ಸ್ಪರ್ಧಿಸುವುದು ಬೇಡ. ಮೈಸೂರಿನವರಾದ ಅವರು, ಮೈಸೂರು ಭಾಗದಲ್ಲೇ ಸ್ಪರ್ಧಿಸಬೇಕು ಎಂದು ಇಂದು ನಡೆದ ಕಾರ್ಪೊರೇಟರ್‌ಗಳು ಹಾಗೂ ಮುಖಂಡರ ಸಭೆಯಲ್ಲಿ ನಿರ್ಧರಿಸಿದ್ದೇವೆ. ಮೈಸೂರು ಜಿಲ್ಲೆಯ ಯಾವುದೇ ಕ್ಷೇತ್ರದಲ್ಲಾದರೂ ಸಿದ್ದರಾಮಯ್ಯ ಸ್ಪರ್ಧಿಸಲಿ ಎಂಬುದು ನಮ್ಮ ಆಸೆ. ಅದಕ್ಕಾಗಿ ಯಾರಾದರೂ ತ್ಯಾಗ ಮಾಡಲೇ ಬೇಕಲ್ಲಾ? ಹೀಗಾಗಿ ನರಸಿಂಹರಾಜ ಕ್ಷೇತ್ರದಲ್ಲಿ ಸ್ಪರ್ಧಿಸುವಂತೆ ಅವರಿಗೆ ಆಹ್ವಾನ ನೀಡಲು ನಿರ್ಧರಿಸಿದ್ದೇವೆ. ಅವರ ಭೇಟಿಗೆ ಸಮಯ ಕೇಳಿದ್ದೇವೆ. ಸಿದ್ದರಾಮಯ್ಯನವರು ಇಲ್ಲಿ ಸ್ಪರ್ಧಿಸಿದರೆ, ಅವರನ್ನು ಗೆಲ್ಲಿಸಿ ವಿಧಾನಸೌಧಗೆ ಕಳುಹಿಸುತ್ತೇವೆ ಎಂದು ತನ್ವೀರ್ ಸೇಠ್ ಹೇಳಿದರು.

ಇಬ್ರಾಹಿಂ ಸ್ಪರ್ಧೆ?



ಒಂದೆಡೆ ನರಸಿಂಹರಾಜ ಕ್ಷೇತ್ರದಲ್ಲಿ ಸ್ಪರ್ಧಿಸುವಂತೆ ಸಿದ್ದರಾಮಯ್ಯ ಅವರನ್ನು ಆಹ್ವಾನಿಸಲು ಅಲ್ಲಿನ ಶಾಸಕ ತನ್ವೀರ್ ಸೇಠ್ ಮತ್ತು ಕಾಂಗ್ರೆಸ್ ಕಾರ್ಪೊರೇಟರ್‌ಗಳು ನಿರ್ಧಾರ ಮಾಡಿದ್ದರೆ, ಮತ್ತೊಂದೆಡೆ ಸಿದ್ದರಾಮಯ್ಯ ಅವರಿಗೆ ಆಪ್ತರಾಗಿದ್ದ ಹಾಲಿ ಜೆಡಿಎಸ್‌ನ ರಾಜ್ಯಾಧ್ಯಕ್ಷ ರಾಗಿರುವ ಸಿ.ಎಂ.ಇಬ್ರಾಹಿಂ ನರಸಿಂಹರಾಜ ಕ್ಷೇತ್ರದಲ್ಲಿ ಸ್ಪರ್ಧಿಸಲು ನಿರ್ಧರಿಸಿದ್ದಾರೆ ಎಂದು ತಿಳಿದು ಬಂದಿದೆ. ಕಳೆದ ವಿಧಾನಸಭಾ ಚುನಾವಣೆ ಯಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಅಬ್ದುಲ್ಲಾ ಅವರೇ ಎನ್.ಆರ್. ಕ್ಷೇತ್ರದಲ್ಲಿ ಸಿ.ಎಂ.ಇಬ್ರಾಹಿಂ ಸ್ಪರ್ಧಿಸುತ್ತಾರೆ ಎಂದು ಹೇಳಿದ್ದಾರೆ. ಒಂದು ವೇಳೆ ನರಸಿಂಹರಾಜ ಕ್ಷೇತ್ರದಲ್ಲಿ ಸ್ಪರ್ಧಿಸಲು ಸಿದ್ದರಾಮಯ್ಯ ಅವರು ಒಪ್ಪಿಕೊಂಡರೆ ಈ ಕ್ಷೇತ್ರದಲ್ಲಿ ಆಪ್ತ ಮಿತ್ರರ ನಡುವಿನ ಸ್ಪರ್ಧೆ ಏರ್ಪಡಲಿದೆ.

ಮಾ.26, ನಾಲ್ಕು ಬೌದ್ಧ ಕೃತಿಗಳ ಬಿಡುಗಡೆ

ಮೂರು ದಿನ 'ಸಮಗ್ರ ಬುದ್ಧ ದರ್ಶನ' ಪುಸ್ತಕ ಪ್ರದರ್ಶನ



ಮೈಸೂರು,ಮಾ.23(ಪಿಎಂ)– ಸಪ್ತಸ್ವರ ಬಳಗ ಟ್ರಸ್ಟ್, ಸಂವಹನ ಪ್ರಕಾಶನ ಮತ್ತು ಮೈಸೂರು ವಿವಿ ಪದವಿ ಕಾಲೇಜುಗಳ ನಿವೃತ್ತ ಅಧ್ಯಾಪಕರ ಸಂಘದ ಸಂಯುಕ್ತಾಶ್ರಯದಲ್ಲಿ ಮಾ.26ರಂದು ಪ್ರೊ.ಎಸ್. ಶಿವಾಜಿ ಜೋಯಿಸ್ ಸಂಪಾದಕತ್ವದ ನಾಲ್ಕು ಬೌದ್ಧ ಕೃತಿಗಳ ಬಿಡುಗಡೆ ಸಮಾರಂಭ ಏರ್ಪಡಿಸಲಾಗಿದೆ ಎಂದು ಸಪ್ತಸ್ವರ ಬಳಗ ಟ್ರಸ್ಟ್‌ನ ಖಜಾಂಚಿ ಪ್ರೊ ಹೆಚ್.ಜಿ.ಕೃಷ್ಣಪ್ಪ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ಅಂದು ಸಂಜೆ 5ಕ್ಕೆ ಕೃತಿಗಳ ಬಿಡುಗಡೆ ಸಮಾರಂಭ ನಡೆಯಲಿದೆ. 'ಬುದ್ಧನ ಜೀವನ ಮತ್ತು ಬೋಧನೆ', 'ಬಿದರೆ ಅಶ್ವತ್ಥನಾರಾಯಣಶಾಸ್ತ್ರಿ ಅವರ ಬೌದ್ಧ ಕೃತಿಗಳು', 'ಧಮ್ಮಪದ ; ಬೌದ್ಧ ಭಿಕ್ಖು–ಬೌದ್ಧವಿದ್ವಾಂಸರ ದೃಷ್ಟಿಯಲ್ಲಿ' ಮತ್ತು 'ತಥಾಗತ ಬುದ್ಧ ತೋರಿದ ಧಮ್ಮಪದ' ನಾಲ್ಕು ಕೃತಿಗಳು ಬಿಡುಗಡೆಯಾಗಲಿವೆ ಎಂದರು.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನಿಧ್ಯದಲ್ಲಿ ಹಿರಿಯ ವಿದ್ವಾಂಸ ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿ ಸಮಾರಂಭದ ಅಧ್ಯಕ್ಷತೆ ವಹಿಸಿ, ಕೃತಿಗಳನ್ನೂ ಬಿಡುಗಡೆ ಮಾಡಲಿದ್ದಾರೆ. ಸಂಸದ ವಿ.ಶ್ರೀನಿವಾಸ ಪ್ರಸಾದ್, ವಿಶ್ವಮೈತ್ರಿ ಬುದ್ಧ ವಿಹಾರದ ಭಿಕ್ಖು ಡಾ.ಕಲ್ಯಾಣಸಿರಿ ಭಂತೇಜಿ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ವಿದ್ವಾಂಸ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ಕೃತಿಗಳನ್ನು ಕುರಿತು ಮಾತನಾಡಲಿದ್ದಾರೆ ಎಂದು ಹೇಳಿದರು.

ಇದೇ ವೇಳೆ ಶ್ರೀ ಪಂಚಾಕ್ಷರ ಗವಾಯಿಗಳವರ ಪುಣ್ಯಸ್ಮರಣೆಯ ಸಂಗೀತ ನೃತ್ಯೋತ್ಸವ ನಡೆಯಲಿದೆ. ಅಲ್ಲದೆ, ಬುದ್ಧನ ಜೀವನದ ಸಮಗ್ರ ಚಿತ್ರಣ ಕುರಿತು ಡಾ.ಕೃಪಾಫಡ್ಕೆ ಮತ್ತು ತಂಡದವರಿಂದ 'ಬುದ್ಧಂ ಶರಣಂ ಗಚ್ಛಾಮಿ' ಶೀರ್ಷಿಕೆಯ ನೃತ್ಯ ರೂಪಕ ನಡೆಯಲಿದೆ. ಮಾ.26ರಿಂದ 28ರವರೆಗೆ 3 ದಿನಗಳು ಬೆಳಗ್ಗೆ 11ರಿಂದ ಸಂಜೆ 7ರವರೆಗೆ ನೃಪತುಂಗ ಕನ್ನಡ ಶಾಲೆ ಆವರಣದಲ್ಲಿ 'ಒಂದು ಪ್ರದರ್ಶನ–ಸಮಗ್ರ ಬುದ್ಧದರ್ಶನ' ಶೀರ್ಷಿಕೆಯಡಿ ಪುಸ್ತಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಸಾವಿರ ಪುಸ್ತಕಗಳು ಪ್ರದರ್ಶನದಲ್ಲಿ ಇರಲಿದ್ದು, ಆಸಕ್ತ ಸಂಶೋಧಕರು ಇದರ ಪ್ರಯೋಜನ ಪಡೆಯಬಹುದು ಎಂದರು. ನಾಲ್ಕು ಬೌದ್ಧ ಕೃತಿಗಳ ಸಂಪಾದಕ ಪ್ರೊ.ಎಸ್.ಶಿವಾಜಿ ಜೋಯಿಸ್, ಸಂವಹನ ಪ್ರಕಾಶನದ ಡಿ.ಎನ್.ಲೋಕಪ್ಪ ಮೈಸೂರು ವಿವಿ ಪದವಿ ಕಾಲೇಜುಗಳ ನಿವೃತ್ತ ಅಧ್ಯಾಪಕರ ಸಂಘದ ಅಧ್ಯಕ್ಷ ಪ್ರೊ.ಪ್ರಭುಸ್ವಾಮಿ, ಹಿರಿಯ ನೃತ್ಯ ಕಲಾವಿದೆ ಡಾ.ಕೃಪಾಫಡ್ಕೆ ಗೋಷ್ಠಿಯಲ್ಲಿದ್ದರು.



ಇತ್ತೀಚೆಗೆ ನಿಧನರಾದ ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕಿನ ಮಾಜಿ ನಿರ್ದೇಶಕ ಚೌಹಳ್ಳಿ ಪುಟ್ಟಸ್ವಾಮಿ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಬ್ಯಾಂಕಿನ ಅಧ್ಯಕ್ಷ ಸಿ.ರೇವಣ್ಣ, ಉಪಾಧ್ಯಕ್ಷ ಹೆಚ್.ಹರೀಶ್‌ಕುಮಾರ್, ನಿರ್ದೇಶಕರಾದ ಆರ್.ರವಿಕುಮಾರ್(ರಾಜಕೀಯ), ಎಸ್‌ಬಿಎಂ ಮಂಜು, ಜೆ.ಯೋಗೇಶ್, ಕೆ.ಉಮಾಶಂಕರ್, ಎಸ್.ಸೋಮಣ್ಣ, ಎ.ಮಂಚಪ್ಪ, ಆರ್.ರವಿಕುಮಾರ್, ಪಿ.ಸವಿತಾ, ಸಿಇಓ ಹರ್ಷಿತ್, ಬ್ಯಾಂಕಿನ ಸದಸ್ಯರು ಹಾಗೂ ಸಿಬ್ಬಂದಿ ಸಂತಾಪ ಸೂಚಿಸಿದರು.

ಇಂದು ಗಣಕಯಂತ್ರ ಪ್ರಯೋಗಾಲಯಕ್ಕೆ ಚಾಲನೆ

ಮೈಸೂರು,ಮಾ.23–ಗೋಕುಲ್ ದಾಸ್ ಎಕ್ಸ್‌ಪೋರ್ಟ್ಸ್ ಚಾರಿಟಬಲ್ ಫೌಂಡೇಶನ್ ಮತ್ತು ಕಾರ್ನಿವಾಲ್ ಕ್ಲಾಥಿಂಗ್ ಕಂಪನಿ, ಬನ್ನಿಮಂಟಪ ಮೈಸೂರು ಇವರ ಸಂಯುಕ್ತಾಶ್ರಯದಲ್ಲಿ ಸಾಂಸ್ಥಿಕ ಸಾಮಾಜಿಕ ಹೊಣೆ ಗಾರಿಕೆ ಯೋಜನೆಯಡಿಯಲ್ಲಿ ಮಾ.24ರಂದು ಮಧ್ಯಾಹ್ನ 3 ಗಂಟೆಗೆ ರಾಜೇಂದ್ರ ನಗರದಲ್ಲಿರುವ ಸರ್ಕಾರಿ ಕರ್ನಾಟಕ ಪಬ್ಲಿಕ್ ಶಾಲೆ ಮತ್ತು ಕಾಲೇಜಿಗೆ ಸುಮಾರು 40 ಲಕ್ಷ ರೂ. ವೆಚ್ಚದ ಗಣಕಯಂತ್ರ ಪ್ರಯೋಗಾಲಯ, ಶಾಲಾ ಪೀಠೋಪಕರಣಗಳ ಕೊಡುಗೆ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ.

ಕಾಂಗ್ರೆಸ್‌ನ ಮಾಜಿ ಸಚಿವ ಅಂಜನಮೂರ್ತಿ ಇನ್ನಿಲ್ಲ



ಬೆಂಗಳೂರು, ಮಾ.23– ಕಾಂಗ್ರೆಸ್‌ನ ಮಾಜಿ ಸಚಿವ ಅಂಜನಮೂರ್ತಿ ಅವರು ಗುರುವಾರ ನಿಧನರಾದರು. ಅವರಿಗೆ 72 ವರ್ಷ ವಯಸ್ಸಾಗಿತ್ತು. ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲದ ಇಂದಿರಾನಗರ ನಿವಾಸಿಯಾದ ಅಂಜನಮೂರ್ತಿ, ಉಸಿರಾಟದ ಸಮಸ್ಯೆಯಿಂದ ಬಳಲುತ್ತಿದ್ದರು. ಮಾರ್ಚ್ 1993ರಲ್ಲಿ ಕರ್ನಾಟಕ ವಿಧಾನಸಭೆಯ ಉಪ ಸಭಾಪತಿಯಾಗಿ ಅವಿರೋಧವಾಗಿ ಆಯ್ಕೆಯಾಗಿದ್ದರು. 2005–06ರಲ್ಲಿ ವಸತಿ ಸಚಿವರಾಗಿದ್ದರು. ನವದೆಹಲಿಯಲ್ಲಿ ನಡೆದ 89 ಅಂತರ ಸಂಸದೀಯ ಸಮ್ಮೇಳನದಲ್ಲಿ ಭಾಗವಹಿಸಿದ್ದರು. 1994ರಲ್ಲಿ ಭುವನೇಶ್ವರದಲ್ಲಿ ನಡೆದ ಅಖಿಲ ಭಾರತ ಪೀಠಾಧಿಪತಿಗಳ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಶಿರೋಮಣಿ ಸಂಸ್ಥೆ, ನವದೆಹಲಿಯಿಂದ ಶಿರೋಮಣಿ ವಿಕಾಸ್ ಪ್ರಶಸ್ತಿ ನೀಡಿ ಅಂಜನ ಮೂರ್ತಿಯವರನ್ನು ಗೌರವಿಸಿತ್ತು. ಮಾನವ ಸೇವಾ ಪುರಸ್ಕಾರ, 1993ರಲ್ಲಿ ವಿಶೇಷ ಸ್ಕ್ರಾಲ್ ಆಫ್ ಆನರ್ ಸೇರಿದಂತೆ ಕೆಲವು ಗೌರವಗಳು ಸಿಕ್ಕಿವೆ.

ಎ.ಎಲ್.ಬಾಲಕೃಷ್ಣಸ್ವಾಮಿ



ಮೈಸೂರು, ಮಾ.23–ಮೈಸೂರಿನ ವಿನಾಯಕನಗರದ ನಿವಾಸಿ ಎ.ಎಲ್.ಬಾಲಕೃಷ್ಣ ಸ್ವಾಮಿ(65) ಗುರುವಾರ ನಿಧನರಾದರು. ಮೃತರು ಪತ್ನಿ, ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ವಿನಾಯಕನಗರದ ಅವರ ನಿವಾಸದಲ್ಲಿ ಶುಕ್ರವಾರ ಬೆಳಗ್ಗೆ 11.30ರವರೆಗೂ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದ್ದು, ಮೃತರ ಇಚ್ಛೆಯಂತೆ ಅವರ ದೇಹವನ್ನು ಚಾಮರಾಜನಗರ ಮೆಡಿಕಲ್ ಕಾಲೇಜಿಗೆ ದಾನ ಮಾಡಲಿದ್ದೇವೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಮೈಸೂರಿನ ಬೋಗಾದಿ 2ನೇ ಹಂತದ ದುರ್ಗಾ ಗ್ರೂಪ್ ಸ್ನೇಹಿತರ ವತಿಯಿಂದ ಜೆಡಿಎಸ್ ಮುಖಂಡ, ಗ್ರಾಪಂ ಮಾಜಿ ಸದಸ್ಯರೂ ಆದ ಟಿಎಪಿಸಿಎಂಎಸ್ ಮಾಜಿ ನಿರ್ದೇಶಕ ಕೆ.ಚಂದ್ರಶೇಖರ್ ಅವರ ಹುಟ್ಟುಹಬ್ಬವನ್ನು ಕೇಕ್ ಕತ್ತರಿಸಿ, ಸಿಹಿ ವಿತರಿಸುವ ಮೂಲಕ ಸಂಭ್ರಮದಿಂದ ಆಚರಿಸಲಾಯಿತು. ಈ ವೇಳೆ ಮುಖಂಡರಾದ ಸುರೇಶ್, ಸಿದ್ದರಾಜು, ಆನಂದ್, ರಾಜಣ್ಣ, ರವಿ, ಸಂಬೇಗೌಡ, ಶಿವು, ಸ್ವಾಮಿ, ಮಂಜು, ಟೆಂಟ್ ರವಿ, ಮಹೇಶ್, ವೆಂಕಟೇಶ್, ಗುರು ಉಪಸ್ಥಿತರಿದ್ದರು.



ಮೈಸೂರು ವಿವಿ ನೂತನ ಕುಲಪತಿಯಾಗಿ ಅಧಿಕಾರ ವಹಿಸಿಕೊಂಡ ಪ್ರೊ.ಲೋಕನಾಥ್ ಅವರನ್ನು ಮೈಸೂರು ವಿಜಯನಗರದ ಯೋಗಾನರಸಿಂಹಸ್ವಾಮಿ ದೇವಾಲಯದ ಶ್ರೀನಿವಾಸ ಸ್ವಾಮೀಜಿ ಗುರುವಾರ ಅವರ ಕಚೇರಿಯಲ್ಲಿ ಆತ್ಮೀಯವಾಗಿ ಅಭಿನಂದಿಸಿದರು.

ಪಿಎಚ್.ಡಿ ಪದವಿ



ಮೈಸೂರು, ಮಾ. 23– ಕನ್ನಡ ವಿಷಯದಲ್ಲಿ ಸಂಶೋಧನೆ ನಡೆಸಿ ಶ್ರೀಮತಿ ಕೃತಿ ಜಯಕುಮಾರ್ ಮಂಡಿಸಿದ 'ಶ್ರೀ ರಾಮಾಯಣ ಮಹಾನ್ವೇಷಣಂ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ನೆಲೆಗಳು' ಮಹಾಪ್ರಬಂಧವನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗಾಗಿ ಅಂಗೀಕರಿಸಿದೆ. ಇವರು ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ನಿವೃತ್ತ ಪ್ರಾಧ್ಯಾಪಕ ಡಾ.ಡಿ.ಟಿ.ಬಸವರಾಜ್ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿದ್ದರು.

ಭಗತ್ ಸಿಂಗ್, ರಾಜಗುರು, ಸುಖದೇವ್ ಸ್ಮರಣಾರ್ಥ ಪಂಜಿನ ಮೆರವಣಿಗೆ



ಮೈಸೂರು, ಮಾ.23(ಜಿಎ)–ಭಗತ್ ಸಿಂಗ್, ರಾಜಗುರು ಮತ್ತು ಸುಖದೇವ್ ಸ್ಮರಣಾರ್ಥ ರಾಷ್ಟ್ರೀಯ ಹಿಂದೂ ಸಮಿತಿ ವತಿಯಿಂದ ನಗರದ ಚಾಮುಂಡಿಪುರಂ ವೃತ್ತದಿಂದ ರಾಮಲಿಂಗೇಶ್ವರ ದೇವಸ್ಥಾನದವರೆಗೆ ಗುರುವಾರ ರಾತ್ರಿ ಪಂಜಿನ ಮೆರವಣಿಗೆ ನಡೆಯಿತು.


ಈ ವೇಳೆ ಮುಡಾ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್ ಮಾತನಾಡಿ, ಭಗತ್ ಸಿಂಗ್ ಅವರು ತಮ್ಮ ಚಿಕ್ಕ ವಯಸ್ಸಿನಲ್ಲಿಯೇ ರಾಷ್ಟ್ರ ಪ್ರೇಮ ಮತ್ತು ಸ್ವಾತಂತ್ರ್ಯದ ಕಿಚ್ಚನ್ನು ಹೊಂದಿದರು. ಇಂತಹ ವ್ಯಕ್ತಿಗಳ ನೆನೆಯುವ ಜವಾಬ್ದಾರಿ ಪ್ರತಿಯೊಬ್ಬ ಯುವಕರದ್ದು. ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಭಗತ್ ಸಿಂಗ್, ಸುಖದೇವ್ ಮತ್ತು ರಾಜಗುರು ಅವರದ್ದು ಅತ್ಯಂತ ದೊಡ್ಡ ಪಾತ್ರವಾಗಿತ್ತು ಎಂದರು.

ಮೆರವಣಿಗೆಯಲ್ಲಿ ರಾಷ್ಟ್ರೀಯ ಹಿಂದೂ ಸಮಿತಿ ಅಧ್ಯಕ್ಷ ವಿಕಾಸ್ ಶಾಸ್ತ್ರಿ, ಬಿಜೆಪಿ ಮುಖಂಡರಾದ ಜೋಗಿ ಮಂಜು, ಜಯಸಿಂಹ ಶ್ರೀಧರ್, ರಾಷ್ಟ್ರೀಯ ಹಿಂದೂ ಪದಾಧಿಕಾರಿಗಳಾದ ಸೆಂದಿಲ್ ಕುಮಾರ್, ಪ್ರಜೀಶ್, ಶ್ರೀಧರ್,ತೇಜಸ್, ಪ್ರದೀಪ್, ಮಧು, ಪ್ರಶಾಂತ್ ಭಾಗಿಯಾಗಿದ್ದರು.



ಮೈಸೂರಿನ ರೈಲ್ವೆ ಮ್ಯೂಸಿಯಂ ಬಳಿಯಿರುವ ಅಂಬೇಡ್ಕರ್ ಪೌರಕಾರ್ಮಿಕರ ಕಾಲೋನಿಯಲ್ಲಿ ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡ, ಮನೆ ಮನೆಗೆ ತೆರಳಿ ಬೇವು, ಬೆಲ್ಲ, ಹೋಳಿಗೆ ನೀಡಿ, ಯುಗಾದಿ ಹಬ್ಬದ ಶುಭಾಶಯ ತಿಳಿಸಿದರು. ಈ ವೇಳೆ ಗುರುರಾಜ್, ಯೋಗೇಶ್‌ಕುಮಾರ್, ಆನಂದ್, ಸಂತೋಷ್, ಶಿವಕುಮಾರ್, ನವೀನ್, ರವಿಚಂದ್ರನ್, ಲೋಕೇಶ್, ಮಂಜು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

24.3.2023 ಶುಕ್ರವಾರ, ಮಳೆ ನಕ್ಷತ್ರ: ಉತ್ತರಭಾದ್ರ, 18.03.2023ರಿಂದ 30.03.2023
ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಅಶ್ವಿನಿ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಇಂಜಿನಿಯರಿಂಗ್ ವಿದ್ಯಾವಿಕಾಸ, ಪ್ರಾಯೋಜಕರು– ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜ್, ಮೈಸೂರು, 6.40 ಅರಿವಿನ ಶಿಖರ, ಗಾಯನ – ಕೆ.ಟಿ.ಉದಯಕಿರಣ್, ಅಂಬಯ್ಯನುಲಿ, ಪಿ.ಎಸ್.ರಂಜನಿ, ವ್ಯಾಖ್ಯಾನ– ಕೆ.ಎಲ್. ಪದ್ಮಿನಿ, 7.15 ಪ್ರಾಯೋಜಿತ ಕಾರ್ಯಕ್ರಮ "ಸಮಗ್ರ ಶಿಕ್ಷಣ ಸಂಚಲನ", 9.00 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 9.30 ಗಾಂಧೀ ಸ್ಮೃತಿ, 10.00 ಎಂ.ರಾಘವೇಂದ್ರ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ, 12.45 ಕಾದಂಬರಿ ವಿಹಾರ–ಡಾ.ಎಸ್.ಎಲ್. ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ–ಉಮೇಶ್ ಎಸ್.ಎಸ್., 1.20 ಭಾವಗೀತೆ– ಪಿ.ಎಸ್. ವಸಂತಾ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ. ರವೀಂದ್ರಕುಮಾರ್, 3.00 ಮೌನದಾಚೆಯ ಬೆಳಕು–ಸದಾಶಿವ ಬ್ರಹ್ಮೇಂದ್ರರ ಜೀವನ ಹಾಗೂ ರಚನೆಗಳನ್ನಾಧರಿಸಿದ ವಿಶೇಷ ಕಾರ್ಯಕ್ರಮ ಸರಣಿ, 4.00 ಮಹಿಳಾರಂಗ–"ಕೈ ಗನ್ನಡಿ" ತಿಂಗಳ ಸಿಂಚಕೆ ಕಾರ್ಯಕ್ರಮ, ಪ್ರಸ್ತುತಿ– ನಿಶಿತಾ ಕೃಷ್ಣಮೂರ್ತಿ, 4.30 ವೃತ್ತಿ ಮಾರ್ಗದರ್ಶನ–ಯುವಜನರಿಗೆ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತಾ ತರಬೇತಿ ಕುರಿತು ಸಿ. ಜಗನ್ನಾಥ್ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಕಿಸಾನ್‌ವಾಣಿ, ಕೋಳಿ ಸಾಕಾಣಿಕೆ ಹಾಗೂ ಸಮಗ್ರ ಕೃಷಿ ಕುರಿತು ಕೃಷಿಕ ಬಂಗಾರು ಅವರೊಂದಿಗೆ ಸಂದರ್ಶನ, ಸಂದರ್ಶಕರು– ಎಸ್.ಸಿ.ಹೇಮಕುಮಾರ್, 8.00 ಸಂಧ್ಯಾರಾಗ– ಸಂಶೋಧನಾ ಹಾಗೂ ಲೇಖಕ ದಂಪತಿ ಡಾ.ಗಿರಿಜಾಶಾಸ್ತ್ರಿ ಹಾಗೂ ಡಾ. ರಘುಪತಿ ಅವರೊಂದಿಗೆ ಸಂದರ್ಶನ. ಸಂದರ್ಶಕರು– ಅಬ್ದುಲ್ ರಶೀದ್, 9.15 ಜನಪದ ಸಂಗೀತ–ಶಿವಬುದ್ಧಿ ಮತ್ತು ತಂಡ, 10.00 ವಾದ್ಯವೃಂದ, ನಿರ್ದೇಶನ– ಡಾ.ಆರ್.ಎನ್.ಶ್ರೀಲತಾ, 10.30 ಸವಿನೆನಪು

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್ :** 14ನೇ ವರ್ಷದ ವಸಂತ ನವರಾತ್ರಿ ಮಹೋತ್ಸವ, ಬೆಳಗ್ಗೆ 8.30 ರಿಂದ ಮಹಾಭಿಷೇಕ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀಚಕ್ರಾರ್ಚನೆ, ಸಂಜೆ 5.30ಕ್ಕೆ ಶ್ರೀ ಮಹಾಪ್ರತ್ಯಂಗೀರ ಹೋಮ, ಸ್ಥಳ: ತ್ರಯೀನ್ಯಾಸ್, ಜಯಲಕ್ಷ್ಮೀಪುರಂ.

■ **ಮರಿಮಲ್ಲಪ್ಪನವರ ಪ್ರೌಢಶಾಲೆ:** ವಿದ್ಯಾರ್ಥಿಗಳ ಬೀಳ್ಕೊಡುಗೆ ಮತ್ತು ಶಾಲಾ ವಾರ್ಷಿಕ ಸಂಚಿಕೆ ಬಿಡುಗಡೆ ಸಮಾರಂಭ, ಅಧ್ಯಕ್ಷತೆ: ಗೌರವ ಕಾರ್ಯದರ್ಶಿ ಪ್ರೊ. ಕೆ.ಎನ್.ಪಂಚಾಕ್ಷರಸ್ವಾಮಿ, ಮುಖ್ಯ ಅತಿಥಿಗಳು: ಪ್ರಕಾಶಕ ಸಂಸ್ಕೃತಿ ಸುಬ್ರಹ್ಮಣ್ಯ, ಎಸ್.ಮಮತಾ, ಹೆಚ್.ಎಸ್.ಮಹೇಶ್, ಸ್ಥಳ: ಶಾಲೆ ಆವರಣ, ಬೆಳಗ್ಗೆ 10ಕ್ಕೆ.

■ **ಶ್ರೀ ನಟರಾಜ ನರ್ಸಿಂಗ್ ಸ್ಕೂಲ್ :** ಪ್ರತಿಜ್ಞಾವಿಧಿ ಸ್ವೀಕಾರ ಸಮಾರಂಭ, ಸಾನ್ನಿಧ್ಯ : ಶ್ರೀ ಚಿದಾನಂದ ಸ್ವಾಮೀಜಿ, ಉಪಸ್ಥಿತರು : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ತಾಲೂಕು ಆರೋಗ್ಯಾಧಿಕಾರಿ ಡಾ. ಟಿ. ರಾಜೇಶ್ವರಿ, ಸ್ಥಳ: ನಟರಾಜ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಬ್ರದರ್ಸ್ ಎಂಟರ್‌ಟೈನ್‌ಮೆಂಟ್, ಮೈಸೂರು ವಿವಿ ಸಂಶೋಧಕರ ಸಂಘ, ದಲಿತ ವಿದ್ಯಾರ್ಥಿ ಒಕ್ಕೂಟ:** ರಾಮ–ರಹೀಮ (ಈಶ್ವರ ಅಲ್ಲಾ ನೀನೆ ಎಲ್ಲಾ..!) ಕಿರುಚಿತ್ರ ಬಿಡುಗಡೆ ಮತ್ತು ವಿಚಾರ ಸಂಕಿರಣ, ಅಧ್ಯಕ್ಷತೆ : ಜಿಲ್ಲಾ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ಕೆ. ದೀಪಕ್, ಮುಖ್ಯ ಅತಿಥಿಗಳು : ಫಾ. ಪಿ.ಜೆ. ಸೆಬಾಸ್ಟಿಯನ್, ಶ್ರೀ ಚಿದಾನಂದ ಸ್ವಾಮೀಜಿ, ಡಾ. ಕಲ್ಯಾಣಸಿರಿ ಬಂತೇಜಿ, ಮೌಲಾನಾ ಸೂಫಿ ನೂರಿ ಬಾಬಾ, ಸ್ಥಳ: ಇಎಂಎಂಆರ್‌ಸಿ ಸಭಾಂಗಣ, ಮೈಸೂರು ವಿವಿ, ಬೆಳಗ್ಗೆ 10.30ಕ್ಕೆ.

■ **ಸಾರ್ವಜನಿಕ ಗ್ರಂಥಾಲಯ ಇಲಾಖೆ, ನಗರ ಕೇಂದ್ರ ಗ್ರಂಥಾಲಯ, ಕುವೆಂಪುನಗರ ಶಾಖಾ ಗ್ರಂಥಾಲಯ** : ಅಜಾದಿ ಕಾ ಅಮೃತ ಮಹೋತ್ಸವ ಕಾರ್ಯಕ್ರಮ, ಉದ್ಘಾಟನೆ : ಮೇಯರ್ ಶಿವಕುಮಾರ್, ಅಧ್ಯಕ್ಷತೆ : ನಗರ ಕೇಂದ್ರ ಗ್ರಂಥಾಲಯ ಉಪನಿರ್ದೇಶಕ ಬಿ. ಮಂಜುನಾಥ್, ಮುಖ್ಯ ಅತಿಥಿಗಳು : ಎಸ್.ಕೆ. ಗಣೇಶ್, ಎ.ಜಿ. ದೇವರಾಜು, ಸ್ಥಳ: ನಗರ ಕೇಂದ್ರ ಗ್ರಂಥಾಲಯ, ಕುವೆಂಪುನಗರ ಶಾಖೆ, ಬೆಳಗ್ಗೆ 11ಕ್ಕೆ.

■ **ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಮತ್ತು ಜಿಲ್ಲಾ ಘಟಕ :** ಶಕುಂತಲ ಜಯದೇವ ಶರಣ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಅಪ್ಪಾರಾವ್ ಅಕ್ಕೋಣೆ, ಉದ್ಘಾಟನೆ: ಚೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಜಯವಿಭವಸ್ವಾಮಿ, ಮುಖ್ಯ ಅತಿಥಿಗಳು: ಕರ್ನಾಟಕ ಪೊಲೀಸ್ ಟ್ರೈನಿಂಗ್ ಸ್ಕೂಲ್ ಪ್ರಾಂಶುಪಾಲರಾದ ಎಂ.ಎಸ್.ಗೀತಾ ಪ್ರಸನ್ನ, ಅಭಿನಂದನಾ ನುಡಿ: ಸಾಹಿತಿ ಡಾ.ಸಿ.ನಾಗಣ್ಣ, ಪ್ರಶಸ್ತಿ ಪುರಸ್ಕೃತರು: ಸಾಹಿತಿ ಡಾ.ಚಂದ್ರಶೇಖರಯ್ಯ, ಸಮಾಜ ಸೇವಕರಾದ ಶ್ರೀಮತಿ ಮಲ್ಲಿಕಾ ಮಳವಳ್ಳಿ, ಉಪಸ್ಥಿತರು: ಶ್ರೀಮತಿ ಶಕುಂತಲ ಜಯದೇವ, ಸ್ಥಳ: ಶ್ರೀ ರಾಜೇಂದ್ರ ಭವನ, ಜೆಎಸ್‌ಎಸ್ ಆಸ್ಪತ್ರೆ ಆವರಣ, ಸಂಜೆ 5ಕ್ಕೆ.

■ **ಮೈಸೂರು ಅರಮನೆ ಮಂಡಳಿ:** ಯುಗಾದಿ ಸಂಗೀತೋತ್ಸವ, ಸಂಜೆ 6ರಿಂದ ಪೊಲೀಸ್ ಇಲಾಖೆ ವತಿಯಿಂದ ಆಂಗ್ಲ ಬ್ಯಾಂಡ್ ಕಾರ್ಯಕ್ರಮ, ಸಂಜೆ 7ರಿಂದ ಶ್ರೀ ವಾಸುಕೀ ವೈಭವ್ ಮತ್ತು ತಂಡದವರಿಂದ ಸಂಗೀತ ಸಂಜೆ ಕಾರ್ಯಕ್ರಮ, ಸ್ಥಳ: ಮೈಸೂರು ಅರಮನೆ ಆವರಣ, ಸಂಜೆ 5.30ಕ್ಕೆ.

■ **ಎಟಿಎಂಇ ಕಾಲೇಜ್ ಆಫ್ ಇಂಜಿನಿಯರಿಂಗ್ ಕಾಲೇಜು :** ಕಾಲೇಜು ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು : ತನಿಷ್ಕಾಮೂರ್ತಿ, ವಲಯ ಅರಣ್ಯಾಧಿಕಾರಿ ಅಶೋಕ್ ಪರಮಾನಂದ್, ಅಧ್ಯಕ್ಷತೆ : ಕಾಲೇಜು ಅಧ್ಯಕ್ಷ ಎಲ್. ಅರುಣ್ ಕುಮಾರ್, ಸ್ಥಳ: ಎಟಿಎಂಇ ಕಾಲೇಜು ಆವರಣ, ಸಂಜೆ 5.30 ರಿಂದ.

■ **ಭಾರತೀ ಸ್ತ್ರೀ ಸಮಾಜ ಸಾಂಸ್ಕೃತಿಕ ಮತ್ತು ಚಾರಿಟೆಬಲ್ ವಿಶ್ವಸ್ಥ ಮಂಡಳಿ :** ಶ್ರೀರಾಮೋತ್ಸವದ ಅಂಗವಾಗಿ ಸಂಗೀತ ಕಛೇರಿ, ಸಾಂಸ್ಕೃತಿಕ ಕಾರ್ಯಕ್ರಮ, ಡಾ. ಬಿ.ಎನ್. ವಿಜಯೇಂದ್ರಾಚಾರ್ಯ ಅವರಿಂದ ಪ್ರವಚನ, ಸ್ಥಳ: ಸಮಾಜದ ಆವರಣ, ಸಂಜೆ 6ಕ್ಕೆ.

■ **ಗಾನಭಾರತೀ :** ವೈಣಿಕ ವಿದ್ವಾನ್ ಎಂ.ಜೆ. ಶ್ರೀನಿವಾಸ ಅಯ್ಯಂಗಾರ್ ಅವರ ಸ್ಮರಣಾರ್ಥ ವೀಣಾಗಾನ ನವೋಲ್ಲಾಸ, ಡಾ. ಶೋಭನಾ ಸ್ವಾಮಿನಾಥನ್–ವೀಣೆ, ವಿದ್ವಾನ್ ತುಮಕೂರು ಬಿ. ರವಿಶಂಕರ್–ಮೃದಂಗ, ವಿದ್ವಾನ್ ಶಶಿಶಂಕರ್–ಘಟ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ

■ **ಎ.ವಿ. ಆಸ್ಪತ್ರೆ :** ಉಚಿತ ತಪಾಸಣಾ ಮತ್ತು ಸಲಹಾ ಶಿಬಿರ, ಸ್ಥಳ: ಎ.ವಿ. ಆಸ್ಪತ್ರೆ ಆವರಣ, ಸಿದ್ಧಾರ್ಥನಗರ, ಸಂಜೆ 6 ರಿಂದ.

■ **ಶ್ರೀ ಕಾಶೀಮಠದ ಶ್ರೀರಾಮಮಂದಿರ :** ವಿಶೇಷ ಉತ್ಸವಗಳು, ಶ್ರೀ ಗುರುದೇವ ಸನ್ನಿಧಿ ಚಿನ್ಮಯ ಮಿಷನ್ ಅವರಿಂದ ಭಜನಾ ಕಾರ್ಯಕ್ರಮ, ಸ್ಥಳ: ಶ್ರೀರಾಮಮಂದಿರ, ಶ್ರೀರಾಮಪೇಟೆ, ಸಂಜೆ 6.15 ರಿಂದ.

■ **ಶ್ರೀ ರಾಮಸೇವಾ ಮಂಡಳಿ ಚಾರಿಟೆಬಲ್ ಟ್ರಸ್ಟ್, ಮೈಸೂರು ಉತ್ತರ :** ಶ್ರೀ ರಾಮನವಮಿ ಸಂಗೀತೋತ್ಸವ, ವಿದ್ವಾನ್ ಹರೀಶ್ ಪಾಂಡವ ಅವರಿಂದ ಸ್ಯಾಕ್ಸೋಫೋನ್ ವಾದನ, ವಿದ್ವಾನ್ ಕೇಶವ ಮೋಹನ್‌ಕುಮಾರ್ –ಪಿಟೀಲು, ವಿದ್ವಾನ್ ಬಿ.ಎಸ್. ಪ್ರಶಾಂತ್–ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟ, ಸ್ಥಳ: ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ವಿ.ವಿ. ಮೊಹಲ್ಲಾ, ಸಂಜೆ 6.15ರಿಂದ.

■ **ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ :** ಮೈಸೂರು ರಂಗ ಹಬ್ಬ, ದೇಸಿ ಕ್ರಿಯೇಷನ್ ಅಭಿನಯಿಸುವ ನಮ್ಮ ನಿಮ್ಮೊಳಗೊಬ್ಬ ನಾಟಕ ಪ್ರದರ್ಶನ, ರಚನೆ : ರಾಜೇಂದ್ರ ಕಾರಂತರ, ನಿರ್ದೇಶನ : ಪಿ. ಶ್ರೇಯಸ್, ಸ್ಥಳ: ಕಿರು ರಂಗಮಂದಿರ, ಸಂಜೆ 6.30ಕ್ಕೆ.

■ **ಗಣಪತಿ ಸೇವಾ ಮಂಡಳಿ ಟ್ರಸ್ಟ್:** ಶ್ರೀ ರಾಮನವಮಿ ಕಾರ್ಯಕ್ರಮಗಳು, ಸಂಜೆ 6ರಿಂದ ಯಶಸ್ವಿನಿ ಭಜನಾ ಮಂಡಲಿ ತಂಡದವರಿಂದ ಭಜನೆ, ಸಂಜೆ 6.30ರಿಂದ ಪದ್ಮನಾಭರಾವ್ ಅವರಿಂದ ದಾಸರ ಪದಗಳು, ಸ್ಥಳ: ರಜತ್ ಸಭಾ ಮಂಟಪ, ಗಣಪತಿ ದೇವಸ್ಥಾನ ಐ–ಬ್ಲಾಕ್, ರಾಮಕೃಷ್ಣನಗರ.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಮಾರ್ಚ್ 24 ಶುಕ್ರವಾರ 2023

ಸಂಪುಟ: 43 | ಸಂಚಿಕೆ: 333 | ಪುಟಗಳು: 12

₹4

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



18 ವರ್ಷದೊಳಗಿನ ಮಕ್ಕಳಿಂದ ಪ್ರಚಾರ ನಿಷಿದ್ಧ

ಮೈಸೂರು,ಮಾ.23– 2023ರ ಸಾರ್ವತ್ರಿಕ ಚುನಾವಣಾ ಸಂದರ್ಭದಲ್ಲಿ ಚುನಾವಣಾ ಪ್ರಚಾರ ಕಾರ್ಯಕ್ಕೆ 18 ವರ್ಷದೊಳಗಿನ ಮಕ್ಕಳನ್ನು ಬಳಸಿಕೊಳ್ಳುವುದನ್ನು ನಿಷೇಧಿಸಲಾಗಿದೆ.

ಭಾರತ ಸರ್ಕಾರ ಹಾಗೂ ವಿಶ್ವಸಂಸ್ಥೆಯು ಅನುಮೋದಿತ ಮಕ್ಕಳ ಹಕ್ಕುಗಳ ಒಡಂಬಡಿಕೆಗೆ 1992ರ ಡಿ.11 ರಂದು ಒಪ್ಪಿ ಅನುಮೋದಿಸಿದ್ದು, ಈ ಮಕ್ಕಳ ಹಕ್ಕುಗಳ ಒಡಂಬಡಿಕೆ ಹಾಗೂ ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ ಕಾಯ್ದೆ) 2015ರ ಅನ್ವಯ 18 ವರ್ಷದೊಳಗಿನ ಎಲ್ಲರೂ ಮಕ್ಕಳು ಎಂದು ಪರಿಗಣಿತವಾಗಿದೆ. ಮಕ್ಕಳ ಹಕ್ಕುಗಳ ಒಡಂಬಡಿಕೆಯ ಕಲಂ 32 ಮತ್ತು 36 ರಲ್ಲಿ ಮಕ್ಕಳ ಆರೋಗ್ಯ ಮತ್ತು ಶಿಕ್ಷಣಕ್ಕೆ ಅಪಾಯಕಾರಿಯಾದ ಕ್ಷೇತ್ರಗಳಲ್ಲಿ ಮಕ್ಕಳು ಕಾರ್ಯನಿರ್ವಹಿಸದಂತೆ ಹಾಗೂ ಮಕ್ಕಳ ಬೆಳವಣಿಗೆಗೆ ತೊಡಕನ್ನುಂಟು ಮಾಡುವ ಯಾವುದೇ ಚಟುವಟಿಕೆಗಳಲ್ಲಿ ಭಾಗವಹಿಸದಂತೆ ಸೂಕ್ತಕ್ರಮಗಳನ್ನು ಕೈಗೊಳ್ಳಲು ನಿರ್ದೇಶಿಸಿದೆ. ರಾಷ್ಟ್ರೀಯ ಮಕ್ಕಳ ಹಕ್ಕುಗಳ ಆಯೋಗವೂ ಚುನಾವಣಾ ಕಾರ್ಯಗಳಲ್ಲಿ ಯಾವುದೇ ಪಕ್ಷಗಳು 18 ವರ್ಷದೊಳಗಿನ ಮಕ್ಕಳನ್ನು ಬಳಸಿಕೊಳ್ಳದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಕೋರಿದೆ.


ಪಂಚಮಸಾಲಿ, ಒಕ್ಕಲಿಗರ ಮೀಸಲಾತಿ ಸಂಬಂಧ

ಇಂದು ಸರ್ಕಾರದ ಮಹತ್ವದ ತೀರ್ಮಾನ

- 'ಯಥಾಸ್ಥಿತಿ' ಕಾಯ್ದುಕೊಳ್ಳುವ ಆದೇಶ ತೆರವುಗೊಳಿಸಿ ಹೈಕೋರ್ಟ್ ಮಧ್ಯಂತರ ಆದೇಶ
- ಕೋರ್ಟ್‌ನ ನಿರ್ಣಯ ಕಾದು ಗುರುವಾರ ನಡೆಯಬೇಕಿದ್ದ ಸಂಪುಟ ಸಭೆ ಶುಕ್ರವಾರಕ್ಕೆ ಮುಂದೂಡಿಕೆ
- 2ಎ ಪ್ರವರ್ಗಕ್ಕೆ ಯಾವುದೇ ಧಕ್ಕೆ ಆಗದಂತೆ ತೀರ್ಮಾನ; ಕೋರ್ಟ್‌ಗೆ ಸರ್ಕಾರ ಭರವಸೆ

ಬೆಂಗಳೂರು, ಮಾ.23(ಕೆಎಂಶಿ)–ವಿಧಾನಸಭಾ ಚುನಾವಣೆ ಸಮೀಪಿಸುತ್ತಿದ್ದಂತೆ ಪಂಚಮಸಾಲಿ ಹಾಗೂ ಒಕ್ಕಲಿಗ ಸಮುದಾಯಕ್ಕೆ ಮೀಸಲಾತಿ ಕಲ್ಪಿಸುವ, ಹೆಚ್ಚಳ ಮಾಡುವ ಸಂಬಂಧ ರಾಜ್ಯ ಸರ್ಕಾರ ನಾಳೆ ಮಹತ್ವದ ತೀರ್ಮಾನ ಕೈಗೊಳ್ಳಲಿದೆ.

ಹಿಂದುಳಿದ ವರ್ಗದ ಆಯೋಗ ಮೀಸಲಾತಿಗೆ ಸಂಬಂಧಿಸಿದಂತೆ ಮಧ್ಯಂತರ ವರದಿ ನೀಡಿದ ಬೆನ್ನಲ್ಲೇ ಈ ವರ್ಗಗಳಿಗೆ ಶೈಕ್ಷಣಿಕ ಹಾಗೂ ಉದ್ಯೋಗದಲ್ಲಿ ಮೀಸಲಾತಿ ಕಲ್ಪಿಸುವ ಸಂಬಂಧ ತೀರ್ಮಾನ ಕೈಗೊಳ್ಳಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಾಳೆ ಸಂಜೆ ಸಂಪುಟ ಸಭೆ ಕರೆದಿದ್ದಾರೆ. ನ್ಯಾಯಾಲಯದಲ್ಲಿ ಮೀಸಲಾತಿಗೆ ಸಂಬಂಧಿಸಿದಂತೆ ಅರ್ಜಿ ವಿಚಾರಣೆ ಇದ್ದ ಕಾರಣ ಇಂದು (ಗುರುವಾರ) ನಡೆಯಬೇಕಿದ್ದ ಸಂಪುಟ ಸಭೆಯನ್ನು ನಾಳೆ (ಶುಕ್ರವಾರ) ಸಂಜೆಗೆ ಮುಂದೂಡಿದ್ದರು.





ಈ ಮಧ್ಯೆ ಪಂಚಮಸಾಲಿ ಲಿಂಗಾಯತ ಉಪ ಜಾತಿಗೆ ಪ್ರವರ್ಗ 2ಎ ಅಡಿಯಲ್ಲಿ ಮೀಸಲಾತಿ ನೀಡುವ ಪ್ರಕ್ರಿಯೆ ಸಂಬಂಧ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ನೀಡಿದ್ದ ಮಧ್ಯಂತರ ಆದೇಶವನ್ನು ಹೈಕೋರ್ಟ್ ತೆರವುಗೊಳಿಸಿದೆ.

ಪಂಚಮಸಾಲಿ ಲಿಂಗಾಯತ ಉಪ ಜಾತಿಗೆ ಪ್ರವರ್ಗ 2ಎ ಅಡಿ ಮೀಸಲಾತಿ ನೀಡುವ ಸಂಬಂಧದ ಸರ್ಕಾರದ ಪ್ರಕ್ರಿಯೆ ಪ್ರಶ್ನಿಸಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ●9ನೇ ಪುಟಕ್ಕೆ

ಸರ್ಕಾರದಿಂದ ಕೊಡುಗೆ ವಿಶ್ವಾಸ

ಹರಿಹರ ಪಂಚಮಸಾಲಿ ಪೀಠದ ಸತತ ಹೋರಾಟದ ಫಲವಾಗಿ ನಾಳೆ ಪಂಚಮ ಸಾಲಿ ಸಮುದಾಯಕ್ಕೆ ರಾಜ್ಯ ಸರಕಾರದಿಂದ ಅತ್ಯುತ್ತಮ ಕೊಡುಗೆ ಘೋಷಣೆಯಾಗುವ ವಿಶ್ವಾಸವಿದೆ ಎಂದು ಹರಿಹರ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠದ ಪೀಠಾಧ್ಯಕ್ಷರಾದ ಜಗದ್ಗುರು ಶ್ರೀ ವಚನಾನಂದ ಮಹಾಸ್ವಾಮೀಜಿಗಳು ಎಂದು ಹೇಳಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಪ್ರಮುಖ ಸಮುದಾಯಗಳಲ್ಲಿ ಒಂದಾಗಿರುವ ಪಂಚಮ ಸಾಲಿ ಸಮುದಾಯಕ್ಕೆ ಮೀಸಲಾತಿ ನೀಡಬೇಕು ಎಂಬ ಹೋರಾ ಟದ ಹಿಂದೆ 3 ದಶಕಗಳ ಇತಿಹಾಸವಿದೆ. ಹಂತಹಂತ ಗಳಲ್ಲಿ ನಡೆಸಿದ ಹೋರಾಟ ಅಂತಿಮ ಹಂತಕ್ಕೆ ಬಂದು ಸೇರಿದೆ ಎಂದರು.

ಮೈಸೂರು ವಿವಿ ನೂತನ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್

ಮೈಸೂರು, ಮಾ. 23(ಆರ್‌ಕೆ) – ಮೈಸೂರು ವಿಶ್ವವಿದ್ಯಾನಿಲಯದ ನೂತನ ಕುಲಪತಿಯನ್ನಾಗಿ ಪ್ರೊ. ಎನ್.ಕೆ.ಲೋಕನಾಥ್ ಅವರನ್ನು ನೇಮಿಸಲಾಗಿದೆ.



ಕುಲಪತಿಗಳಾಗಿ ಅಧಿಕಾರ ವಹಿಸಿಕೊಂಡ ಪ್ರೊ.ಎನ್.ಕೆ. ಲೋಕನಾಥ್ ಅವರನ್ನು ಹಂಗಾಮಿ ಕುಲಪತಿ ಪ್ರೊ.ಮುಜಾಫರ್ ಅಸ್ಸಾದಿ ಅವರು ಹೂ ಗುಚ್ಛ ನೀಡಿ ಅಭಿನಂದಿಸಿದರು.

ರಾಜ್ಯಪಾಲ, ರಾಜ್ಯ ವಿಶ್ವವಿದ್ಯಾನಿಲಯಗಳ ಕುಲಾಧಿಪತಿಗಳೂ ಆದ ಥಾವರ್ ಚಂದ್ ಗೆಹ್ಲೋಟ್ ಅವರ ಆದೇಶಾನುಸಾರ ರಾಜ್ಯಪಾಲರ ಅಧೀನ ಕಾರ್ಯದರ್ಶಿ ಎಂ.ನಾಗರಾಜ ಅವರು ಪ್ರೊ. ಎನ್.ಕೆ.ಲೋಕನಾಥ್ ಅವರನ್ನು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಯಾಗಿ ನೇಮಕಾತಿ ಅಧಿಸೂಚನೆ ಹೊರಡಿಸಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಪ್ಲಾನಿಂಗ್, ಮಾನಿಟರಿಂಗ್ ಅಂಡ್ ಇವಾಲ್ಯುಯೇಷನ್ ಬೋರ್ಡ್ (PMEB) ನಿರ್ದೇಶಕರಾಗಿರುವ ಪ್ರೊ. ಲೋಕನಾಥ್ ಅವರನ್ನು 4 ವರ್ಷಗಳ ಅವಧಿಗೆ ಅಥವಾ ಅವರಿಗೆ 67 ವರ್ಷ ಪೂರ್ಣಗೊಳ್ಳುವವರೆಗೆ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ನೇಮಕ ಮಾಡಲಾಗಿದೆ. 2022ರ ನವೆಂಬರ್ 15 ರಂದು ●9ನೇ ಪುಟಕ್ಕೆ

ನನ್ನ ಗುರು ಪ್ರೊ.ಶಶಿಧರ ಪ್ರಸಾದ್ ಕುಳಿತ ಕುರ್ಚಿಯಲ್ಲಿ ಕೂರುವ ಭಾಗ್ಯ ನನ್ನದು!

ಮೈಸೂರು, ಮಾ.23(ಜಿಎ)– ತಮ್ಮ ಗುರುಗಳಾದ ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಜಿ.ಶಶಿಧರ ಪ್ರಸಾದ್ ಕುಳಿತಿದ್ದ ಕುರ್ಚಿಯಲ್ಲಿ ಕುಳಿತು ಕಾರ್ಯ ನಿರ್ವಹಿಸಲು ಅವಕಾಶ ದೊರೆತಿರುವುದು ಅತ್ಯಂತ ಸಂತಸವಾಗಿದೆ ಎಂದು ಮೈಸೂರು ವಿವಿ ●9ನೇ ಪುಟಕ್ಕೆ

ಸಿದ್ದರಾಮಯ್ಯ ಕ್ಷೇತ್ರ ನಿಷ್ಕರ್ಷೆ ಆಗದೇ ಕಾಂಗ್ರೆಸ್ ಅಭ್ಯರ್ಥಿಗಳ

ಮೊದಲ ಪಟ್ಟಿಗೆ ಬಿಡುಗಡೆ ಭಾಗ್ಯವಿಲ್ಲ

- 120 ರಿಂದ 140 ಅಭ್ಯರ್ಥಿಗಳ ಪಟ್ಟಿ ಸಿದ್ಧ
- ಕೋಲಾರ ಸ್ಪರ್ಧೆ ಅಸುರಕ್ಷಿತ; ಈಗ ಕಡೂರಿನತ್ತ ಸಿದ್ದರಾಮಯ್ಯ ಚಿತ್ತ


ಬೆಂಗಳೂರು, ಮಾ.23(ಕೆಎಂಶಿ)–ವಿಧಾನಸಭೆ ಪ್ರತಿಪಕ್ಷ ನಾಯಕ ಸಿದ್ಧರಾಮಯ್ಯ ಅವರು ಸ್ಪರ್ಧಿಸುವ ಕ್ಷೇತ್ರದ ಆಯ್ಕೆ ಕಗ್ಗಂಟಾಗಿರುವುದರಿಂದ ಯುಗಾದಿಯಂದೇ ಬಿಡುಗಡೆಯಾಗಬೇಕಿದ್ದ ಕಾಂಗ್ರೆಸ್‌ನ ಮೊದಲ ಪಟ್ಟಿ ನನೆಗುದಿಗೆ ಬಿದ್ದಿದೆ. ಸಿದ್ದರಾಮಯ್ಯ ಕ್ಷೇತ್ರ ಹೊರತುಪಡಿಸಿ, ಉಳಿದ 120ರಿಂದ 140 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ, ಕಾಂಗ್ರೆಸ್ ಚುನಾವಣಾ ಸಮಿತಿ ಹಸಿರು ನಿಶಾನೆ ತೋರಿದೆ.

ಸಿಎಲ್‌ಪಿ ನಾಯಕ ಸಿದ್ದರಾಮಯ್ಯ ಅವರ ಹೆಸರಿಲ್ಲದೆ, ಉಳಿದ ಪಟ್ಟಿ ಬಿಡುಗಡೆ ಮಾಡಿದರೆ, ಕೆಟ್ಟ ಸಂದೇಶ ಹೋಗುತ್ತದೆ ಎಂಬ ಕಾರಣಕ್ಕೆ, ಬುಧವಾರ ಬಿಡುಗಡೆಯಾಗಬೇಕಿದ್ದ ಪಟ್ಟಿ ಇನ್ನೂ ಬಿಡುಗಡೆಯಾಗಿಲ್ಲ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ರಾಜ್ಯ ಪ್ರವಾಸದಲ್ಲಿದ್ದು, ಇಂದು ಸಂಜೆ ದೆಹಲಿಗೆ ತೆರಳಲಿದ್ದಾರೆ. ಆನಂತರ ಯಾವುದೇ ಕ್ಷಣದಲ್ಲಿ ಮೊದಲ ಪಟ್ಟಿ ಹೊರಬೀಳಲಿದೆ. ಬಿಜೆಪಿ ಮತ್ತು ಜೆಡಿಎಸ್‌ನಿಂದ ವಲಸೆ ಬಂದಿರುವ ಬಹುತೇಕ ಎಲ್ಲಾ ಮುಖಂಡರಿಗೂ ಮೊದಲ ಪಟ್ಟಿಯಲ್ಲೇ ಟಿಕೆಟ್ ದೊರೆತಿದೆ ಎನ್ನಲಾಗಿದೆ. ಸಿದ್ದರಾಮಯ್ಯ ಈ ಮುಂಚೆ ಕೋಲಾರ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಲು ನಿರ್ಧರಿಸಿದ್ದರು. ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಸೂಚನೆಯ ಹಿನ್ನೆಲೆಯಲ್ಲಿ ಅಲ್ಲಿಂದ ಸ್ಪರ್ಧಿಸದಿರಲು ನಿರ್ಧರಿಸಿದ್ದಾರೆ. ಕೋಲಾರ ವಿಧಾನಸಭಾ ●9ನೇ ಪುಟಕ್ಕೆ

ಕಳ್ಳರ ಹೆಸರೆಲ್ಲ ಮೋದಿ ಎಂದೇ ಇರುತ್ತದೆ ಏಕೆ...!?

ರಾಹುಲ್ ಗಾಂಧಿಗೆ 2 ವರ್ಷ ಜೈಲು ಶಿಕ್ಷೆ


ಸೂರತ್ ಕೋರ್ಟ್ ಆದೇಶ; ಜಾಮೀನು ಮಂಜೂರು | ಲೋಕಸಭೆ ಸದಸ್ಯತ್ವ ಕಳೆದುಕೊಳ್ಳುವ ಭೀತಿ



ನವದೆಹಲಿ: ಕಳ್ಳರ ಹೆಸರೆಲ್ಲ ಮೋದಿ ಎಂದೇ ಇರುತ್ತದೆ ಏಕೆ ಎಂದು ಪ್ರಶ್ನಿಸಿ ಪರೋಕ್ಷವಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿ ವಿರುದ್ಧ ಅವಹೇಳನ ಮಾಡಿದ್ದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರನ್ನು ದೋಷಿ ಎಂದು ಗುಜರಾತ್‌ನ ಸೂರತ್ ನ್ಯಾಯಾಲಯವು ಮಹತ್ವದ ತೀರ್ಪು ನೀಡಿದೆ. ಮೋದಿ ಎಂಬ ಉಪನಾಮದ ಬಗ್ಗೆ ಅಪಮಾನಕರವಾಗಿ ಮಾತನಾಡಿದ್ದಾರೆ ಎಂದು ಆರೋಪಿಸಿ ಬಿಜೆಪಿ ವರಿಷ್ಠರೊಬ್ಬರು ರಾಹುಲ್ ಗಾಂಧಿ ಮೇಲೆ ಕ್ರಿಮಿನಲ್ ಮಾನನಷ್ಟ ಮೊಕದ್ದಮೆ ಹೂಡಿದ್ದರು. ಈ ಬಗ್ಗೆ ಅಂತಿಮ ವಿಚಾರಣೆ ನಡೆಸಿ ಎರಡೂ ಕಡೆಯ ವಾದಗಳನ್ನೂ ಆಲಿಸಿದ್ದ ನ್ಯಾಯಾಲಯ, ರಾಹುಲ್ ಗಾಂಧಿಯವರನ್ನು ದೋಷಿ ಎಂದು ತೀರ್ಪು ನೀಡಿದ್ದು, 2 ವರ್ಷ ಜೈಲು ಶಿಕ್ಷೆಹಾಗೂ 15 ಸಾವಿರ ರೂಪಾಯಿ ದಂಡವನ್ನು ವಿಧಿಸಿದೆ. ಜೈಲು ಶಿಕ್ಷೆ ವಿಧಿಸಿ ನಂತರ ಜಾಮೀನು ಮಂಜೂರು ಮಾಡಿದ್ದು, 30 ದಿನಗಳವರೆಗೆ ಶಿಕ್ಷೆ ಅಮಾನತುಗೊಳಿಸಿ ತೀರ್ಪು ನೀಡಿದೆ. 2019ರ ಲೋಕಸಭೆ ಚುನಾವಣೆ ವೇಳೆ ಭಾಷಣ ಮಾಡಿದ್ದ ರಾಹುಲ್ ಗಾಂಧಿ ಅವರು, ಮೋದಿ ಎಂಬ ಹೆಸರು ಹೊಂದಿರುವವರೆಲ್ಲರೂ ಕಳ್ಳರು ಎಂಬ ಹೇಳಿಕೆ ನೀಡಿದ್ದರು. ನೀರವ್ ಮೋದಿ, ಲಲಿತ್ ಮೋದಿ, ●6ನೇ ಪುಟಕ್ಕೆ

ಶ್ರವಣಬೆಳಗೊಳದ ಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ನಿಧನ

ಹಾಸನ, ಮಾ.23– ಶ್ರೀಕ್ಷೇತ್ರ ಶ್ರವಣಬೆಳಗೊಳದ ಜೈನ ಮಠದ ಪರಮಪೂಜ್ಯ, ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ (75) ಗುರುವಾರ ಇಹಲೋಕ ತ್ಯಜಿಸಿದ್ದಾರೆ. ಗುರುವಾರ ಬೆಳಗ್ಗೆ ಕಾಲು ಜಾರಿ ಬಿದ್ದ ಪರಿಣಾಮ ತಲೆಗೆ ಗಂಭೀರ ಪೆಟ್ಟಾಗಿದ್ದರಿಂದ ಅವರನ್ನು ಕೂಡಲೇ ಮಂಡ್ಯ ಜಿಲ್ಲೆಯ ಬೆಳ್ಳೂರಿನ ಶ್ರೀ ಆದಿಚುಂಚನಗಿರಿ ಬಿಜಿಎಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಶ್ರೀಗಳು ವಿಧಿವಶರಾಗಿದ್ದಾರೆ.



ವಿಷಯ ತಿಳಿಯುತ್ತಿದ್ದಂತೆಯೇ ಆಸ್ಪತ್ರೆಗೆ ಭೇಟಿ ನೀಡಿದ ಶ್ರೀ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷರಾದ ಶ್ರೀ ನಿರ್ಮಲಾನಂದನಾಥ ಶ್ರೀಗಳು ಸೇರಿದಂತೆ ಇತರೆ ಶ್ರೀಗಳು ಅಂತಿಮ ಗೌರವ ಸಲ್ಲಿಸಿದರು. ಬಳಿಕ ಹಾಸನ ಜಿಲ್ಲಾಧಿಕಾರಿ ಎಂ.ಎಸ್.ಅರ್ಚನಾ ಕೂಡ ಆಸ್ಪತ್ರೆಗೆ ತೆರಳಿ ಅಂತಿಮ ದರ್ಶನ ಪಡೆದರು.

ಬಳಿಕ ದೇಶ, ವಿದೇಶಗಳಲ್ಲಿ ಅಪಾರ ಭಕ್ತರನ್ನು ಹೊಂದಿರುವ ಭಟ್ಟಾರಕ ಸ್ವಾಮೀಜಿ ಅವರ ಪಾರ್ಥಿವ ಶರೀರವನ್ನು ಬೆಳ್ಳೂರು ಕ್ರಾಸ್, ಹಿರಿಸಾವೆ ಮೂಲಕ ಶ್ರವಣ ಬೆಳಗೊಳಕ್ಕೆ ಕೊಂಡೊಯ್ಯಲಾಯಿತು. ಮಧ್ಯಾಹ್ನ ಸುಮಾರು 1.45ಕ್ಕೆ ಆಗಮಿಸಿದ ಪಾರ್ಥಿವ ಶರೀರವನ್ನು ಸಂಜೆವರೆಗೂ ಶ್ರವಣಬೆಳಗೊಳದ ಚಾವುಂಡರಾಯ ಮಂಟಪದಲ್ಲಿ ಅಂತಿಮ ದರ್ಶನಕ್ಕೆ ಇಡಲಾಗಿತ್ತು. ಈ ವೇಳೆ ಸಹಸ್ರಾರು ಭಕ್ತರು ಅಂತಿಮ ದರ್ಶನ ಪಡೆದರು. ಬಳಿಕ ಸರ್ಕಾರಿ ಗೌರವಗಳೊಂದಿಗೆ ಜೈನ ಸಂಪ್ರದಾಯದಂತೆ ಅಂತ್ಯಕ್ರಿಯೆ ನೆರವೇರಿಸಲಾಯಿತು. ಈ ವೇಳೆ ನಿರ್ದೋಶ್ ಮಹಾರಾಜ್ ಮುನಿಗಳು, ಆದಿಸಾಗರ ಮಹಾರಾಜ ಮುನಿಗಳು, ಹೊಂಬುಜ ಮಠದ ದೇವೇಂದ್ರಕೀರ್ತಿಸ್ವಾಮೀಜಿ, ಕನಕಗಿರಿ ಭುವನ ಕೀರ್ತಿ, ಕಂಬದಹಳ್ಳಿಯ ಭಾನುಕೀರ್ತಿಭಟ್ಟಾರಕಸ್ವಾಮೀಜಿ, ಕೊಲ್ಲಾಪುರದ ಲಕ್ಷ್ಮೀಸೇನಸ್ವಾಮೀಜಿ, ಕಾರ್ಕಳದ ಲಲಿತಕೀರ್ತಿ ಸ್ವಾಮೀಜಿ, ಮೂಡಬಿದಿರೆಯ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ, ಸೋಂದೆಮಠದ ಭಟ್ಟಾಕಲಂಕ ಬಸ್ವಾಮೀಜಿ, ಎನ್‌ಆರ್ ಪುರದ ಲಕ್ಷ್ಮೀಸೇನಾಭಟ್ಟಾರಕಸ್ವಾಮೀಜಿ ಇದ್ದರು.

■ **ಶ್ರೀಗಳ ಪರಿಚಯ:** ಶ್ರವಣಬೆಳಗೊಳದ ದಿಗಂಬರ ಜೈನ ಮಠದ ●6ನೇ ಪುಟಕ್ಕೆ


ನಿವೃತ್ತ ಐಬಿ ಅಧಿಕಾರಿ ಕುಲಕರ್ಣಿ ಹತ್ಯೆ ಪ್ರಕರಣ

ಮೈಸೂರು ಜಿಲ್ಲಾ ನ್ಯಾಯಾಲಯದಲ್ಲಿ

ಪ್ರಮುಖ ಆರೋಪಿ ಜಾಮೀನು ಅರ್ಜಿ ವಜಾ

ಮತ್ತೊಬ್ಬ ಆರೋಪಿ ಜಾಮೀನಿನ ಬಗ್ಗೆ ಇಂದು ನಿರ್ಧಾರ

ಮೈಸೂರು, ಮಾ.23(ಆರ್‌ಕೆ)–ನಿವೃತ್ತ ಐಬಿ ಅಧಿಕಾರಿ ಆರ್.ಎನ್. ಕುಲಕರ್ಣಿ ಹತ್ಯೆ ಪ್ರಕರಣದ ಓರ್ವ ಆರೋಪಿಯ ಜಾಮೀನು ಅರ್ಜಿ ಗುರುವಾರ ತಿರಸ್ಕೃತಗೊಂಡಿದ್ದು, ಮತ್ತೋರ್ವನ ಜಾಮೀನು ಅರ್ಜಿ ಆದೇಶವನ್ನು ನಾಳೆಗೆ (ಶುಕ್ರವಾರ) ಕಾಯ್ದಿರಿಸಲಾಗಿದೆ.



ಕುಲಕರ್ಣಿ

ಈ ಪ್ರಕರಣದ ಮೊದಲನೇ ಆರೋಪಿ ಮನುಗೌಡ ಮತ್ತು ಎರಡನೇ ಆರೋಪಿ ವರುಣ್ ಪ್ರತ್ಯೇಕವಾಗಿ ಜಾಮೀನು ಅರ್ಜಿಗಳನ್ನು ಮೈಸೂರಿನ ಪ್ರಥಮ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಕ್ಕೆ ಸಲ್ಲಿಸಿದ್ದರು. ಎರಡೂ ಅರ್ಜಿಗಳ ಸಂಬಂಧ ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕಿ ಲಕ್ಷ್ಮೀದೇವಮ್ಮ ವಾದ ಮಂಡಿಸಿದ್ದರು. ವಾದ ಹಾಗೂ ಪ್ರತಿವಾದಗಳನ್ನು ಆಲಿಸಿದ ನ್ಯಾಯಾಧೀಶರಾದ ಸರಸ್ವತಿ ಅವರು ಇಂದು ಮನುಗೌಡನ ಜಾಮೀನು ಅರ್ಜಿಯನ್ನು ತಿರಸ್ಕರಿಸಿದ್ದಾರೆ. ವರುಣ್ ಜಾಮೀನು ಅರ್ಜಿಯ ವಿಚಾರಣೆ ಕೂಡ ಮುಗಿದಿದ್ದು, ಆದೇಶವನ್ನು ನಾಳೆಗೆ ಕಾಯ್ದಿರಿಸಿದ್ದಾರೆ. ಆರ್.ಎನ್.ಕುಲಕರ್ಣಿ ಅವರ ಮನೆಗೆ ಹೊಂದಿಕೊಂಡಂತೆ ಮಾದಪ್ಪ ಎಂಬುವವರು ಮನೆ ನಿರ್ಮಿಸುತ್ತಿದ್ದು, ಅವರು ಮಹಾನಗರ ಪಾಲಿಕೆ ನಿಯಮಗಳನ್ನು ಉಲ್ಲಂಘಿಸಿ ನಿರ್ಮಾಣ ಮಾಡಿದ್ದಾರೆ ಎಂದು ಆರ್.ಎನ್.ಕುಲಕರ್ಣಿ ●9ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಟೀಚರ್ : ಕೋಲಾರದಲ್ಲಿ ಚಿನ್ನದ ಗಣಿ ಇದೆ. ಕುದುರೆ ಮುಖದಲ್ಲಿ ಏನಿದೆ?

ಓರ್ವ ವಿದ್ಯಾರ್ಥಿ : ಕಣ್ಣು, ಕಿವಿ, ಬಾಯಿ, ಮೂಗು ಎಲ್ಲಾ ಇದೆ. ನೀವು ಕುದುರೆಮುಖ ನೋಡಿಲ್ವಾ ಟೀಚರ್

ಮೈಸೂರು ಮಿತ್ರ

ಶುಕ್ರವಾರ, 24 ಮಾರ್ಚ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಅನುಭವವು ಮನುಷ್ಯನ ಮುಂದಿನ ಮಾರ್ಗಕ್ಕೆ ಬೆಳಕಿನಂತೆ. –ಸುಭಾಷಿತ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಪಂಜರದಲ್ಲಿ ಕಾಗೆ ಇಟ್ಟರೆ ಪಂಚಮ ಸ್ವರ ಕೊಟ್ಟೀತೆ?

ನಿಮ್ಮ ಪತ್ರಗಳು

'ಗುರುಸ್ವಾಮಿ'

ಮಾನ್ಯರೆ,

ದಿವಂಗತ ಪ್ರೊ. ಮಲೆಯೂರು ಗುರುಸ್ವಾಮಿ ಯಾವ ದೃಷ್ಟಿಯಿಂದ ಪರಿಭಾವಿಸಿದರೂ ಸಾಮಾನ್ಯ ಚೇತನವಲ್ಲ!

ನನ್ನ ಬಗೆಗೆ ಅವರೊಂದು ಕಡೆ ಬರೆದಿದ್ದಾರೆ : "ಸಿಪಿಕೆ ಒಬ್ಬ ವಿಭೂತಿ ಪುರುಷರು; ಲೋಕಪೂಜ್ಯರು!" ಅವರು ನನ್ನ ಶಿಷ್ಯ ದಿಟ. ಆದರೆ ಅಂಥ ಶಿಷ್ಯವರ್ಯರೂ ಉಂಟೆ! ವಾಸ್ತವವಾಗಿ ಅವರು ನನ್ನ ಗುರು; ನಾನು ಅವರ ಶಿಷ್ಯ ! ಅವರ ಮಾತೆಂದರೆ 'ಮುತ್ತಿನ ಹಾರ'; ಅವರ ಒಂದೊಂದು ಕೃತಿಗೂ 'ಮಾಣಿಕ್ಯದ ದೀಪ್ತಿ', ಅನಂತ ವ್ಯಾಪ್ತಿ! ಅವರೀಗ ದಿಗಂತ ಲೀನ; ಸಂಸಹಂಸ ಕಡಲಿಗೆ ಹರಿದ ಕಪಿಲೆ ! (ಅವರ ಅವಸಾನ ದೈವಲೀಲೆ ಎನ್ನಬಹುದೇ!)


ಸರಸ್ವತಿ

ಬಹಳ ಹಿಂದೆ ನಾನೊಂದು ಪತ್ರಿಕೆಗೆ ತಮಾಷೆಯಾಗಿ ಪತ್ರವೊಂದನ್ನು ಬರೆದಿದ್ದೇ: "ಪಂಪ ಪ್ರಶಸ್ತಿ ಬರದವರಿಗೆ 'ಅನುಕಂಪ ಪ್ರಶಸ್ತಿ'ಯಾದರೂ ಬರಲಿ!" ಎಂದು. ಈಗ ಬಹುಕಾಲದ ಬಳಿಕ ನನಗೇ ವಾಸ್ತವವಾಗಿ ಪಂಪ ಪ್ರಶಸ್ತಿ ಪ್ರಾಪ್ತವಾಗಿದೆ, (ಯಾವುದೇ ಅನುಕಂಪವಿಲ್ಲದೆ?). ಸರಸ್ವತಿಗೆ ನಮಸ್ಕಾರ. ಇದು ಅರ್ಥಪೂರ್ಣವಾದ ಪಂಪವಾಣಿ.

"ಪರಮಜಿನೇಂದ್ರ ವಾಣಿಯೇ ಸರಸ್ವತಿ!"

–ಸಿಪಿಕೆ, ಮೈಸೂರು.

ಬಿದಿರು ಬೊಂಬನ್ನು ತೆರವುಗೊಳಿಸಿ



ಮಾನ್ಯರೆ,

ಮೈಸೂರು ವಿವಿ ವಿಜ್ಞಾನ ಭವನದ ಆವರಣದಲ್ಲಿ ಬೆಳೆದು ನಿಂತಿರುವ ಬಿದಿರು ಮೆಳೆ ಕಾಂಪೌಂಡ್ ಹೊರಗೂ ಚಾಚಿಕೊಂಡಿವೆ. ಸಾಕಷ್ಟು ಒಣಗಿ ನಿಂತಿದ್ದು, ಒಂದು ಬಿದಿರಿನ ಬೊಂಬಂತು, ಯಾರ ಮೇಲಾದರು ಬೀಳಲು ಹೊಂಚು ಹಾಕಿ ನಿಂತಂತಿದೆ. ವಿದ್ಯಾರ್ಥಿಗಳೂ ಸೇರಿದಂತೆ ಪಾದಚಾರಿಗಳು, ವಾಹನ ಸವಾರರು ಹಾಗೂ ಪೌರ ಕಾರ್ಮಿಕರು ಇಲ್ಲಿ ಹೆಚ್ಚಾಗಿ ಓಡಾಡುತ್ತಿರುತ್ತಾರೆ. ಹೀಗಾಗಿ, ಅಪಾಯಕ್ಕೂ ಮೊದಲು ಬಿದಿರಿನ ಬೊಂಬನ್ನು ತೆರವುಗೊಳಿಸಿ ಆಗಬಹುದಾದ ಅನಾಹುತ ತಪ್ಪಿಸಬೇಕಿದೆ.

– ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

ಖಲಿಸ್ತಾನ ಉಗ್ರಸಂಘಟನೆಯನ್ನು ಮಟ್ಟಿ ಹಾಕಲು ಸೈನ್ಯವನ್ನು ಬಳಸಿಕೊಳ್ಳಬೇಕು

ಮಾನ್ಯರೇ,

ಪಂಜಾಬ್‌ನಲ್ಲಿ ಗಟ್ಟಿಯಾಗಿ ಬೇರೂರಲು ಯತ್ನಿಸುತ್ತಿರುವ ಖಲಿಸ್ತಾನ ಉಗ್ರಸಂಘಟನೆಯನ್ನು ಮಟ್ಟಹಾಕಲು ಅಲ್ಲಿನ ಪೊಲೀಸರು ಹರಸಾಹಸ ಪಡಬೇಕಾಗಿದೆ. ಪಂಜಾಬ್‌ನಲ್ಲಿ ಈ ಪರಿಸ್ಥಿತಿ ಎದುರಾಗಲು ಕಾರಣ ಕೆಲವು ರಾಜಕೀಯ ಪಕ್ಷಗಳು. 80ರ ದಶಕದಲ್ಲಿ ಅಂದಿನ ಸರ್ಕಾರದ ರೀತಿಯಲ್ಲೇ ಇದೀಗ ಇಂದಿನ ಸರ್ಕಾರವೂ ರಾಜಕೀಯ ಲಾಭಕ್ಕಾಗಿ ಖಲಿಸ್ತಾನ ಪೋಷಿಸಿ, ಪಂಜಾಬ್ ಅನ್ನು ಬಲಿಕೊಡುತ್ತಿರುವುದು ಖಂಡನೀಯ. ಪಂಜಾಬ್‌ನಲ್ಲಿ ಕಳೆದೆರಡು ದಿನದಿಂದ ಇಂಟರ್‌ನೆಟ್ ಸೇವೆ ಸ್ಥಗಿತಗೊಂಡಿದೆ. ಜನಜೀವನ ಅಸ್ತವ್ಯಸ್ತಗೊಂಡಿದೆ. ಇತ್ತ ಖಲಿಸ್ತಾನ ನಾಯಕ, ವಾರಿಸ್ ಪಂಜಾಬ್ ದೇ ಸಂಘಟನೆ ಮುಖ್ಯಸ್ಥ ಅಮೃತ್‌ಪಾಲ್ ಸಿಂಗ್ ಬಂಧಿಸಲು ಪೊಲೀಸರು ಹರಸಾಹಸ ಪಡುತ್ತಿದ್ದಾರೆ ಎಂಬ ಸುದ್ದಿ ಅತ್ಯಂತ ಆತಂಕ ಹಾಗೂ ವಿಷಾದನೀಯ.

ಪಂಜಾಬ್‌ನಲ್ಲಿ ಆತಂಕದ ವಾತಾವರಣ ನಿರ್ಮಾಣಗೊಂಡಿದೆ. ಹಾಗಾಗಿ ಕೇಂದ್ರ ತ್ವರಿತವಾಗಿ ಖಲಿಸ್ತಾನ ಉಗ್ರಸಂಘಟನೆಯನ್ನು ಮಟ್ಟಹಾಕಲು ಸೈನ್ಯವನ್ನು ಬಳಸಿಕೊಳ್ಳಬೇಕು. ಖಲಿಸ್ತಾನ ಸಂಘಟನೆಗೆ ನೀರೆರೆದು ಪೋಷಿಸಿದ ರಾಜಕೀಯ ಪಕ್ಷಗಳು, ಈಗ ಅಮೃತ್‌ಪಾಲ್ ಸಿಂಗ್ ಬಂಧನ ವಿಷಯದಲ್ಲಿ ನಾಟಕವಾಡುತ್ತಿವೆ. 80ರ ದಶಕದಲ್ಲೇ ಭಾರತದಲ್ಲಿ ಖಲಿಸ್ತಾನ ಉಗ್ರ ಸಂಘಟನೆ ನಿಷೇಧಗೊಂಡಿದ್ದರೂ ಕೆನಡಾ, ಆಸ್ಟ್ರೇಲಿಯಾ ಸೇರಿದಂತೆ ಇತರ ದೇಶದಲ್ಲಿ ಖಲಿಸ್ತಾನ ಹೆಮ್ಮರವಾಗಿ ಬೆಳೆದು ನಿಂತಿದೆ. ಇತ್ತೀಚಿನ ಕೆಲ ವರ್ಷಗಳಲ್ಲಿ ಖಲಿಸ್ತಾನ ಹೋರಾಟ ಭಾರತದಲ್ಲೂ ತೀವ್ರಗೊಂಡಿದೆ. ಕೇಂದ್ರದ ವಿರುದ್ಧ ಕೃಷಿ ಕಾನೂನು ಜಾರಿಗೆ ಆಗ್ರಹಿಸಿ ನಡೆದ ಹೋರಾಟದಿಂದ ಖಲಿಸ್ತಾನ ಹೋರಾಟವೂ ಭಾರತದಲ್ಲಿ ಮತ್ತೆ ಗಟ್ಟಿಯಾಗಿ ಬೇರೂರಲು ಆರಂಭಿಸಿದೆ. ಕೃಷಿ ಕಾಯ್ದೆ ವಿರುದ್ಧ ರೈತರು ನಡೆಸಿದ ಹೋರಾಟದ ಹಿಂದೆ ಇದೇ ಖಲಿಸ್ತಾನ ಸಂಘಟನೆ ಇದೆ ಎನ್ನುವ ಆರೋಪ ಗೌಪ್ಯವಾಗಿ ಉಳಿದಿಲ್ಲ. ಇತ್ತೀಚಿನ ಪಂಜಾಬ್ ಚುನಾವಣೆ ದೃಷ್ಟಿಯಲ್ಲಿಟ್ಟುಕೊಂಡೇ ಖಲಿಸ್ತಾನ ಉಗ್ರಸಂಘಟನೆಯನ್ನು ಬೆಳೆಸಲು ರಣತಂತ್ರ ರೂಪಿಸಲಾಗಿತ್ತು ಎಂಬ ಆರೋಪವೂ ಕೇಳಿ ಬರುತ್ತಿರುವುದು ದುರಾದೃಷ್ಟಕರ. –ವಿಜಯಕುಮಾರ್ ಎಚ್.ಕೆ., ರಾಯಚೂರು

ಗೂಬೆ ಕೂರಿಸುವ ಕೆಲಸ

ಮಾನ್ಯರೆ,

ಟಿಪ್ಪು ಸುಲ್ತಾನನನ್ನು ಉರಿಗೌಡ ಮತ್ತು ನಂಜೇಗೌಡ ಎಂಬುವರು ಕೊಂದರು ಎಂದು ಹುಯಿಲೆಬ್ಬಿಸುತ್ತಿರುವ ಕೆಲವು ವೈಯಕ್ತಿಕ ಹಿತಾಸಕ್ತಿಗಳು ಇತಿಹಾಸವನ್ನು ತಿರುಚುವ ಕೆಲಸ ಮಾಡುತ್ತಿರುವುದು ದುರ್ದೈವದ ಸಂಗತಿ.

ಟಿಪ್ಪು ಸುಲ್ತಾನ್ ನಾಲ್ಕನೆಯ ಮೈಸೂರು ಯುದ್ಧದಲ್ಲಿ (1799) ಬ್ರಿಟಿಷ್ ಸೈನ್ಯದ ವಿರುದ್ಧ ಹೋರಾಡುತ್ತಿರುವ ಸಂದರ್ಭದಲ್ಲಿ ಕೊಲ್ಲಲ್ಪಟ್ಟನು ಎಂಬುದು ಐತಿಹಾಸಿಕವಾಗಿ ದಾಖಲಾಗಿದೆ. ಆದರೆ ಈಗ ಉರಿಗೌಡ ಮತ್ತು ನಂಜೇಗೌಡ ಎಂಬ ಕಾಲ್ಪನಿಕ ಹೆಸರುಗಳನ್ನು ತೇಲಿಬಿಡುವ ಮೂಲಕ ರಾಜಕೀಯ ಲಾಭ ಪಡೆಯಲು ಕೆಲವು ಶಕ್ತಿಗಳು ಪ್ರಯತ್ನಿಸುತ್ತಿವೆ. ಅಷ್ಟೇ ಅಲ್ಲದೇ ಒಂದು ನಿರ್ದಿಷ್ಟ ಕೋಮಿನ ವಿರುದ್ಧ ಗೂಬೆ ಕೂರಿಸುವ ಕೆಲಸವನ್ನು ವ್ಯವಸ್ಥಿತವಾಗಿ ಮಾಡಲಾಗುತ್ತಿದೆ. ಉರಿಗೌಡ ಮತ್ತು ನಂಜೇಗೌಡರು ಕಾಲ್ಪನಿಕ ವ್ಯಕ್ತಿಗಳು ಹಾಗೂ ಅವರ ಬಗ್ಗೆ ಇತಿಹಾಸದಲ್ಲಿ ಯಾವುದೇ ದಾಖಲೆ ಇಲ್ಲ ಎಂದು ಅನೇಕ ಇತಿಹಾಸ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಈ ಗೂಬೆ ಕೂರಿಸುವ ಕೆಲಸ ಇನ್ನಾದರೂ ನಿಲ್ಲಲಿ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಸಮಾಜಮುಖಿ



ಪ್ರೊ. ಆರ್. ಇಂದಿರಾ
ಸಮಾಜಶಾಸ್ತ್ರಜ್ಞೆ
ramaraoindira@gmail.com

ವಿಶ್ವ ಅರಣ್ಯ, ನೀರು ಸಂರಕ್ಷಣಾ ದಿನಾಚರಣೆಯ ಔಚಿತ್ಯ

ಈ ವಾರ ಮಾನವ ಜೀವನಾಧಾರಗಳಾದ ಎರಡು ಸಂಪನ್ಮೂಲಗಳ ರಕ್ಷಣೆಯ ಅಗತ್ಯದತ್ತ ನಮ್ಮ ಗಮನವನ್ನು ಸೆಳೆಯುವ ದಿನಾ ಚರಣೆಗಳು ಒಂದರ ಹಿಂದೊಂದು ಬಂದಿವೆ. ಜೀವ ವೈವಿಧ್ಯ ರಕ್ಷಣೆ ಮತ್ತು ಸುಸ್ಥಿರ ಬದುಕನ್ನು ನಡೆಸಲು ಅರಣ್ಯಗಳನ್ನು ಉಳಿಸಿ–ವೃದ್ಧಿಸುವುದು ಎಷ್ಟು ಮುಖ್ಯ ಎಂಬ ವಿಷಯದತ್ತ ನಮ್ಮ ಗಮನವನ್ನು ಸೆಳೆಯುವುದು ಮಾರ್ಚ್ 21ರ ವಿಶ್ವ ಅರಣ್ಯ ದಿನಾಚರಣೆಯ ಉದ್ದೇಶ. 2012ನೆ ಇಸವಿಯಲ್ಲಿ ವಿಶ್ವ ಸಂಸ್ಥೆಯ ಜನರಲ್ ಅಸೆಂಬ್ಲಿಯಿಂದ ಘೋಷಿತವಾಗಿ ಇದೀಗ ಒಂದು ದಶಕವನ್ನು ಪೂರೈಸಿರುವ ವಿಶ್ವ ಅರಣ್ಯ ದಿನಾಚರಣೆಯ ಈ ಬಾರಿಯ ಧ್ಯೇಯವಾಕ್ಯ 'ಅರಣ್ಯಗಳು ಮತ್ತು ಆರೋಗ್ಯ'. ವಿಶ್ವ ಜಲ ಸಂರಕ್ಷಣಾ ದಿನದ ಆಚರಣೆ, 1992ನೇ ಇಸವಿಯಲ್ಲಿ ವಿಶ್ವ ಸಂಸ್ಥೆ ಆಯೋಜಿಸಿದ್ದ ಪರಿಸರ ಮತ್ತು ಅಭಿವೃದ್ಧಿ ಸಮಾವೇಶದ ಸಂದರ್ಭದಲ್ಲಿ ಆರಂಭವಾಗಿದ್ದು. ಮೂರು ದಶಕಗಳಿಂದ ಪ್ರತಿ ವರ್ಷವೂ ಮಾರ್ಚ್ 22ರಂದು ಆಚರಿಸಲ್ಪಡುವ ಈ ದಿನಾಚರಣೆಯ ಗುರಿ ಸುಸ್ಥಿರ ಬದುಕಿಗೆ ನೀರು ಎಷ್ಟು ಮುಖ್ಯ' ಎಂಬ ವಿಚಾರದತ್ತ ಪ್ರಪಂಚದ ಗಮನವನ್ನು ಸೆಳೆಯುವುದೇ ಆಗಿದೆ.. 2023ರ ವಿಶ್ವ ಜಲ ಸಂರಕ್ಷಣಾ ದಿನದ ಆಶಯ ವಾಕ್ಯ 'ಸಮಕಾಲೀನ ಕಾಲಘಟ್ಟದಲ್ಲಿ ಪರಿಶುದ್ಧ ನೀರು ಮತ್ತು ನೈರ್ಮಲ್ಯ ಸಂರಕ್ಷಣಾ ಪ್ರಯತ್ನಗಳಿಗೆ ಎದುರಾಗಿರುವ ಸವಾಲುಗಳನ್ನು ನಿರ್ವಹಿಸಲು ಸನ್ನದ್ಧರಾಗಿ' ಎಂದು. ಈ ಎರಡು ದಿನಾಚರಣೆಗಳ ಮೂಲ ಉದ್ದೇಶಗಳೂ ಒಂದೇ ಆಗಿದ್ದು 2030ರ ವೇಳೆಗೆ ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಗೆ ನಡೆಯುತ್ತಿರುವ ಪ್ರಯತ್ನಗಳ ಹಿನ್ನೆಲೆಯಲ್ಲಿ ಇವು ವಿಶೇಷ ಅರ್ಥವನ್ನು ಪಡೆದಿವೆ.

ಮಾನವ ಸಮಾಜಗಳ ಉಳಿಯುವಿಕೆಗೆ ಅರಣ್ಯಗಳನ್ನು ರಕ್ಷಿಸುವುದು ಎಷ್ಟು ಮುಖ್ಯ ಎನ್ನುವ ವಿಚಾರವನ್ನು ಕುರಿತಂತೆ ಜಾಗೃತಿ ಯನ್ನು ಮೂಡಿಸಲು ಅರ್ಧ ಶತಮಾನಕ್ಕೆ ಹಿಂದೆಯೇ ವಿಶ್ವ ಸಂಸ್ಥೆಯ ಫುಡ್ ಅಂಡ್ ಅಗ್ರಿಕಲ್ಚರ್ ಆರ್ಗನೈಸೇಷನ್ ಅರಣ್ಯಗಳ ಅಂತಾರಾಷ್ಟ್ರೀಯ ದಿನಾಚರಣೆಯನ್ನು ಆಚರಿ ಸಲು ಆರಂಭಿಸಿತ್ತು. 2011ರಲ್ಲಿ ವಿಶ್ವ ಸಂಸ್ಥೆ, 2011 ರಿಂದ 2020ರವರೆಗಿನ ದಶಕವನ್ನು ಅಂತಾರಾಷ್ಟ್ರೀಯ ಅರಣ್ಯಗಳ ದಶಕ ಎಂದು ಘೋಷಿಸಿತು. ಎಲ್ಲ ಬಗೆಯ ಅರಣ್ಯ ಪ್ರದೇಶ ಗಳನ್ನು ಬೆಳೆಸಿ, ಅವುಗಳ ಸುಸ್ಥಿರ ಸಂರಕ್ಷಣೆ ಮತ್ತು ನಿರ್ವಹಣೆಗೆ ಪ್ರಾಧಾನ್ಯತೆಯನ್ನು ನೀಡಬೇಕೆಂಬುದೇ ಅರಣ್ಯ ದಿನಾಚರಣೆಯನ್ನು ಆಚರಿಸುವ ಉದ್ದೇಶ. ಈ ದಿನದಂದು ಪ್ರಪಂಚದಾದ್ಯಂತ ಅರಣ್ಯ ಸಂಪತ್ತನ್ನು ರಕ್ಷಿಸುವ ಬಗ್ಗೆ ಹಾಗೂ ಜೀವ ವೈವಿಧ್ಯವನ್ನು ಸಂಭ್ರಮಿಸುವ ಬಗ್ಗೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿ ಕೊಳ್ಳಲಾಗುತ್ತದೆ.

ಅರಣ್ಯ ಮತ್ತು ಜಲ ಸಂಪತ್ತುಗಳ ರಕ್ಷಣೆ –ಇವೆರಡೂ ಒಂದಕ್ಕೊಂದು ಪೂರಕವಾಗಿರ ತಕ್ಕಂಥ ಚಟುವಟಿಕೆಗಳು. ಜೀವಜಲ ಎಂದೇ ಗುರುತಿ ಸಲ್ಪಡುವ ನೀರಿಗಾಗಿ ಕೋಟ್ಯಾಂತರ ಜನರು, ವಿಶೇಷವಾಗಿ ಸಮಾಜದ ಅಂಚಿನಲ್ಲಿ ವಾಸಿಸುತ್ತಿರುವವರು ದಿನ–ನಿತ್ಯ ಪರದಾಡುತ್ತಿದ್ದು, ಗುಣಮಟ್ಟದ – ಸುರಕ್ಷಿತ ಬದುಕನ್ನು ನಡೆಸಲು ಪರಿಶುದ್ಧ ಕುಡಿಯುವ ನೀರಿನ ಅಲಭ್ಯತೆಯೇ ಮೂಲ ಕಾರಣಗಳಲ್ಲಿ ಒಂದು. ಅಭಿವೃದ್ಧಿ–ಆಧುನೀಕರಣ–ಆರ್ಥಿಕ ಉದಾರೀಕರಣಗಳೆಂಬ ಮೂರು ಪ್ರಕ್ರಿಯೆಗಳು ಮರಗಳ ಹನನಕ್ಕೆ, ಅಸೂಕ್ಷ್ಮ ಕಟ್ಟಡ ನಿರ್ಮಾಣ ಚಟುವಟಿಕೆಗಳಿಗೆ, ಕಾಲುವೆಗಳು ಅಥವಾ ಕೆರೆಗಳ ನಾಶಕ್ಕೆ ಕಾರಣವಾಗಿದ್ದು, ಇಂದು ಭಯ ಹುಟ್ಟಿಸುವ ರೀತಿಯಲ್ಲಿ ಶುದ್ಧ ನೀರಿನ ಮೂಲಗಳು ಬತ್ತುತ್ತಿವೆ, ಮಳೆಯ ಪ್ರಮಾಣವೇ ಕಡಿಮೆಯಾಗುತ್ತಿದೆ. ಅರಣ್ಯಗಳ ನಾಶ, ಪರಿಸರ ಅಸೂಕ್ಷ್ಮ ಅರಣ್ಯ ನೀತಿಗಳು, ಕಾಡು ಪ್ರದೇಶಗಳ ಒತ್ತುವರಿ, ಅರಣ್ಯಾವಲಂಬಿ ಸಮುದಾಯಗಳನ್ನು ಒಕ್ಕಲೆಬ್ಬಿಸುವಿಕೆ, ಅವರ ಸುಸ್ಥಿರ ಕೃಷಿ ಪದ್ಧತಿಗಳ ಕಡೆಗಣಿಸುವಿಕೆ–ಇವೇ ಮುಂತಾದ ಅರಣ್ಯಾಘಾತಕಾರಿ ಚಟುವಟಿಕೆಗಳು ಮಳೆಯ ಪ್ರಮಾಣ ಕಡಿಮೆಯಾಗಲು ಕಾರಣವಾಗುತ್ತಿವೆ. ಕುಡಿಯಲು, ಆಹಾರ ತಯಾರಿ ಮಾಡಲು ಅಥವಾ ವೈಯಕ್ತಿಕ ಶುಚಿತ್ವವನ್ನು ಕಾಪಾಡಲು ನೀರೇ ಇಲ್ಲದಿದ್ದಾಗ ಆರೋಗ್ಯವಾಗಿರುವುದು ಎಲ್ಲಿ ಬಂತು?

> **ಅಭಿವೃದ್ಧಿ–ಆಧುನೀಕರಣ–ಆರ್ಥಿಕ ಉದಾರೀಕರಣಗಳೆಂಬ ಮೂರು ಪ್ರಕ್ರಿಯೆಗಳು ಮರಗಳ ಹನನಕ್ಕೆ, ಅಸೂಕ್ಷ್ಮ ಕಟ್ಟಡ ನಿರ್ಮಾಣ ಚಟುವಟಿಕೆಗಳಿಗೆ, ಕಾಲುವೆಗಳು ಅಥವಾ ಕೆರೆಗಳ ನಾಶಕ್ಕೆ ಕಾರಣವಾಗಿದ್ದು, ಇಂದು ಭಯ ಹುಟ್ಟಿಸುವ ರೀತಿಯಲ್ಲಿ ಶುದ್ಧ ನೀರಿನ ಮೂಲಗಳು ಬತ್ತುತ್ತಿವೆ, ಮಳೆಯ ಪ್ರಮಾಣವೇ ಕಡಿಮೆಯಾಗುತ್ತಿದೆ. ಅರಣ್ಯಗಳ ನಾಶ, ಪರಿಸರ ಅಸೂಕ್ಷ್ಮ ಅರಣ್ಯ ನೀತಿಗಳು, ಕಾಡು ಪ್ರದೇಶಗಳ ಒತ್ತುವರಿ, ಅರಣ್ಯಾವಲಂಬಿ ಸಮುದಾಯಗಳನ್ನು ಒಕ್ಕಲೆಬ್ಬಿಸುವಿಕೆ, ಅವರ ಸುಸ್ಥಿರ ಕೃಷಿ ಪದ್ಧತಿಗಳ ಕಡೆಗಣಿಸುವಿಕೆ–ಇವೇ ಮುಂತಾದ ಅರಣ್ಯಾಘಾತಕಾರಿ ಚಟುವಟಿಕೆಗಳು ಮಳೆಯ ಪ್ರಮಾಣ ಕಡಿಮೆಯಾಗಲು ಕಾರಣವಾಗುತ್ತಿವೆ. ಕುಡಿಯಲು, ಆಹಾರ ತಯಾರಿ ಮಾಡಲು ಅಥವಾ ವೈಯುಕ್ತಿಕ ಶುಚಿತ್ವವನ್ನು ಕಾಪಾಡಲು ನೀರೇ ಇಲ್ಲದಿದ್ದಾಗ ಆರೋಗ್ಯವಾಗಿರುವುದು ಎಲ್ಲಿ ಬಂತು?**



ಅರಣ್ಯ ಪ್ರದೇಶಗಳ ನಾಶಕ್ಕೂ ಮಾನವ ಸಮಾಜ ಎದುರಿಸುತ್ತಿರುವ ಪರಿಶುದ್ಧ ನೀರಿನ ಅಭಾವಕ್ಕೂ ನಿಕಟವಾದ ಸಂಬಂಧವಿದೆ. ಆಡಳಿತಾತ್ಮಕ ದಾಖಲೆಗಳು ಅರಣ್ಯ ಪ್ರದೇಶ ನಮ್ಮ ದೇಶದಲ್ಲಿ ಹೆಚ್ಚುತ್ತಿದೆ ಎಂದು ತೋರಿಸುತ್ತಿವೆ. ಆದರೆ ಈ ಹೆಚ್ಚಳಕ್ಕೆ ಕಾರಣವಾಗಿರುವುದು ನೈಸರ್ಗಿಕ ಅರಣ್ಯ ಭೂಮಿಯ ವಿಸ್ತೃತಿಯಲ್ಲ. ಟೀ ತೋಟಗಳು, ತೆಂಗಿನ ತೋಟಗಳು ಅಥವಾ ರಸ್ತೆ ಬದಿಯಲ್ಲಿ ನೆಟ್ಟಿರುವ ದೊಡ್ಡ ಮರಗಳು– ಇವುಗಳನ್ನೆಲ್ಲ ಅರಣ್ಯ ಪ್ರದೇಶ ಗಳೆಂದು ತೋರಿಸುತ್ತಿರುವುದರಿಂದ ಅರಣ್ಯ ಹೆಚ್ಚುತ್ತಿದೆ ಎಂದು ಭಾಸವಾಗುತ್ತಿದೆ. ಆದರೆ ಅರಣ್ಯ ರಕ್ಷಣಾ ಚಟುವಟಿಕೆಗಳು ಮಾತ್ರ ದಿನದಿಂದ ದಿನಕ್ಕೆ ಹಿಮ್ಮೆಟ್ಟುತ್ತಿವೆ. ಅರಣ್ಯ ರಕ್ಷಣೆ ಎನ್ನುವುದು ಬಹು–ಆಯಾಮಗಳಿಂದ ಚರ್ಚಿಸಬೇಕಾದ ಮತ್ತು ಕಾರ್ಯಪ್ರವೃತ್ತ ವಾಗಬೇಕಾದಂಥ ವಿಚಾರ. ನಮ್ಮ ಭವಿಷ್ಯದ ಕಾರ್ಯಸೂಚಿಗಳಲ್ಲಿ ಪ್ರಧಾನವಾಗಿ ಸೇರ್ಪಡೆ ಯಾಗಬೇಕಾಗಿರುವುದು ಜೀವವೈವಿಧ್ಯ ಸಂರಕ್ಷಣೆ, ಹವಾಮಾನ ಬದಲಾವಣೆಯ ನಿರ್ವಹಣೆ, ಮತ್ತು ಅರಣ್ಯಾವಲಂಬಿ ಸಮುದಾಯಗಳಿಗೆ ಪರಿಸರ ಸೂಕ್ಷ್ಮ ಸೇವೆಗಳನ್ನು ನೀಡುವ ಮೂಲಕ ಗುಣಮಟ್ಟದ ಜೀವನನ್ನು ನಡೆಸುವ ಅವಕಾಶಗಳನ್ನು ಒದಗಿಸುವುದು.

ಅರಣ್ಯ ಪ್ರದೇಶಗಳ ನಾಶ ಮಳೆಯ ಪ್ರಮಾಣದ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ ಎನ್ನುವುದು ಒಂದು ಸ್ಥಾಪಿತ ಸತ್ಯ. ಮಳೆ ಕಡಿಮೆಯಾಯಿತೆಂದರೆ ನೀರಿನ ಅಭಾವ ಹೆಚ್ಚಾಗುತ್ತದೆ. ಇದರಿಂದಾಗಿ ಸಾರ್ವಜನಿಕ ಮತ್ತು ವೈಯಕ್ತಿಕ ಆರೋಗ್ಯ ಹಾಗೂ ನೈರ್ಮಲ್ಯ ನಿರ್ವಹಣೆ–ಇವೆರಡರ ಗುಣಮಟ್ಟವೂ ಹಿಮ್ಮೆಟ್ಟುತ್ತದೆ. ವಿಶ್ವದಾದಂತ್ಯ 200 ಕೋಟಿ ಜನ, ಎಂದರೆ ಪ್ರತಿ ನಾಲ್ಕರಲ್ಲಿ ಒಬ್ಬರು ಸುರಕ್ಷಿತ ಕುಡಿಯುವ ನೀರಿನಿಂದ ವಂಚಿತರಾಗಿದ್ದಾರೆ, ಜಾಗತಿಕ ಜನಸಂಖ್ಯೆಯಲ್ಲಿ ಸುಮಾರು ಅರ್ಧದಷ್ಟು ಜನರಿಗೆ ಸುರಕ್ಷಿತ ನೈರ್ಮಲ್ಯ ವ್ಯವಸ್ಥೆಯಿಲ್ಲ, ವಿಶ್ವ ಮಟ್ಟದಲ್ಲಿ ಶೇ.44ರಷ್ಟು ಮನೆಗಳಲ್ಲಿ ಆರೋಗ್ಯಕರ ಕುಡಿಯುವ ನೀರಿನ ಸರಬರಾಜು ಇಲ್ಲ, ಆದ್ದರಿಂದ 2050ರ ವೇಳೆಗೆ ಪರಿಶುದ್ಧ ನೀರಿನ ಬೇಡಿಕೆ ಶೇ.55ರಷ್ಟಾಗುತ್ತದೆ ಎಂದು ವಿಶ್ವ ಸಂಸ್ಥೆಯ ವರದಿಗಳು ಎಚ್ಚರಿಕೆಯನ್ನು ನೀಡಿವೆ. ಪ್ರತಿ ವರ್ಷವೂ 1.4 ಮಿಲಿಯನ್ ಜನರು ಅನಾರೋಗ್ಯಕರ ನೀರು ಸೇವನೆ ಮತ್ತು ಅಸುರಕ್ಷಿತ ನೈರ್ಮಲ್ಯ ವ್ಯವಸ್ಥೆಯಿಂದ ಸೃಷ್ಟಿಯಾದ ಖಾಯಿಲೆಗಳಿಂದ ಸಾಯುತ್ತಾರೆ ಎಂದು 2022ರಲ್ಲಿ ಬಿಡುಗಡೆ ಯಾದ ವಿಶ್ವ ಆರೋಗ್ಯ ಸಂಸ್ಥೆಯ ವರದಿಯೊಂದು ತಿಳಿಸಿದೆ.

ವಿಶ್ವ ಅರಣ್ಯ ದಿನ ಮತ್ತು ವಿಶ್ವ ಜಲ ಸಂರಕ್ಷಣಾ ದಿನಗಳೆಂದು ವ್ಯಕ್ತವಾಗುವ ಆಶಯಗಳು ಒಂದು ದಿನಕ್ಕೆ ಸೀಮಿತವಾದು ದಲ್ಲ. ಅವುಗಳಿಗೆ ಸರ್ವಕಾಲಿಕ ಪ್ರಸ್ತುತತೆ ಇದೆ ಮತ್ತು ಅವುಗಳ ಮೌಲ್ಯ ಸೀಮಾತೀತವಾದದ್ದು. ಭಾರತದ ಉದಾಹರಣೆಯನ್ನೇ ತೆಗೆದು ಕೊಂಡಾಗ ಹೇಗೆ ಹವಾಮಾನ ಬದಲಾವಣೆಯಿಂದ ಏರುತ್ತಿರುವ ತಾಪಮಾನ ಮತ್ತು ಇದರಿಂದ ಪ್ರೇರಿತವಾದ ಬದಲಾಗುತ್ತಿರುವ ಮಳೆಯ ಪ್ರಮಾಣ ದೇಶದ ಒಟ್ಟು ದೇಶೀಯ ಉತ್ಪನ್ನದಲ್ಲಿ ಶೇಕಡಾ 2.8ರಷ್ಟು ಕಡಿತವನ್ನು ತರುವುದೇ ಅಲ್ಲದೆ, 2050ರ ವೇಳೆಗೆ ದೇಶದ ಅರ್ಧದಷ್ಟು ಜನಸಂಖ್ಯೆಯ ಜೀವನಮಟ್ಟ ಇಳಿಕೆಯಾಗಲು ಕಾರಣವಾಗುವ ಸಾಧ್ಯತೆ ಇದೆ ಎಂದು ವಿಶ್ವ ಬ್ಯಾಂಕ್‌ನ ವರದಿಯೊಂದು ಸೂಚಿಸಿದೆ. ನಾವು ಮಾಡುತ್ತಿರುವ ತಪ್ಪುಗಳು, 2050ರ ವೇಳೆಗೆ ಒಂದೆಡೆ ಪ್ರಾಕೃತಿಕ ದುರಂತಗಳ ಹೆಚ್ಚಳಕ್ಕೆ, ಮತ್ತೊಂದೆಡೆ ಮಾನವರ ಉಳಿವಿಗೆ ಧಕ್ಕೆ ತರುವಂಥ ಪರಿಸ್ಥಿತಿಗಳನ್ನು ಸೃಷ್ಟಿಸಲು ಹೇಗೆ ಕಾರಣವಾಗುತ್ತವೆ ಎಂಬುದನ್ನು ಸಂಶೋಧನೆಗಳು ತೋರಿಸುತ್ತಿವೆ.

ಪ್ರಸಕ್ತ ವರ್ಷದ ಈ ಎರಡು ದಿನಾಚರಣೆಗಳ ಆಶಯಗಳು ಹೆಚ್ಚು–ಕಡಿಮೆ ಒಂದೇ ಆಗಿವೆ. ನೈರ್ಮಲ್ಯ ಮತ್ತು ಆರೋಗ್ಯಕ್ಕೂ, ನೀರಿಗೂ ಮತ್ತು ಅರಣ್ಯಕ್ಕೂ ನೇರವಾದ ಸಂಬಂಧವಿರುವುದರಿಂದ ಒಂದು ಗುರಿಯನ್ನು ಹೊರತುಪಡಿಸಿ ಮತ್ತೊಂದನ್ನು ಸಾಧಿಸಲು ಸಾಧ್ಯವೇ ಇಲ್ಲ. ಅರಣ್ಯದ ಉಳಿವು–ಅಳಿವುಗಳಿಗೆ ಕಾರಣವಾಗುವ ಪರಿಸ್ಥಿತಿಗಳೇ ನೀರಿನ ಮೂಲಗಳನ್ನು ಕಲುಷಿತಗೊಳಿಸಲು ಕಾರಣವಾಗುವುದರಿಂದ, ಮಾನವ ಆರೋಗ್ಯ ರಕ್ಷಣೆಯಾಗಬೇಕಾದರೆ ಪ್ರಾಕೃತಿಕ ಸಂಪತ್ತಿನ ಸುಸ್ಥಿರ ನಿರ್ವಹಣೆಗೆ ಪ್ರಥಮ ಪ್ರಾಶಸ್ತ್ಯ ನೀಡಬೇಕು. ಹಾಗೆಯೇ ನೀರಿನ ಸುಸ್ಥಿರ ನಿರ್ವಹಣೆಯಿಂದ ವಾಸಸ್ಥಾನಗಳ, ಆಹಾರ ಸೇವನಾ ಕ್ರಮಗಳ ಶುಚಿತ್ವ ಹೆಚ್ಚಿ ಮಾನವ ಬದುಕಿನ ಗುಣಮಟ್ಟವೂ ಏರುತ್ತದೆ.

ಅರಣ್ಯ ಮತ್ತು ಮರಗಳು ನೀರಿನ ಚಕ್ರವನ್ನು ನಿಯಂತ್ರಿಸುವ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆಯಾದ್ದರಿಂದ ಜಲ ಸಂರಕ್ಷಣೆಗೂ ಅರಣ್ಯದ ಸುಸ್ಥಿರ ನಿರ್ವಹಣೆಗೂ ನಿಕಟ ಸಂಬಂಧವಿದೆ. ಅಷ್ಟೇ ಅಲ್ಲದೆ ನೀರಿನ ಗುಣಮಟ್ಟವನ್ನು ನಿರ್ಧರಿಸುವಲ್ಲಿಯೂ ಅರಣ್ಯ ಸಂಪನ್ಮೂಲಗಳ ಪಾತ್ರ ಹಿರಿದು. ಹೆಚ್ಚುತ್ತಿರುವ ಜನಸಂಖ್ಯೆ, ನಗರೀಕರಣ ಮತ್ತು ಬೃಹತ್ ಅಭಿವೃದ್ಧಿ ಯೋಜನೆಗಳು ನೀರಿನ ಪ್ರಧಾನ ಮೂಲವಾದ ಪ್ರಾಕೃತಿಕ ಸಂಪತ್ತಿನ ವಿನಾಶಕ್ಕೆ ಕಾರಣವಾಗುತ್ತವೆ. ಕಲುಷಿತ ನೀರಿನ ಬಳಕೆ ಸಾರ್ವಜನಿಕ ಆರೋಗ್ಯದ ಗುಣಮಟ್ಟ ಇಳಿಯಲು ಮೂಲ ಕಾರಣವಾಗಿದ್ದು ಈಗ ಲಾದರೂ ಭವಿಷ್ಯದ ಅಭಿವೃದ್ಧಿ ಯೋಜನೆಗಳನ್ನು ರೂಪಿಸುವಾಗ ಅರಣ್ಯ ಮತ್ತು ನೀರು– ಇವುಗಳೆರಡರ ಸಂರಕ್ಷಣೆಗೆ ಸಮಾನ ಪ್ರಾಧಾನ್ಯತೆಯನ್ನು ನೀಡುವಂತಾಗಬೇಕು. ಹೀಗೆ ಆಗದಿದ್ದಲ್ಲಿ ಸುಸ್ಥಿರ ಅಭಿವೃದ್ಧಿ ಯೋಜನೆಗಳು 2030ರ ವೇಳೆಗೆ ಸಾಕಾರವಾಗುವುದಿರಲಿ, 2050ನೇ ಇಸವಿಯಲ್ಲೂ ಕೇವಲ ಆಶಯಗಳಾಗಿಯೇ ಉಳಿಯುವುದರಲ್ಲಿ ಸಂದೇಹವಿಲ್ಲ.

ಟಿಬಿ ತೊಲಗಿಸಿ, ಜೀವ ಉಳಿಸಿ...

ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಕ್ಷಯ(ಟಿಬಿ) ರೋಗವು ಒಂದು ಪ್ರಮುಖ ಸಾರ್ವಜನಿಕ ಆರೋಗ್ಯ ಸಮಸ್ಯೆಯಾಗಿದೆ. ಮಾರ್ಚ್ 24, 1882ರಂದು ಕ್ಷಯರೋಗಕ್ಕೆ ಕಾರಣವಾಗುವ ಟಿಬಿ ಬ್ಯಾಸಿಲ್ಲಿಯನ್ನು ಡಾ ರಾಬರ್ಟ್ ಖಾಕ್ ಕಂಡುಹಿಡಿದರು. ವಿಶ್ವ ಆರೋಗ್ಯ ಸಂಸ್ಥೆಯು ಡಾ.ಖಾಕ್ ಅವರ ಆವಿಷ್ಕಾರದ 100ನೇ ವಾರ್ಷಿಕೋತ್ಸವದ ನೆನಪಿಗಾಗಿ ಮಾರ್ಚ್ 24, 1982 ರಂದು ಮೊದಲ 'ವಿಶ್ವ ಕ್ಷಯ ದಿನ' ಆಚರಿಸಿತು.

ಸಾಂಕ್ರಾಮಿಕ ರೋಗಶಾಸ್ತ್ರ: ಕ್ಷಯರೋಗವು ಜಾಗತಿಕವಾಗಿ ಎಲ್ಲಾ ವಯೋಮಾನದ ಮಕ್ಕಳಿಗೆ, ವಿಶೇಷವಾಗಿ ಚಿಕ್ಕ ಮಕ್ಕಳಲ್ಲಿ ವ್ಯಾಪಿಸಿ, ಬಾಧಿಸುತ್ತದೆ. ಗ್ಲೋಬಲ್ ಟಿಬಿ ವರದಿ 2021ರ ಪ್ರಕಾರ, ಪ್ರತಿ ವರ್ಷ ಸುಮಾರು 3.06 ಲಕ್ಷ ಮಕ್ಕಳು (0–14 ವರ್ಷ ವಯಸ್ಸಿನವರು) ಟಿಬಿಯಿಂದ ಬಳಲುತ್ತಿದ್ದಾರೆ ಎಂದು ಅಂದಾಜಿಸಲಾಗಿದೆ. ಇದು ರಾಷ್ಟ್ರೀಯ ಕ್ಷಯರೋಗ ನಿರ್ಮೂಲನಾ ಕಾರ್ಯಕ್ರಮ(NTEP)ದ ವರದಿಯಾದ ಒಟ್ಟು ಅಂದಾಜು ಟಿಬಿ ಪ್ರಕರಣಗಳಲ್ಲಿ ಸುಮಾರು ಶೇ.11 ರಷ್ಟಿದೆ.

ಭಾರತದಲ್ಲಿ, ಬಾಲ್ಯದ ಕ್ಷಯ ರೋಗವು ಒಂದು ದಿಗ್ಭ್ರಮೆಗೊಳಿಸುವಂತಿದೆ. ಇದು ಜಾಗತಿಕ ಭಾರದ ಹೊರೆಯ ಸರಿ–ಸುಮಾರು ಶೇ.31 ಆಗಿದೆ. ಕಳೆದ ದಶಕದಲ್ಲಿ ಸತತವಾಗಿ, ಪ್ರತೀ ವರ್ಷ NTEP ಅಡಿಯಲ್ಲಿ ಚಿಕಿತ್ಸೆ ಪಡೆದ ರೋಗಿಗಳಲ್ಲಿ ಶೇ.6–7 ಮಕ್ಕಳೇ ಸೇರಿದ್ದಾರೆ.


2021 ರಲ್ಲಿ ಟಿಬಿ ಯ ಆರಂಭಿಕ ಪತ್ತೆ ಮತ್ತು ಚಿಕಿತ್ಸೆಗಾಗಿ ದೇಶಾದ್ಯಂತ 22 ಕೋಟಿ ರೂ.ಗೂ ಹೆಚ್ಚು ಜನರಿಗೆ ಟಿಬಿ ಪರೀಕ್ಷೆ ಮಾಡಲಾಗಿದೆ. ಈ ಹೊಸ ಉಪಕ್ರಮ ಪ್ರಧಾನಮಂತ್ರಿ ಟಿಬಿ ಮುಕ್ತ ಭಾರತ್ ಅಭಿಯಾನದ ಅಡಿಯಲ್ಲಿ 40,000 ಕ್ಕೂ ಹೆಚ್ಚು ನಿಕ್ಷಯ್ ಮಿತ್ರ ದೇಶಾದ್ಯಂತ 10.45 ಲಕ್ಷ ಟಿಬಿ ರೋಗಿಗಳ ಬಗ್ಗೆ ನಿಗಾವಹಿಸುತ್ತಿದೆ.

Covid-19 ಸಾಂಕ್ರಾಮಿಕ ಸಮಯದಲ್ಲಿ, 2019ಕ್ಕೆ ಹೋಲಿಸಿದರೆ ಚಿಕಿತ್ಸೆಯಲ್ಲಿ ಪ್ರಾರಂಭಿಸಿದ ಔಷಧಿ ನಿರೋಧಕ TB (DR-TB) ರೋಗಿಗಳ ಒಟ್ಟು ಸಂಖ್ಯೆಯಲ್ಲಿ ಗಮನಾರ್ಹ ಇಳಿಕೆ ಕಂಡುಬಂದಿದೆ. 2020 ಮತ್ತು 2021ರಲ್ಲಿ ಈ ಸಂಖ್ಯೆಯಲ್ಲಿ ಶೇ.14 ಮತ್ತು ಶೇ.9ರಷ್ಟು ಇಳಿಕೆ ಕಂಡುಬಂದಿದೆ. ಅಂದಾಜು ಸಂಖ್ಯೆಗಳಿಗೆ ಹೋಲಿಸಿದರೆ ಬಹು ಔಷಧ ನಿರೋಧಕ (multi drug resistant-MDR)ರೋಗಿಗಳು ಚಿಕಿತ್ಸೆಯನ್ನು ತೆಗೆದುಕೊಳ್ಳುತ್ತಾರೆ. ಈ ಸಾಂಕ್ರಾಮಿಕ ರೋಗವು ಚತುರ ಪರಿಹಾರಗಳು, ಆರೋಗ್ಯ–ವ್ಯವಸ್ಥೆಯನ್ನು ಬಲಪಡಿಸುವುದು ಮತ್ತು ಸಾರ್ವಜನಿಕ ಆರೋಗ್ಯ ಕಾರ್ಯಕ್ರಮದ ವಿತರಣೆಯನ್ನು ನಿರಂತರವಾಗಿ ವಿಸ್ತರಿಸುವ ಮಾರ್ಗಗಳನ್ನು ರೂಪಿಸಿದೆ.

ನಿಕ್ಷಯ್ ಪ್ರಕಾರ, 2020ರಲ್ಲಿ ಸೂಚಿಸಲಾದ ಡಿಎಸ್–ಟಿಬಿ ರೋಗಿಗಳಲ್ಲಿ ವರದಿಯಾದ ಒಟ್ಟು ಸಾವಿನ ಸಂಖ್ಯೆ 76002 (2020ರ ಒಟ್ಟು ಅಧಿಸೂಚನೆಗಳಲ್ಲಿ ಶೇ.4.3). ಇದು ದೇಶದ ಅಂದಾಜಿನ ಶೇ.15.4 ಆಗಿದೆ. ಹಾಗಾಗಿ ಟಿಬಿ ಮರಣದ ಕಣ್ಗಾವಲು ಮತ್ತು ಪ್ರತಿಕ್ರಿಯೆ ವ್ಯವಸ್ಥೆಯ ಜೊತೆಗೆ ಹೆರಿಗೆ ಸಂದರ್ಭದ ಮರಣದ ಕಣ್ಗಾವಲು ವ್ಯವಸ್ಥೆಯನ್ನು ಸ್ಥಾಪಿಸಿ, ಅದರಲ್ಲಿರುವ ಕೊರತೆಗಳನ್ನು ಹೋಗಲಾಡಿಸುವುದು ಅತ್ಯಂತ ಅಗತ್ಯವಾಗಿದೆ.

ಈ ಕಾರ್ಯಕ್ರಮಕ್ಕೆ ಬೆಂಬಲವಾಗಿ ನಿಲ್ಲಬೇಕೆಂದರೆ, ಆರೋಗ್ಯ ಕ್ಷೇತ್ರಕ್ಕೆ ಹೆಚ್ಚು ಬಂಡವಾಳ ನೀಡಬೇಕು. ನಿಕ್ಷಯ್ ಪೋಷಣ್ ಯೋಜನೆಯ ಮೂಲಕ ಅಧಿಕ ಆಹಾರ ಪೋಷಣೆಯನ್ನು ಒದಗಿಸಬೇಕು. ಭಾರತ ಸರ್ಕಾರ ಮತ್ತು ಖಾಸಗಿ ಆರೋಗ್ಯ ವಲಯಗಳು ಒಟ್ಟಾಗಿ ಕ್ಷಯ ರೋಗಕ್ಕೆ ಸಂಬಂಧಿಸಿದಂತೆ ಒಂದು ರಾಷ್ಟ್ರಮಟ್ಟದ ಸಾಂಕ್ರಮಿಕ ಸರ್ವೆಯನ್ನು ಮಾಡಿ ರಾಷ್ಟ್ರ ಮಟ್ಟದ ಪ್ರಚಾರವನ್ನು ಕೈಗೊಳ್ಳುವುದು ಅವಶ್ಯಕ.

ಇಂದು ವಿಶ್ವ ಕ್ಷಯ ರೋಗ



ನ್ಯಾಷನಲ್ ಟಿಬಿ ಎಲಿಮಿನೇಷನ್ ಪ್ರೋಗ್ರಾಂ (ಎನ್‌ಟಿಇಪಿ) ಟಿಬಿಯನ್ನು ಪರಿಹರಿಸುವ ಸಾಮರ್ಥ್ಯವನ್ನು ಸ್ಥಿರವಾಗಿ ಹೆಚ್ಚಿಸಿದೆ. ಕಾರ್ಯಕ್ರಮವು ಉತ್ತಮ ಅಭ್ಯಾಸಗಳು ಮತ್ತು ಯಶಸ್ಸಿನ ಕಥೆಗಳನ್ನು ವಿನ್ಯಾಸಗೊಳಿಸಿದೆ ಮತ್ತು ಆರೋಗ್ಯ ವಿತರಣೆಯ ವಿವಿಧ ಹಂತಗಳಲ್ಲಿ ನಿರ್ದಿಷ್ಟ ಆರೋಗ್ಯ ಫಲಿತಾಂಶವನ್ನು ನೀಡಿದೆ.

ಅಪೌಷ್ಟಿಕತೆ, ಮಧುಮೇಹ, ಎಚ್‌ಐವಿ, ನಿಷ್ಕ್ರಿಯ ಧೂಮಪಾನದಂತಹ ಸಹರೋಗಗಳು ಟಿಬಿ ಹೊಂದಿರುವ ವ್ಯಕ್ತಿಯ ಪ್ರವೃತ್ತಿ ಮತ್ತು ತೀವ್ರತೆಯ ಮೇಲೆ ಪರಿಣಾಮ ಬೀರುತ್ತವೆ. ಕ್ಷಯ ರೋಗ ನಿರ್ಮೂಲನೆಗಾಗಿ ಭಾರತದ ರಾಷ್ಟ್ರೀಯ ಕಾರ್ಯತಂತ್ರದ ಯೋಜನೆ (ಎನ್‌ಎಸ್‌ಪಿ 2017–25)ಯ ನಾಲ್ಕು ನಿರ್ಣಾಯಕ ಸ್ತಂಭಗಳಲ್ಲಿ (ಪತ್ತೆ – ಚಿಕಿತ್ಸೆ – ತಡೆಗಟ್ಟುವಿಕೆ – ನಿರ್ಮಾಣ) ತಡೆಗಟ್ಟುವಿಕೆ ಒಂದಾಗಿದೆ. ಇದು ಖಾಯಿಲೆಗೆ ಸುಲಭ ತುತ್ತಾಗುವ ಜನಸಂಖ್ಯೆಯಲ್ಲಿ ಟಿಬಿ ಬರದಂತೆ ತಡೆಗಟ್ಟುವಲ್ಲಿ ಸಹಾಯವಾಗುತ್ತದೆ.

ಕಾರ್ಯಕ್ರಮವು ಒಂದು ದಶಕಕ್ಕೂ ಹೆಚ್ಚು ಕಾಲ TB Preventive Therapy (ಟಿಪಿಟಿ–ಕ್ಷಯರೋಗ ತಟೆಗಟ್ಟುವ ಚಿಕಿತ್ಸೆ) ಅನ್ನು ನೀಡುತ್ತಿದೆ. ಆದರೂ ಆರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಮತ್ತು ಕಳೆದ ಕೆಲವು ವರ್ಷಗಳಿಂದ HIV/AIDS (PLHIV)ಯೊಂದಿಗೆ ವಾಸಿಸುವ ಜನರಿಗೆ ಸೀಮಿತವಾಗಿದೆ. ಆದಾಗ್ಯೂ, ಟಿಪಿಟಿಯಂತಹ ತಡೆಗಟ್ಟುವ ಕ್ರಮಗಳನ್ನು ವೇಗಗೊಳಿಸುವ ಮೂಲಕ 2025ರ ವೇಳೆಗೆ ಟಿಬಿಯನ್ನು ಕೊನೆಗೊಳಿಸುವ ಗುರಿಯನ್ನು ಬಲಪಡಿಸಲು ಎನ್‌ಟಿಇಪಿ 2021ರಲ್ಲಿ ಟಿಪಿಟಿ ಅನ್ನು ವಿಸ್ತರಿಸುವ ಮೂಲಕ 2021ರಲ್ಲಿ ಇಂಡೆಕ್ಸ್ ಪಲ್ಮನರಿ ಟಿಬಿ ರೋಗಿಗಳ ಎಲ್ಲಾ ಮನೆಯ ಸಂಪರ್ಕಗಳಿಗೆ (HHC) ಪಲ್ಮನರಿ ಟಿಬಿ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿದೆ.

ದೀರ್ಘ ಚಿಕಿತ್ಸೆಯು ಒಳಗೊಳ್ಳುವ ಸವಾಲುಗಳನ್ನು ಜಯಿಸಲು, ಮೂರು ತಿಂಗಳ ಸಾಪ್ತಾಹಿಕ ರಿಫಾಪೆಂಟೈನ್ ಮತ್ತು ಐಸೋನಿಯಾಜಿಡ್ (3HP) ಜೊತೆಗೆ ಹೊಸ ಮತ್ತು ಕಡಿಮೆ ಟಿಪಿಟಿ ಆರು ತಿಂಗಳ ದೈನಂದಿನ ಜೀವನ Isoniazid ಕಟ್ಟುಪಾಡಿ (6H) ಗೆ ಪರ್ಯಾಯವಾಗಿ ಶಿಫಾರಸು ಮಾಡಲಾಗಿದೆ. ಈ ನೀತಿ ನಿರ್ಧಾರಗಳು ಮತ್ತು ಅವುಗಳ ಅನುಷ್ಠಾನವು (ಭಾರತದಲ್ಲಿ ಟಿಬಿ ಪ್ರಿವೆಂಟೀವ್ ಟ್ರೀಟ್‌ಮೆಂಟ್‌ನ ಪ್ರೋಗ್ರಾಮ್ಯಾಟಿಕ್ ಮ್ಯಾನೇಜ್‌ಮೆಂಟ್ (ಪಿಎಂಟಿಪಿಟಿ) ಬಿಡುಗಡೆಯೊಂದಿಗೆ ಸಂಕ್ಷಿಪ್ತಗೊಳಿಸಲಾಗಿದೆ. ಟಿಬಿ ರೋಗ ಲಕ್ಷಣಗಳನ್ನು ಹೊಂದಿರುವ ಮಕ್ಕಳನ್ನು ಮೊದಲೇ ಪತ್ತೆಹಚ್ಚುವ ಮಾರ್ಗಗಳನ್ನು ಸ್ಥಾಪಿಸಲು ಮತ್ತು ಆರಂಭಿಕ ರೋಗನಿರ್ಣಯ ಮತ್ತು ಚಿಕಿತ್ಸೆಯ ಪ್ರಾರಂಭಕ್ಕಾಗಿ ಅವರನ್ನು ಟ್ರ್ಯಾಕ್ ಮಾಡಲು, ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮ್(RBSK) ಮತ್ತು ರಾಷ್ಟ್ರೀಯ ಕಿಶೋರ್ ಸ್ವಾಸ್ಥ್ಯ ಕಾರ್ಯಕ್ರಮ್(RKSK) ಸಹಯೋಗದೊಂದಿಗೆ "ಮಕ್ಕಳು ಮತ್ತು ಹದಿಹರೆಯದವರಲ್ಲಿ ಕ್ಷಯರೋಗವನ್ನು ತಡೆಗಟ್ಟಲು ಸಹಯೋಗದ ಚೌಕಟ್ಟನ್ನು" ಪ್ರಾರಂಭಿಸಿತು. ಈ ಸಂಯೋಜಿತ ಚೌಕಟ್ಟು ಬಾಲ್ಯದ ಕ್ಷಯ ರೋಗದ ಕುರಿತು ಸಮುದಾಯದ ಅರಿವನ್ನು ಹೆಚ್ಚಿಸಲು, ಬೇಡಿಕೆಯನ್ನು ಸೃಷ್ಟಿಸಲು ಮತ್ತು ರೋಗ ತಡೆಗಟ್ಟುವಿಕೆ ಮತ್ತು ಆರಂಭಿಕ ಆರೋಗ್ಯ–ಅನ್ವೇಷಣೆಯನ್ನು ಉತ್ತೇಜಿಸಲು ಪ್ರಯತ್ನಿಸುತ್ತಿದೆ.

> **ಎನ್‌ಟಿಇಪಿ ಅಡಿ ಈ ಯೋಜನೆಗಳು ಚಾಲ್ತಿಯಲ್ಲಿವೆ**
> - ನಿಕ್ಷಯ್ ಪೋಷಣ್ ಯೋಜನೆ (NPY)
> - ಅಧಿಸೂಚಿತ ಬುಡಕಟ್ಟು ಪ್ರದೇಶಗಳಲ್ಲಿ ಟಿಬಿ ರೋಗಿಗಳಿಗೆ ಸಾರಿಗೆ ಬೆಂಬಲ
> - ಚಿಕಿತ್ಸೆ ಬೆಂಬಲಿಗರಿಗೆ ಗೌರವಧನ
> - ಅಧಿಸೂಚನೆ ಮತ್ತು ಚಿಕಿತ್ಸೆಯ ಫಲಿತಾಂಶ

ಮಕ್ಕಳ ಔಷಧ–ನಿರೋಧಕ ಕ್ಷಯರೋಗ: ಮಕ್ಕಳ DR-TB ಡೇಟಾದ ಕೊರತೆಯು ಜಾಗತಿಕವಾಗಿ ಮತ್ತು ರಾಷ್ಟ್ರೀಯವಾಗಿ ಸವಾಲಾಗಿ ಉಳಿದಿದೆ. 1,15,000 ಗುರಿಯಲ್ಲಿ 12,200(ಶೇ.11) ಮಾತ್ರ ಜಾಗತಿಕವಾಗಿ ಮಕ್ಕಳ ವಯಸ್ಸಿನವರಿಗೆ ಗುರಿ ಸಾಧಿಸಲಾಗಿದೆ. ಮಕ್ಕಳಲ್ಲಿ MDR-TB ವಯಸ್ಕರಲ್ಲಿ MDR-TB ಅನ್ನು ಪ್ರತಿಬಿಂಬಿಸುತ್ತದೆ ಮತ್ತು ಆದ್ದರಿಂದ ವಯಸ್ಕರಲ್ಲಿ MDR-TB ಪೂಲ್ ಇರುವ ಸೆಟ್ಟಿಂಗ್‌ಗಳಲ್ಲಿ ಇದು ಸಾಮಾನ್ಯವಾಗಿದೆ. ಮಕ್ಕಳಲ್ಲಿ ಔಷಧ ನಿರೋಧಕ TB (DR-TB) ಪ್ರಸರಣವು ಮುಖ್ಯವಾಗಿ ದೃಢಪಡಿಸಿದ MDR-TB ರೋಗಿಯ (ಸಾಮಾನ್ಯವಾಗಿ ವಯಸ್ಕರು ಅಥವಾ ಹದಿಹರೆಯದ) ನಿಕಟ ಸಂಪರ್ಕದಿಂದ ಮತ್ತು ಹಿಂದೆ ಅಸಮರ್ಪಕ TB ಚಿಕಿತ್ಸೆಯ ಮೂಲಕ ಸಾಮಾನ್ಯವಾಗಿದೆ. ಇಂಡಿಯನ್ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್ (IAP) ಸಾರ್ವಜನಿಕ ಮತ್ತು ಖಾಸಗಿ ವಲಯಗಳಲ್ಲಿ ಮಕ್ಕಳ ವೈದ್ಯರ ನಿರಂತರ ವೈದ್ಯಕೀಯ ಶಿಕ್ಷಣ (CME) ಮತ್ತು ತರಬೇತಿ ಕಾರ್ಯಾಗಾರಗಳ ಮೂಲಕ ಸಹಾಯ ಮಾಡಿದೆ.

–ಡಾ.ಸುಧಾ ರುದ್ರಪ್ಪ, ನಿವೃತ್ತ ಪ್ರಾಧ್ಯಾಪಕರು, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com



ಜಾಗತಿಕ ನಾಗರಿಕರನ್ನೊಳಗೊಂಡಂತೆ ಇತಿಹಾಸ, ರಾಯಭಾರತ್ವ, ಪರಿಸರ ವಿಚಾರಗಳು, ಸುಸ್ಥಿರ ಗುರಿಗಳು ಕುರಿತಾದ ದಕ್ಷ ಕಾಲೇಜು ಚೇರ್ಮನ್ ಹಾಗೂ ವಿಶ್ವ ಸಂಸ್ಥೆ ಮಾಜಿ ವೃತ್ತಿಪರರಾದ ಪಿ.ಜಯಚಂದ್ರರಾಜು ಅವರ 'ಭಾರತ ಮತ್ತು ಯುನೈಟೆಡ್ ನೇಷನ್ಸ್' ಪುಸ್ತಕ ಸಂಬಂಧ ನಡೆದಂತಹ ಸಮಾಲೋಚನಾ ಸಭೆಯಲ್ಲಿ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಗ್ಲೋಬಲ್ ಎಜುಕೇಷನ್ ಟ್ರಸ್ಟ್‌ನ ಪಿ.ಜಯಚಂದ್ರರಾಜು ಕುಟುಂಬದ ವತಿಯಿಂದ ಅಭಿನಂದಿಸಲಾಯಿತು. ಚಿತ್ರದಲ್ಲಿ ಟ್ರಸ್ಟ್‌ನ ಉಪಾಧ್ಯಕ್ಷರಾದ ಅನಿತಾ ಉಮಾಶಂಕರ್, ಕಾರ್ಯದರ್ಶಿ ಸೋನಿಯಾ ಉಮಾಪತಿ, ಮ್ಯಾನೇಜಿಂಗ್ ಡೈರೆಕ್ಟರ್ ಗೌತಮ್ ರಾಜು, ದಕ್ಷ ಪದವಿ ಕಾಲೇಜು ಪ್ರಿನ್ಸಿಪಾಲ್ ಡಾ.ರಮ್ಯಾ, ದಕ್ಷ ಪಿಯು ಕಾಲೇಜು ಪ್ರಿನ್ಸಿಪಾಲ್ ಅಭಿಷೇಕ್, ಡೆವಲಪ್‌ಮೆಂಟ್ ಡೈರೆಕ್ಟರ್ ರತ್ನಾಕರ್ ಶಾನ್‌ಭಾಗ್ ಇದ್ದಾರೆ.





ಹಿಂದುತ್ವದ ಬಗ್ಗೆ ಅವಹೇಳನಕಾರಿ ಪೋಸ್ಟ್: ನಟ ಚೇತನ್‌ಗೆ ಜಾಮೀನು

ಬೆಂಗಳೂರು: ಹಿಂದು ಧರ್ಮದ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಪೋಸ್ಟ್ ಮಾಡಿದ ಆರೋಪದ ಮೇರೆಗೆ ಬಂಧನವಾಗಿದ್ದ ನಟ ಚೇತನ್‌ಗೆ 32ನೇ ಎಸಿಎಂಎಂ ನ್ಯಾಯಾಲಯ ಜಾಮೀನು ನೀಡಿದೆ. 25 ಸಾವಿರ ರೂ. ವೈಯಕ್ತಿಕ ಬಾಂಡ್ ಮತ್ತು ಒಬ್ಬರ ಭದ್ರತೆ ನೀಡಲು ಸೂಚನೆ ನೀಡಲಾಗಿದೆ.

ಪೋಸ್ಟ್‌ನಲ್ಲೇನಿತ್ತು?: ಹಿಂದುತ್ವವನ್ನು ಸುಳ್ಳಿನ ಆಧಾರದ ಮೇಲೆ ಕಟ್ಟಲಾಗಿದೆ ಎಂದು ಬರೆದುಕೊಂಡಿದ್ದರು. ರಾಮನು ರಾವಣನನ್ನು ಸೋಲಿಸಿ ಅಯೋಧ್ಯೆಗೆ ಹಿಂದಿರುಗಿದಾಗ ಭಾರತೀಯ ರಾಷ್ಟ್ರ ಪ್ರಾರಂಭವಾಯಿತು ಎಂಬುದು ಸುಳ್ಳು. ಬಾಬರಿ ಮಸೀದಿ ರಾಮನ ಜನ್ಮಭೂಮಿ ಎಂದು ನಂಬಿರುವುದು ಸುಳ್ಳು. ಹಿಂದುತ್ವವನ್ನು ಸತ್ಯದಿಂದ ಸೋಲಿಸಬಹುದಾಗಿದೆ ಎಂದು ಬರೆದುಕೊಂಡಿದ್ದರು.

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀ ಟಿ ನಾಗರಾಜು (ಬಾಂಡ್)
(ದಿ. ನರಗಮ್ಮ ಮತ್ತು ದಿ.ತಿಮ್ಮಯ್ಯನವರ ಪುತ್ರ, ಕೆ.ಜಿ.ಕೊಪ್ಪಲು)

ಇವರು ದಿನಾಂಕ: 14-03-2023ನೇ ಮಂಗಳವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧ ಉತ್ತರ ಕ್ರಿಯಾದಿ ಭೂಶಾಂತಿಯನ್ನು ದಿನಾಂಕ: 24-03-2023 ಶುಕ್ರವಾರ ಬೆಳಿಗ್ಗೆ 10.00 ಗಂಟೆಗೆ, ಶ್ರೀ ಮುರುಳೀಶ್ವರ ದೇವಸ್ಥಾನ ಛತ್ರ, ಕಾವೇರಿ ಶಾಲೆ ಎದುರು, ಕುವೆಂಪುನಗರ ಇಲ್ಲಿ ನೆರವೇರಿಸುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕೆಂದು ವಿನಂತಿ. **ದುಃಖತಪ್ತರು:** ಪತ್ನಿ ಲಲಿತಮ್ಮ, ಮಕ್ಕಳು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು
ಭೋಜನ: ಮಧ್ಯಾಹ್ನ 12.30ಕ್ಕೆ











ಗೌರವಾನ್ವಿತ ಹೆಚ್ಚುವರಿ ಹಿರಿಯ ಶ್ರೇಣಿ ಸಿವಿಲ್ ಜಡ್ಜ್ ನ್ಯಾಯಾಲಯ, ಹುಣಸೂರು
ಒ.ಎಸ್. ನಂ. 153 / 2021
ವಾದಿ: ಶ್ರೀ ಕೆಂಪಲಿಂಗೇಗೌಡ
ವಿರುದ್ಧ
ಪ್ರತಿವಾದಿಗಳು: ಪುಟ್ಟಗಂಗೇಗೌಡ ಮತ್ತು ಇತರರು

ಪ್ರಕಟಣೆ

ಮೇಲ್ಕಂಡ ವಾದಿ ಪ್ರತಿವಾದಿಗಳ ವಿರುದ್ಧ ಚಿಕ್ಕಹುಣಸೂರು ಗ್ರಾಮದ ಸರ್ವೆ ನಂ. 109/1 ರಲ್ಲಿ 2 ಎಕರೆ 36 ಗುಂಟೆ, ಸರ್ವೆ ನಂ. 122 ರಲ್ಲಿ 5 ಎಕರೆ 24 ಗುಂಟೆ, 58/1 ರಲ್ಲಿ 1 ಎಕರೆ 20 ಗುಂಟೆ, 58/6 ರಲ್ಲಿ 0.20 ಗುಂಟೆ, 110/1 ರಲ್ಲಿ 2 ಎಕರೆ 16 ಗುಂಟೆ, ಹನುಮಂತಪುರ ನಾಲಾಕ್ಕೆ ಸೇರಿದ ಸರ್ವೆ ನಂ. 65/1 ರಲ್ಲಿ 0.33 ಗುಂಟೆ, 65/2 ರಲ್ಲಿ 1 ಎಕರೆ 10 ಗುಂಟೆ, 65/3 ರಲ್ಲಿ 0.16 ಗುಂಟೆ, ಹುಣಸೂರು ಪಟ್ಟಣದಲ್ಲಿರುವ ಒಂದು ಆರ್.ಸಿ.ಸಿ. ಮನೆ, ಎರಡು ಮಂಗಳೂರು ಹೆಂಚಿನ ಮನೆ ಮತ್ತು ಒಂಟೆ ಪಾಳ್ಯ ಬೋರೆಯಲ್ಲಿರುವ ಒಂದು ನಿವೇಶನಗಳ ಬಗ್ಗೆ ಹಿಸ್ಸೆಗಾಗಿ ಈ ದಾವೆಯನ್ನು ಪ್ರತಿವಾದಿಗಳ ವಿರುದ್ಧ ತಂದಿರುತ್ತಾರೆ. ಈಗಿರುವಾಗ 6ನೇ ಪ್ರತಿವಾದಿಯಾದ ನೀವು ನಾಗೇಂದ್ರರಾವ್, 67 ವರ್ಷ, ಲೇಟ್ ವೆಂಕಟರಾವ್ ಜಗಪತ್, ಚೌಡಿಕಟ್ಟೆ, ಕಸಬಾ ಹೋಬಳಿ, ಹುಣಸೂರು ತಾಲ್ಲೂಕು. ಈ ವಿಳಾಸದಲ್ಲಿ ವಾಸವಾಗಿದ್ದು ಈ ನ್ಯಾಯಾಲಯದಿಂದ ಅನೇಕ ಬಾರಿ ನೋಟೀಸು ಜಾರಿ ಮಾಡಿದರು ಅದೇ ವಿಳಾಸದಲ್ಲಿ ವಾಸವಿದ್ದರೂ ಸಹ ತೆಗೆದುಕೊಂಡಿರುವುದಿಲ್ಲ. ಸದರಿ ದಾವಾವು ದಿನಾಂಕ 10-4-2023 ರಂದು ಬೆಳಗ್ಗೆ 11-00 ಗಂಟೆಗೆ ನಿಗಧಿಪಡಿಸಿದ್ದು, ನೀವು ನ್ಯಾಯಾಲಯವು ನಿಗಧಿಪಡಿಸಿರುವ ದಿನಾಂಕದಂದು ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗತಕ್ಕದ್ದು, ತಪ್ಪಿದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು.

By order of the Court
Sd/- Sheristedar, Civil Judge (Sr. Dn.)
& J.M.F.C. Court, Hunsur

ಸಹಿ/– ಬಿ.ಎ. ಸುರೇಶ್‌ಕುಮಾರ್, ಬಿ.ಕಾಂ., ಎಲ್.ಎಲ್.ಬಿ.
ವಕೀಲರು, ಹುಣಸೂರು
ಮೇಲ್ಕಂಡವಾದಿ ಪರ ವಕೀಲರು



ನಮ್ಮ ಕುಟುಂಬದಿಂದ ಜನಸೇವೆಗಾಗಿ ನನ್ನನ್ನು ಕಳುಹಿಸಿದ್ದಾರೆ

ಮೊಗರಹಳ್ಳಿ ಮಂಟಿಯಲ್ಲಿ 300ಕ್ಕೂ ಹೆಚ್ಚು ಕುಟುಂಬಗಳಿಗೆ ಹಕ್ಕುಪತ್ರ ವಿತರಿಸಿದ ಶಾಸಕ ರವೀಂದ್ರ ಶ್ರೀಕಂಠಯ್ಯ

ಶ್ರೀರಂಗಪಟ್ಟಣ, ಮಾ.23– ನಮ್ಮ ಕುಟುಂಬದಿಂದ ಜನಸೇವೆ ಮಾಡಿ, ಬಡವರ ಪರ ಇರುವಂತೆ ನನ್ನನ್ನು ರಾಜಕಾರಣಕ್ಕೆ ಕಳುಹಿಸಿದ್ದಾರೆ. ನಾನು ಪ್ರಾಮಾಣಿಕವಾಗಿ ಎಲ್ಲಾ ವರ್ಗದ ಜನರ ಜೊತೆ ನಿಂತು ನ್ಯಾಯಕ್ಕಾಗಿ ಹೋರಾಡುತ್ತೇನೆ ಎಂದು ಶಾಸಕ ರವೀಂದ್ರ ಶ್ರೀಕಂಠಯ್ಯ ತಿಳಿಸಿದರು.

ತಾಲೂಕಿನ ಮೊಗರಹಳ್ಳಿ ಮಂಟಿ ಗ್ರಾಮದಲ್ಲಿ 300ಕ್ಕೂ ಹೆಚ್ಚು ಕುಟುಂಬಗಳಿಗೆ ಮನೆ ಮನೆಗೆ ತೆರಳಿ ಹಕ್ಕುಪತ್ರ ವಿತರಿಸಿ ನಂತರ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಜಕಾರಣಕ್ಕೆ ಬರುವುದು ಜನಸೇವೆಗಾಗಿ. ಸಮಾಜದಲ್ಲಿರುವ ಬಡವರು, ಅಶಕ್ತರಿಗೆ ನಮ್ಮ ಕೈಲಾದ ಸೇವೆ ಮಾಡುವ ಮೂಲಕ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವುದು ನಮ್ಮೆಲ್ಲರ ಆಶಯವಾಗಬೇಕು ಎಂದ ಅವರು ಪಕ್ಷ, ರಾಜಕೀಯ ಮಾಡುವುದು ಬೇರೆ. ಆದರೆ ಜನಪರ ಅಭಿವೃದ್ಧಿ ಕೆಲಸ ಮಾಡುವಾಗ ಪಕ್ಷಾತೀತವಾಗಿ ಇರಬೇಕು ಎಂದರು.

ಮೊಗರಹಳ್ಳಿ ಮಂಟಿ ನಿವಾಸಿಗಳಿಗೆ ಹಕ್ಕುಪತ್ರ ಕೊಡುವುದು ಹೇಗೆ ಎಂಬುದು ನನ್ನ ಆಲೋಚನೆಯಾದರೆ, ಅನೇಕ ಮುಖಂಡರು ಇದನ್ನು ತಡೆಯುವುದು ಹೇಗೆ ಎಂದು ಪ್ರಯತ್ನ ನಡೆಸಿದ್ದರು. ಅವರಿಗೆ ಈ ಜಾಗ 20 ಲಕ್ಷ ಬೆಲೆ ಬಾಳುತ್ತದೆ ಇಂತಹ ಆಸ್ತಿಯನ್ನು ಏಕಾಏಕಿ ಸುಮ್ಮನೆ ಕೊಡುವುದು ಹೇಗೆ ಎಂಬ ದುರುದ್ದೇಶ ಅವರದ್ದು. ಅದಕ್ಕಾಗಿ ಇದನ್ನು ತಪ್ಪಿಸಲು ಅನೇಕರು ಪ್ರಯತ್ನಿಸಿದ್ದರು. ಆದರೆ ನಾನು ದಕ್ಷ ಅಧಿಕಾರಿಗಳ ಬೆಂಬಲ ಪಡೆದು ಇಂದು ಇಲ್ಲಿಯ ನಿವಾಸಿಗಳಿಗೆ ಹಕ್ಕುಪತ್ರ ವಿತರಿಸಿರುವುದು ಸಂತೋಷ ತಂದಿದೆ ಎಂದರು. ಈ ಹಕ್ಕು ಪತ್ರವನ್ನು ಜೋಪಾನವಾಗಿಟ್ಟುಕೊಳ್ಳಬೇಕು. ಯಾರಾದರೂ ಕೇಳಿದರೆ ಕೊಡಬಾರದು. ಬದಲಿಗೆ ತಾವೇ ನೇರವಾಗಿ ಪಂಚಾಯಿತಿಗೆ ಹೋಗಿ ಖಾತೆ ಮಾಡಿಸಿಕೊಳ್ಳಬೇಕು. ನಾನು ಖಾತೆ ಮಾಡಿಸಿಕೊಡುತ್ತೇನೆ ಎಂದು ಯಾರಾದರೂ ದಲ್ಲಾಳಿ ಕೆಲಸ ಮಾಡಲು ಬಂದರೆ ದಯವಿಟ್ಟು ಯಾರಿಗೂ 1 ರೂಪಾಯಿ ಕೊಡಬಾರದು ಎಂದರು.

ಪಿಡಿಓ ಸೆಂದಿಲ್ ಹಾಗೂ ಕಂದಾಯ ನಿರೀಕ್ಷಕ ಉಮೇಶ್ ಅವರು ಬಹಳ ಶ್ರಮವಹಿಸಿ ಹಕ್ಕುಪತ್ರ ಸಂಬಂಧ ಸಾಕಷ್ಟು ಹೋರಾಟ ಮಾಡಿದ್ದಾರೆ. ಸೆಂದಿಲ್ ಹಾಗೂ ಉಮೇಶ್ ರವರು ಹಕ್ಕುಪತ್ರ ಕೊಡಿಸುವ ಮೂಲಕ ನನ್ನ ಕೈ ಬಲಪಡಿಸುವ ಕೆಲಸ ಮಾಡಿದ್ದಾರೆ. ತಾಲೂಕು ಆಡಳಿತ ಸೇರಿದಂತೆ ಎಲ್ಲರಿಗೂ ನಾನು ಧನ್ಯವಾದಗಳನ್ನು ಹೇಳುತ್ತೇನೆ ಎಂದರು.

ಮಾರಿಕಣ್ಣು ಹೋರಿ ಮ್ಯಾಗೆ ಎನ್ನುವ ಹಾಗೆ ಮೊಗರಹಳ್ಳಿ ಮಂಟಿಯ ಮೇಲೆ ಹಲವರ ಕಣ್ಣು ಬಿದ್ದಿದೆ. ನೀವು ಯಾರಿಗೂ ಅಂಜಬೇಕಾಗಿಲ್ಲ. ಇದು ನಿಮಗೆ ಸೇರಬೇಕಾದ ಜಾಗ. ನಾನು ಯಾವ ಪಕ್ಷ ಅಂತೆಲ್ಲ ಯೋಚಿಸುವುದಿಲ್ಲ. ಇದರ ಹಿಂದೆ ಪಕ್ಷಾತೀತವಾಗಿ ಎಲ್ಲರ ಸಹಕಾರವಿದೆ. ಪಕ್ಷಾತೀತವಾಗಿ ಎಲ್ಲರೂ ಕೈಜೋಡಿಸಿದಾಗ ಇಂತಹ ಒಳ್ಳೆಯ ಕೆಲಸಗಳು ನಡೆಯುತ್ತವೆ. ನಾನು ಚುನಾವಣೆಯಲ್ಲಿ ಮತ ಕೇಳಲು ಬರುತ್ತೇನೆ. ಈಗ ನಾನು ಏನನ್ನು ಕೇಳುವುದಿಲ್ಲ. ಜನರಿಗೆ ಗೊತ್ತಿದೆ ಯಾವ ಬೀಜದ ಬಿತ್ತನೆ ಹಾಕಿದರೆ ಬೆಳೆ ಜಾಸ್ತಿ ಎಂದು. ನೀವು ಉತ್ತಮ ಬಿತ್ತನೆ ಬೀಜವನ್ನು ನಾಟಿ ಮಾಡಿ ಬೆಳೆ ಬಂದ ನಂತರ ಕುಯ್ಯುಕೊಳ್ಳಿ ಎಂದು ತಿಳಿಸಿದರು.

ಗ್ರಾಪಂ ಸದಸ್ಯೆ ಕೋಮಲಾ ಮಾತನಾಡಿ, ನಾವು ಕಳೆದ 50 ವರ್ಷಗಳಿಂದ ಇಲ್ಲಿ ವಾಸಿಸುತ್ತಿದ್ದೇವೆ. ನಮ್ಮ ಹಿರಿಯರ ಕನಸು ಇಂದು ನನಸಾಗಿದೆ. ಪ್ರತಿ ಚುನಾವಣೆಯಲ್ಲೂ ಹಕ್ಕುಪತ್ರ ಕೊಡಿ, ರಸ್ತೆ, ಚರಂಡಿ ಮಾಡಿಸಿ ಎಂದು ಹಲವು ಮನವಿ ಮಾಡಿದರೂ, ಯಾರೂ ಕೂಡ ಈ ಕೆಲಸಗಳನ್ನು ಮಾಡಿರಲಿಲ್ಲ. ಆದರೆ ರವೀಂದ್ರ ಶ್ರೀಕಂಠಯ್ಯನವರು ಶಾಸಕರಾಗಿ ನಮಗೆ ಹಕ್ಕು ಪತ್ರ ಕೊಡಿಸಿದ್ದಲ್ಲದೆ, ಮೂಲಭೂತ ಸೌಕರ್ಯಗಳನ್ನು ಒದಗಿಸಿ ಕೊಟ್ಟಿದ್ದಾರೆ. ನಮ್ಮ ಜೀವನದುದ್ದಕ್ಕೂ ಇದನ್ನು ಮರೆಯಲು ಸಾಧ್ಯವಿಲ್ಲ ಎಂದರು.

ಈ ವೇಳೆ ಉಪತಹಸೀಲ್ದಾರ್ ಸಾಕಮ್ಮ, ರಾಜಸ್ವ ನಿರೀಕ್ಷಕ ಉಮೇಶ್, ಪಿಡಿಓ ಸೆಂದಿಲ್, ಗ್ರಾಮ ಲೆಕ್ಕಿಗರಾದ ಹರ್ಷಿತಾ, ಗ್ರಾಪಂ ಅಧ್ಯಕ್ಷೆ ರೇಣುಕಾ, ಉಪಾಧ್ಯಕ್ಷ ವಿಶ್ವನಾಥ್, ಗ್ರಾಪಂ ಸದಸ್ಯ ಬಳ್ಳಾರಿಗೌಡ, ಮೀನಾಕ್ಷಿ, ಎಲಿಜಬತ್ ರಾಣಿ, ಅಂಬಿಕಾ, ಉಮಾ, ತರುಣ್, ಗೀತಾ ಮಾಜಿ ಸದಸ್ಯ ಡಾನ್ ಹೆನ್ರಿ, ಷಣ್ಮುಗಂ ಸೇರಿದಂತೆ ಹಲವರಿದ್ದರು.



“ಯುಗಾದಿ ಹಬ್ಬದಂದು ಮೊಗರಹಳ್ಳಿ ಮಂಟಿ ಜನರಿಗೆ ನೈಜವಾಗಿ ಸಿಹಿ ಹಂಚಬೇಕೆಂಬ ಶಾಸಕರ ಅಭಿಲಾಷೆಯನ್ನು ಹಕ್ಕುಪತ್ರ ನೀಡುವ ಮೂಲಕ ಈಡೇರಿಸಿದ್ದೇವೆ. ಹಕ್ಕುಪತ್ರದ ದಾಖಲಾತಿಗಳಲ್ಲಿ ಯಾವುದಾದರೂ ದೋಷವಿದ್ದರೆ ಸರಿಪಡಿಸಲು ನಮ್ಮ ಇಲಾಖೆ ಬದ್ಧವಾಗಿದೆ. ಬಹಳ ವರ್ಷಗಳಿಂದ ಜನರು ಅನುಭವಿಸುತ್ತಿದ್ದ ಸಂಕಷ್ಟ ಇಂದು ನಿವಾರಣೆಯಾಗಿದೆ. ಶಾಸಕ ರವೀಂದ್ರ ಶ್ರೀಕಂಠಯ್ಯ ಅವರು,ಕೆಆರ್ ಎಸ್, ಬೆಳಗೊಳ,ಆನಂದೂರು ಮೊಗರಳ್ಳಿ ಮಂಟಿಯ ಜನರಿಗೆ ಹಕ್ಕುಪತ್ರ ಕೊಡಿಸುವ ಮೂಲಕ ನುಡಿದಂತೆ ನಡೆದಿದ್ದಾರೆ.

– ಡಿ.ಅಶ್ವಿನಿ, ತಹಸೀಲ್ದಾರ್.

ನೀರನ್ನು ವ್ಯರ್ಥ ಮಾಡದೇ ಹಿತಮಿತವಾಗಿ ಬಳಸಲು ಕರೆ



ಕೆ.ಆರ್.ಪೇಟೆ, ಮಾ.23– ಭೂಮಿ ಮೇಲಿರುವ ಸಕಲ ಜೀವರಾಶಿಗೂ ನೀರು ಅತ್ಯಮೂಲ್ಯ ವಸ್ತುವಾಗಿದೆ. ನೀರನ್ನು ಮಿತವಾಗಿ ಬಳಸದಿದ್ದರೇ, ಅಂತರ್ಜಲ ಸಂರಕ್ಷಿಸದಿದ್ದರೇ ನೀರಿಗಾಗಿ 3ನೇ ಮಹಾಯುದ್ಧ ನಡೆದರೆ ಆಶ್ಚರ್ಯಪಡಬೇಕಿಲ್ಲ. ಹೀಗಾಗಿ ನಾವೆಲ್ಲರೂ ನೀರನ್ನು ವ್ಯರ್ಥ ಮಾಡದೇ, ಹಿತಮಿತವಾಗಿ ಬಳಸಬೇಕು ಎಂದು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮೈಸೂರು ಪ್ರಾದೇಶಿಕ ನಿರ್ದೇಶಕ ಜಯರಾಮ ನೆಲ್ಲಿತ್ತಾಯ ತಿಳಿಸಿದರು.

ಪಟ್ಟಣದ ಕೆಪಿಎಸ್ ಶಾಲೆಗೆ ಎರಡೂವರೆ ಲಕ್ಷ ರೂ. ಮೌಲ್ಯದ ಸಾವಿರ ಲೀ. ಸಾಮರ್ಥ್ಯದ ಶುದ್ಧ ಕುಡಿಯುವ ನೀರಿನ ಘಟಕವನ್ನು ಕೊಡುಗೆ ನೀಡಿ ಮಾತನಾಡಿದ ಅವರು, ಜೀವಜಲ ನೀರು ಚಿನ್ನಕ್ಕಿಂತಲೂ ಶ್ರೇಷ್ಠವಾದದು. ಪ್ರಸ್ತುತ ನಾವು ಕುಡಿಯಲು ಬಳಸುವ ನೀರು ಅಶುದ್ಧವಾಗಿದ್ದು, ನಮ್ಮ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆ ಇದೆ. ಹೀಗಾಗಿ ಕುಡಿಯಲು ಶುದ್ಧ ನೀರನ್ನೇ ಬಳಸಬೇಕು. ಒಂದೇ ಒಂದು ಹನಿ ನೀರು ಕೂಡ ವ್ಯರ್ಥವಾಗದಂತೆ ಎಚ್ಚರ ವಹಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಕೆಪಿಎಸ್ ಸ್ಕೂಲ್ ಪ್ರಾಂಶುಪಾಲ ಡಿ.ಬಿ.ಸತ್ಯ, ಉಪಪ್ರಾಂಶುಪಾಲ ತಿಮ್ಮೇಗೌಡ, ಪುರಸಭಾ ಸದಸ್ಯ ಕೆ.ಆರ್.ನೀಲಕಂಠ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಜಿಲ್ಲಾ ನಿರ್ದೇಶಕ ಮಹಾಬಲ ಕುಲಾಲ್, ತಾಲೂಕು ಯೋಜನಾಧಿಕಾರಿ ಮಮತಾಶೆಟ್ಟಿ ಮಾತನಾಡಿ ಜಲ ಸಂರಕ್ಷಣೆ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವಿನ ಜಾಗೃತಿ ಮೂಡಿಸಿದರು.

ಶಾಲಾಭಿವೃದ್ಧಿ ಸಮಿತಿ ಉಪಾಧ್ಯಕ್ಷ ಆಟೋ ವಾಸುದೇವ್, ಸದಸ್ಯ ಮಂಜುನಾಥ್, ಪ್ರಗತಿ ಬಂಧು ಸ್ವಸಹಾಯ ಸಂಘಗಳ ಒಕ್ಕೂಟದ ಅಧ್ಯಕ್ಷೆ ಚಂದ್ರಕಲಾ, ಅಗ್ರಹಾರಬಾಚಹಳ್ಳಿ ಗ್ರಾಪಂ ಸದಸ್ಯ ಆರ್.ಶ್ರೀನಿವಾಸ್, ಟಿ.ವೈ.ಆನಂದ್, ಮೇಲ್ವಿಚಾರಕರಾದ ಅನ್ನಪೂರ್ಣ, ಕಾವ್ಯ, ಸುರೇಶ್ ಸೇರಿದಂತೆ ಸೇವಾ ಪ್ರತಿನಿಧಿಗಳು ಹಾಗೂ ಪೋಷಕರು ಹಾಜರಿದ್ದರು.

ಸ್ವಯಂ ಘೋಷಿತ ಆಸ್ತಿ ತೆರಿಗೆಗೆ 5% ರಿಯಾಯಿತಿ

ಮಂಡ್ಯ, ಮಾ.23– ಕರ್ನಾಟಕ ಪುರಸಭೆಗಳ ಅಧಿನಿಯಮ 1964ರ ನಿಯಮಗಳಂತೆ ಶ್ರೀರಂಗಪಟ್ಟಣ ಪುರಸಭೆ ವ್ಯಾಪ್ತಿಯ ಆಸ್ತಿ ಮಾಲೀಕರು ಕಡ್ಡಾಯವಾಗಿ ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯಂತೆ ಪ್ರತಿ ಆರ್ಥಿಕ ವರ್ಷದ ಪ್ರಾರಂಭದಲ್ಲಿ ಆಸ್ತಿ ತೆರಿಗೆ ಪಾವತಿಸಬೇಕಾಗುತ್ತದೆ. 2023–24ನೇ ಸಾಲಿನ ತೆರಿಗೆಯನ್ನು ಜೂನ್ ತಿಂಗಳ ಅಂತ್ಯದೊಳಗೆ ಪಾವತಿಸಬೇಕಿರುತ್ತದೆ. ಸ್ವಯಂ ಘೋಷಿತ ಆಸ್ತಿ ತೆರಿಗೆಯನ್ನು ಏಪ್ರಿಲ್ ತಿಂಗಳಿನಲ್ಲಿ ಪಾವತಿಸಿದ ಆಸ್ತಿಗಳ ಮಾಲೀಕರಿಗೆ ಶೇ.5% ರಷ್ಟು ರಿಯಾಯಿತಿ ನೀಡಲಾಗುವುದು ಹಾಗೂ ಮೇ ಮತ್ತು ಜೂನ್ ತಿಂಗಳಲ್ಲಿ ದಂಡ ರಹಿತವಾಗಿ ಪಾವತಿಸಲು ಅವಕಾಶವಿರುತ್ತದೆ.

1 ಜುಲೈ 2023 ರಿಂದ ಆಸ್ತಿ ತೆರಿಗೆ ಪಾವತಿಸುವವರಿಗೆ ಪ್ರತಿ ತಿಂಗಳಿಗೆ ಶೇ.2% ರಷ್ಟು ದಂಡ ಪಾವತಿಸಬೇಕಾಗುತ್ತದೆ. ಸಾರ್ವಜನಿಕರು ತಮ್ಮ ಅತೀ ಅಮೂಲ್ಯ ಹಣವನ್ನು ದಂಡದ ರೂಪದಲ್ಲಿ ಪಾವತಿಸದೇ ಆಸ್ತಿ ತೆರಿಗೆ ಪಾವತಿಸಿ ರಿಯಾಯಿತಿ ಹಾಗೂ ದಂಡ ರಹಿತದ ಸದುಪಯೋಗ ಪಡೆದುಕೊಳ್ಳಲು ಶ್ರೀರಂಗಪಟ್ಟಣದ ಪುರಸಭೆ ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೂಜಾಟ: 18 ಲಕ್ಷ ರೂ. ವಶ

ಮಂಡ್ಯ, ಮಾ.23– ಅಕ್ರಮ ಜೂಜಾಟವಾಡುತ್ತಿರುವ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ನಗರದ ಕಿರಗಂದೂರು ಗೇಟ್ ಬಳಿಯ ಸ್ಪೋರ್ಟ್ಸ್ ಕ್ಲಬ್ ಮೇಲೆ ದಾಳಿ ನಡೆಸಿದ ಮಂಡ್ಯ ಪೊಲೀಸರು 18 ಲಕ್ಷ ರೂ. ವಶಪಡಿಸಿಕೊಂಡಿದ್ದಾರೆ.

ಯುಗಾದಿ ಬಂತೆಂದರೆ ಮಂಡ್ಯದಲ್ಲಿ ಜೂಜಾಟ ಎಗ್ಗಿಲ್ಲದೆ ನಡೆಯುತ್ತದೆ. ಈ ಹಿನ್ನೆಲೆಯಲ್ಲಿ ಅಕ್ರಮ ಜೂಜಾಟ ನಿಷೇಧಿಸಲಾಗಿದೆ. ಅಕ್ರಮ ಜೂಜಾಟದಲ್ಲಿ ಭಾಗಿಯಾದರೆ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್ ಎಚ್ಚರಿಕೆ ನೀಡಿದ್ದರೂ ಮಂಡ್ಯದ ಪ್ರತಿಷ್ಠಿತ ಕ್ಲಬ್ ಗಳಲ್ಲಿ ಒಂದಾದ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ಜೂಜಾಟ ನಡೆಯುತ್ತಿತ್ತು. ಈ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ಸ್ಪೋರ್ಟ್ಸ್ ಕ್ಲಬ್ ಮೇಲೆ ಬುಧವಾರ ಮಧ್ಯಾಹ್ನ 2.30ರಲ್ಲಿ ದಾಳಿ ಮಾಡಿದ ಡಿವೈಎಸ್ಪಿ ಓಂಪ್ರಕಾಶ್ ನೇತೃತ್ವದಲ್ಲಿ ಸಿಪಿಐ ಎಲ್.ಅರುಣ್, ಎಸ್‌ಐಗಳಾದ ದೀಕ್ಷಿತ್ ಹಾಗೂ ವರ್ಷಾ ಅವರ ತಂಡ ಅಕ್ರಮ ಜೂಜಾಟದಲ್ಲಿ ಪಣಕ್ಕಿಟ್ಟಿದ್ದ 18 ಲಕ್ಷ ರೂ. ಹಣ ವಶಪಡಿಸಿಕೊಂಡು, ಜೂಜಾಟದಲ್ಲಿ ತೊಡಗಿದ್ದ 55 ಮಂದಿ ಮೇಲೆ ಪ್ರಕರಣ ದಾಖಲಿಸಿ, ಬಂಧಿಸಿ ಎಲ್ಲರನ್ನೂ ಠಾಣೆ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ಅಲ್ಲದೇ ಇಂದು ನಗರದ ಅಗ್ಗಿ ಕ್ಲಬ್ ಮೇಲೆ ದಾಳಿ ನಡೆಸಿದ್ದು, ಲಕ್ಷಾಂತರ ಹಣ ವಶಕ್ಕೆ ಪಡೆದಿರುವ ಪೊಲೀಸರು ಹಲವರನ್ನು ಬಂಧಿಸಿದ್ದಾರೆ.

ಪ್ರಾದೇಶಿಕ ಪಕ್ಷ ಅಧಿಕಾರದಲ್ಲಿರದಿರುವುದು ದುರಂತ

ಮದ್ದೂರು, ಮಾ.23– ದಕ್ಷಿಣ ಭಾರತದ ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷ ಅಧಿಕಾರದಲ್ಲಿದ್ದು, ರಾಜ್ಯದಲ್ಲಿ ಪ್ರಾದೇಶಿಕ ಪಕ್ಷ ಇಲ್ಲದಿರುವುದು ದುರಂತ ಎಂದು ಶಾಸಕ ಡಿ.ಸಿ.ತಮ್ಮಣ್ಣ ವಿಷಾದ ವ್ಯಕ್ತಪಡಿಸಿದರು.

ಮದ್ದೂರಿನ ಪ್ರವಾಸಿ ಮಂದಿರದಲ್ಲಿ ಗುರುವಾರ ನಡೆದ ಜೆಡಿಎಸ್ ಕಾರ್ಯಕರ್ತರು, ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು ಕೇರಳ, ತಮಿಳುನಾಡು, ತೆಲಂಗಾಣ, ಆಂಧ್ರಪ್ರದೇಶ ಇನ್ನಿತರೆ ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷ ಅಧಿಕಾರದಲ್ಲಿದೆ. ಆದರೆ ರಾಜ್ಯದಲ್ಲಿ ಜೆಡಿಎಸ್ ಪಕ್ಷ ಅಧಿಕಾರದಲ್ಲಿಲ್ಲದಿರುವುದು ಬೇಸರದ ಸಂಗತಿ ಎಂದರು.

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಕಟ್ಟಿದ ಜೆಡಿಎಸ್ ಪಕ್ಷ ರಾಜ್ಯದಲ್ಲಿ ಪ್ರಬಲವಾಗಿ ನೆಲೆಯೂರಿದ್ದು ರೈತರ, ಮಹಿಳೆಯರ, ಕಾರ್ಮಿಕರ ಶ್ರೇಯೋಭಿವೃದ್ಧಿಗೆ ಹಗಲಿರುಳು ಶ್ರಮಿಸುತ್ತಿರುವ ಪಕ್ಷವನ್ನು ಮತ್ತಷ್ಟು ಬಲಿಷ್ಠಗೊಳಿಸಿ ಅಧಿಕಾರಕ್ಕೆ ತರಲು ಪ್ರತಿಯೊಬ್ಬ ಕಾರ್ಯಕರ್ತರು ಶ್ರಮಿಸಬೇಕೆಂದರು. ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ ಕೈಗೊಂಡಿರುವ ಪಂಚರತ್ನ ರಥಯಾತ್ರೆಗೆ ರಾಜ್ಯಾದ್ಯಂತ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಮುಂದಿನ ಚುನಾವಣೆಯಲ್ಲಿ ಜೆಡಿಎಸ್ ಸ್ಪಷ್ಟ ಬಹುಮತದೊಂದಿಗೆ ಅಧಿಕಾರಕ್ಕೆ ಬರಲಿದೆ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿ ಎಲ್ಲಾ ವರ್ಗದ ಜನರ ಅಭಿವೃದ್ಧಿಗೆ ಶ್ರಮಿಸಲಿದ್ದಾರೆ ಎಂದರು.



ಸಮಾರೋಪ ಸಮಾರಂಭ: ಮಾ.26ರಂದು ಪಂಚರತ್ನ ರಥಯಾತ್ರೆ ಸಮಾರೋಪಕ್ಕೆ ಮಾಜಿ ಪ್ರಧಾನಿ ದೇವೇಗೌಡ ಚಾಲನೆ ನೀಡಲಿದ್ದು, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಪಕ್ಷದ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ಭಾಗವಹಿಸಲಿದ್ದು, ತಾಲೂಕಿನಿಂದ ಹೆಚ್ಚಿನ ಕಾರ್ಯಕರ್ತರು ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಮನವಿ ಮಾಡಿದರು.

ಲೋಕಾರ್ಪಣೆ: ಮಾ.24ರಂದು ತಾಲೂಕಿನ ಸಿಎಕೆರೆ ಹೋಬಳಿ ಮಣಿಗೆರೆಯಲ್ಲಿ 3.20 ಕೋಟಿ ರೂ.ವೆಚ್ಚದ 20 ಹೆಚ್ಚುವರಿ ಶಾಲಾ ಕೊಠಡಿ ಅಭಿವೃದ್ಧಿಗೆ ಚಾಲನೆ ನೀಡುವ ಜತೆಗೆ ನೂತನವಾಗಿ ನಿರ್ಮಿಸಿರುವ ಪದವಿ ಕಾಲೇಜನ್ನು ಲೋಕಾರ್ಪಣೆಗೊಳಿಸಲಿರುವುದಾಗಿ ತಿಳಿಸಿದರು.

ಈ ವೇಳೆ ಪುರಸಭಾಧ್ಯಕ್ಷ ಸುರೇಶ್ ಕುಮಾರ್, ಸ್ಥಾಯಿ ಸಮಿತಿ ಅಧ್ಯಕ್ಷ ಟಿ.ಆರ್. ಪ್ರಸನ್ನಕುಮಾರ್, ಸದಸ್ಯರಾದ ಎಂ.ಐ.ಪ್ರವೀಣ್, ವನಿತಾ, ಎಸ್. ಮಹೇಶ್, ಬಸವರಾಜು, ಜೆಡಿಎಸ್ ತಾಲೂಕು ಅಧ್ಯಕ್ಷ ಚಿಕ್ಕತಿಮ್ಮೇಗೌಡ, ಕಾರ್ಯಾಧ್ಯಕ್ಷ ರಾಜಣ್ಣ, ರಾಜ್ಯ ಪ್ರಧಾನಕಾರ್ಯದರ್ಶಿ ಬಿಳೀಗೌಡ, ಮಹಿಳಾ ತಾಲೂಕು ಅಧ್ಯಕ್ಷೆ ಪದ್ಮ, ಮುಖಂಡರಾದ ಶಿವರಾಮು, ಹೊನ್ನೇಗೌಡ, ಪುಟ್ಟಸ್ವಾಮಿ, ಕೆ.ಟಿ. ಶೇಖರ್, ಸಂದೀಪ್, ಕೆಂಗಲ್‌ಗೌಡ ಇತರರಿದ್ದರು.

ಶ್ರವಣಬೆಳಗೊಳದ ಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ನಿಧನ



ಗುರುವಾರ ಇಹಲೋಕಕ್ಕೆ ತ್ಯಜಿಸಿದ ಶ್ರವಣಬೆಳಗೊಳದ ಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರಿಗೆ ಸುತ್ತೂರು ಶ್ರೀಗಳು, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಮಾಜಿ ಸಚಿವ ಹೆಚ್.ಡಿ.ರೇವಣ್ಣ, ಮಾಜಿ ಶಾಸಕ ಸಿ.ಎಸ್.ಪುಟ್ಟೇಗೌಡ ಇನ್ನಿತರರು ಅಂತಿಮ ನಮನ ಸಲ್ಲಿಸಿದರು.

ಮೂರನೇ ಪುಟದಿಂದ

ಸ್ವಾಮೀಜಿ 1949ರ ಮೇ 3 ರಂದು ಕಾರ್ಕಳದ ವರಂಗದಲ್ಲಿ ಜನಿಸಿದ್ದರು. ತಂದೆ ಕೀರ್ತಿಶೇಷ ಚಂದ್ರರಾಜ, ತಾಯಿ ಕಾಂತಮ್ಮ. ಅವರ ಪೂರ್ವಾಶ್ರಮದ ಹೆಸರು ರತ್ನಾಕರ. ಪ್ರಾಥಮಿಕ ಶಿಕ್ಷಣವನ್ನು ಹುಟ್ಟೂರಲ್ಲಿ ಮುಗಿಸಿದ್ದರು. ಹೊಂಬುಜ ಹಾಗೂ ವಿವಿಧ ಜೈನ ಮಠಗಳಲ್ಲಿ ಕನ್ನಡ, ಸಂಸ್ಕೃತ, ಪ್ರಾಕೃತ, ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪ್ರಾವೀಣ್ಯತೆ ಪಡೆದರು. ಅವರ ಶಿಕ್ಷಣ ಕೇವಲ ಜೈನ ಧರ್ಮಶಾಸ್ತ್ರಕ್ಕೆ ಸೀಮಿತವಾಗಿರಲಿಲ್ಲ. ಅವರು ಇತಿಹಾಸ ತಜ್ಞರು, ತತ್ವಜ್ಞಾನಿಗಳು, ಶ್ರೇಷ್ಠ ವಾಗ್ಮಿಗಳೂ ಆಗಿದ್ದರು. ಮೈಸೂರು ವಿಶ್ವವಿದ್ಯಾಲಯದಿಂದ ಇತಿಹಾಸದಲ್ಲಿ ಎಂಎ, ಬೆಂಗಳೂರು ವಿಶ್ವವಿದ್ಯಾಲಯದಿಂದ ತತ್ವಶಾಸ್ತ್ರದಲ್ಲಿ ಎಂಎ ಪದವಿ ಪಡೆದಿದ್ದ ಅವರು, ಕನ್ನಡ, ಸಂಸ್ಕೃತ ಮತ್ತು ಪ್ರಾಕೃತದಲ್ಲೂ ಸ್ನಾತಕೋತ್ತರ ಪದವಿ ಪಡೆದಿದ್ದರು.

ತಮ್ಮ 20ನೇ ವಯಸ್ಸಿನಲ್ಲಿ ಅಂದರೆ 1970 ರಲ್ಲಿ ಧರ್ಮಾಚಾರ್ಯ ಪೀಠವನ್ನು ಏರಿದ್ದ ಅವರು ಪೀಠದಲ್ಲಿ ಇದ್ದುಕೊಂಡೇ ಮಠದ ಸಮಸ್ತ ಕಾರ್ಯ ನಿರ್ವಹಣೆಯೊಂದಿಗೆ ಸಂಶೋಧನೆ, ಗ್ರಂಥ ರಚನೆಯಲ್ಲಿ ಕ್ರಿಯಾಶೀಲರಾಗಿದ್ದರು. ಅಲ್ಲದೇ ಎಸ್‌ಡಿಜೆಎಂಐ ಟ್ರಸ್ಟ್ ಆಡಳಿತ ಸಮಿತಿ ಅಧ್ಯಕ್ಷರಾಗಿ ಪ್ರಾಥಮಿಕ ಶಿಕ್ಷಣದಿಂದ ಇಂಜಿನಿಯರಿಂಗ್ ಕಾಲೇಜು ಶಿಕ್ಷಣದವರೆಗೆ ಅದನ್ನು ಕೊಂಡೊಯ್ದ ಕೀರ್ತಿ ಪೂಜ್ಯ ಶ್ರೀಗಳಿಗೆ ಸಲ್ಲುತ್ತದೆ.

1981ರಲ್ಲಿ ವಿಶ್ವವಿಖ್ಯಾತ ಗೊಮ್ಮಟೇಶ್ವರ ಸಹಸ್ರಾಬ್ದಿ ಮಹಾಮಸ್ತಕಾಭಿಷೇಕವನ್ನು ಯಶಸ್ವಿಯಾಗಿ ನೆರವೇರಿಸಿದ್ದರು. ಇದನ್ನು ಮೆಚ್ಚಿ ಅಂದಿನ ಪ್ರಧಾನಿ ಇಂದಿರಾ ಗಾಂಧಿ ಅವರು 'ಕರ್ಮಯೋಗಿ' ಬಿರುದು ನೀಡಿ ಗೌರವಿಸಿದ್ದರು. 40ಕ್ಕೂ ಹೆಚ್ಚು ಜಿನಾಲಯಗಳನ್ನು ಜೀರ್ಣೋದ್ಧಾರಗೊಳಿಸಿ, ಅಲ್ಲಿ ನಿತ್ಯ ಪೂಜೆ ನಡೆಯುವಂತೆ ಮಾಡಿದ್ದರು. ಸುತ್ತಲಿನ 10ಕ್ಕೂ ಹೆಚ್ಚು ಗ್ರಾಮಗಳನ್ನು ದತ್ತು ಪಡೆದು, ಮೂಲ ಸೌಲಭ್ಯಗಳನ್ನು ಕಲ್ಪಿಸಿದ್ದರು. ಸಹಸ್ರಮಾನದ ಮಸ್ತಕಾಭಿಷೇಕದಲ್ಲಿ ಸಾವಿರ ಮಂದಿಗೆ ಉಚಿತ ನೇತ್ರ ತಪಾಸಣೆ ಶಿಬಿರ ಕಲ್ಪಿಸಿದ್ದರು. ಆರೋಗ್ಯ, ಶಿಕ್ಷಣಕ್ಕೆ ಮಹತ್ವ ನೀಡುತ್ತಿದ್ದ ಸ್ವಾಮೀಜಿ, ಪಾಲಿಟೆಕ್ನಿಕ್, ಎಂಜಿನಿಯರಿಂಗ್, ನರ್ಸಿಂಗ್ ಕಾಲೇಜು, ಗೊಮ್ಮಟೇಶ್ ವಿದ್ಯಾಪೀಠ, ಪ್ರಾಕೃತ ಭಾಷೆಯ ಅಭಿವೃದ್ಧಿಗೆ ಬೆಂಗಳೂರಿನಲ್ಲಿ ಪ್ರಾಕೃತ ಜ್ಞಾನ ಭಾರತ ಟ್ರಸ್ಟ್ ಸ್ಥಾಪಿಸಿದ್ದರು. ಶ್ರವಣಬೆಳಗೊಳದಲ್ಲಿ ರಾಷ್ಟ್ರೀಯ ಪ್ರಾಕೃತ ಅಧ್ಯಯನ ಸಂಶೋಧನಾ ಸಂಸ್ಥೆಯಲ್ಲಿ ತಾಳೆಗರಿಗಳನ್ನು ಸಂರಕ್ಷಿಸುವ ಹಾಗೂ ಪ್ರಾಕೃತ ಗ್ರಂಥಗಳ ಕನ್ನಡ ಅನುವಾದ ಯೋಜನೆ ರೂಪಿಸಿದ್ದರು. ಆಯುರ್ವೇದ ಆಸ್ಪತ್ರೆ, ಸಂಚಾರಿ ಆಸ್ಪತ್ರೆ, ಕ್ಲಿನಿಕಲ್ ಲ್ಯಾಬ್‌ಗಳನ್ನು ಸ್ಥಾಪಿಸಿದ್ದ ಸ್ವಾಮೀಜಿ, ಮಹಾಮಸ್ತಕಾಭಿಷೇಕದ ಸಂದರ್ಭ ಉಳಿದ ಹಣದಿಂದ ಆಧುನಿಕ ಮಕ್ಕಳ ಆಸ್ಪತ್ರೆ ನಿರ್ಮಿಸಿದ್ದರು. 1981, 1993, 2006 ಹಾಗೂ 2018 ರಲ್ಲಿ ಮಹಾಮಸ್ತಕಾಭಿಷೇಕವನ್ನು ಯಶಸ್ವಿಯಾಗಿ ನೆರವೇರಿಸಿದ್ದರು.

ಪ್ರಶಸ್ತಿಗಳು: ಪೂಜ್ಯ ಶ್ರೀಗಳು ಧಾರ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ, ಸಾಹಿತ್ಯಿಕ ಕ್ಷೇತ್ರದಲ್ಲಿನ ಸೇವೆಗಾಗಿ: ಕರ್ಮಯೋಗಿ, ಅಧ್ಯಾತ್ಮಯೋಗಿ, ಭಟ್ಟಾರಕ ಶಿರೋಮಣಿ ಮುಂತಾದ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ವಿದೇಶ ಪ್ರವಾಸ: ಪೂಜ್ಯ ಶ್ರೀಗಳು 16ಕ್ಕೂ ಹೆಚ್ಚು ದೇಶಗಳಲ್ಲಿ ಜರುಗಿದ ವಿಚಾರ ಸಂಕಿರಣ, ಧರ್ಮ ಸಭೆಗಳಲ್ಲಿ ಭಾಗವಹಿಸಿ ತಮ್ಮ ಸರಳಶೈಲಿ ಪ್ರವಚನಗಳಿಂದ ಶ್ರಾವಕರ ಮನ ಗೆದ್ದಿದ್ದಾರೆ. ಶ್ರೀಗಳು ಜೈನ ಧರ್ಮ ಇಂದಿಗೂ ತನ್ನತನ ಉಳಿಸಿಕೊಂಡು ಬರುವುದಕ್ಕೆ ಪ್ರಮುಖ ಕಾರಣ ಜೈನ ತತ್ವಶಾಸ್ತ್ರ ಗ್ರಂಥಗಳು ಹಾಗೂ ಜೈನ ವಾಸ್ತುಶಿಲ್ಪ ಕಲೆ ಎಂಬುದನ್ನು ಅರಿತು ಬಸದಿಗಳ ಜೀರ್ಣೋದ್ಧಾರ, ಜೈನ ಸಾಹಿತ್ಯ ಪ್ರಕಟಣೆಗೆ ವಿಶೇಷವಾಗಿ ಒತ್ತು ನೀಡಿದ್ದಾರೆ. ಅವುಗಳ ಸಂರಕ್ಷಣೆಗಾಗಿ ಪ್ರಮುಖ ಪಾತ್ರ ವಹಿಸಿದ್ದಾರೆ.

ವೈರಾಗ್ಯದ ಕಡೆ ಮುಖ ಮಾಡಿದ್ದ ಶ್ರೀಗಳು

ಇತ್ತೀಚಿನ ದಿನಗಳಲ್ಲಿ ಶ್ರೀಗಳು ಅನ್ನ ಪಾನವನ್ನು ತ್ಯಜಿಸಿ ತ್ಯಾಗ ವೈರಾಗ್ಯದ ಕಡೆ ಮುಖ ಮಾಡಿದ್ದರು ಎಂದು ಕನಕಗಿರಿ ಪೀಠದ ಸ್ವಸ್ತಿಶ್ರೀ ಭುವನಕೀರ್ತಿ ಭಟ್ಟಾರಕ ಸ್ವಾಮೀಜಿ ತಿಳಿಸಿದರು. ಸ್ವಾಮೀಜಿಗಳು ಸಮಾಜದ ಮುಖಂಡರ ಹಾಗೂ ಎಲ್ಲಾ ಪೀಠದ ಸ್ವಾಮೀಜಿಗಳ ಒಪ್ಪಿಗೆ ಮೇರೆಗೆ ತಮ್ಮ ಉತ್ತರಾದಿಕಾರಿಯಾಗಿ ಆಗಮಕೀರ್ತಿ ಅವರನ್ನು 2 ತಿಂಗಳ ಹಿಂದೆಯೇ ನೇಮಿಸಿದ್ದರು. ಉತ್ತರಾಧಿಕಾರಿ ಹೆಸರನ್ನು ಪತ್ರದಲ್ಲಿಯೂ ಕೂಡ ಉಲ್ಲೇಖಿಸಿದ್ದಾರೆ. ಕಳೆದ ಒಂದು ತಿಂಗಳಿಂದ ಯಾವುದೇ ಸಭೆ ಸಮಾರಂಭಗಳಲ್ಲಿ ಭಾಗವಹಿಸುತ್ತಿರಲಿಲ್ಲ. ಈ ವರ್ಷದ ಜಾತ್ರೆ ಕೂಡ ಆಚರಿಸುವುದು ಬೇಡ ಎಂದು ನಿರ್ಧರಿಸಿದ್ದರು. ಸಲ್ಲೇಖನದ ಕಡೆ ಮುಖ ಮಾಡಿದ್ದರು. ದಿನದಲ್ಲಿ ಒಮ್ಮೆ ಮಾತ್ರ ಆಹಾರ ಸೇವಿಸುತ್ತಿದ್ದರು. ಅನ್ನದ ಪದಾರ್ಥಗಳ ಆಹಾರಗಳನ್ನು ತ್ಯಜಿಸಿ ಹಣ್ಣು ಹಾಗೂ ದ್ರವ ಆಹಾರ ಸೇವಿಸುತ್ತಿದ್ದರು. ಈ ದಿನ ಬೆಳಗ್ಗೆ ಮಠದ ಆವರಣದಲ್ಲಿಯೇ ವಾಯು ವಿಹಾರ ಮಾಡುತ್ತಿದ್ದಾಗ ಕುಸಿದು ಬಿದ್ದು ಪ್ರಾಣ ತ್ಯಜಿಸಿದ್ದಾರೆ ಎಂದರು.

ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ನಿಧನಕ್ಕೆ ಗಣ್ಯರ ಸಂತಾಪ



ಹಾಸನ, ಮಾ.23–ಶ್ರೀಕ್ಷೇತ್ರ ಶ್ರವಣಬೆಳಗೊಳದ ಜೈನಮಠದ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ನಿಧನಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿದಂತೆ ಅನೇಕ ಗಣ್ಯರು ನುಡಿನಮನ ಸಲ್ಲಿಸಿದ್ದಾರೆ.



■ ಮಠದ ಜವಾಬ್ದಾರಿವಹಿಸಿಕೊಂಡ ಬಳಿಕ ಧಾರ್ಮಿಕ, ಆಧ್ಯಾತ್ಮಿಕ, ಸಾಹಿತ್ಯ ಕ್ಷೇತ್ರಕ್ಕೆ ಸಾಕಷ್ಟು ಕೊಡುಗೆ ಸಲ್ಲಿಸಿದ್ದರು. ಧವಲ ಗ್ರಂಥಗಳನ್ನು 40ಕ್ಕೂ ಹೆಚ್ಚು ಸಂಪುಟವನ್ನು ಪ್ರಕಟಣೆ ಮಾಡಿದ್ದಾರೆ. ಸಮಾಜ ಸೇವೆ ಬಗ್ಗೆ ಅಪಾರ ಕಾಳಜಿ ಹೊಂದಿದ್ದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಜೈನ ಅಧ್ಯಯನ ಪೀಠ ಆರಂಭವಾಗಲು ಕಾರಣಕರ್ತರಾಗಿದ್ದರು. ಇವರ ಅಗಲಿಕೆ ದುಃಖ ತಂದಿದೆ. ಅವರ ಉತ್ತರಾಧಿಕಾರಿ ಸಮರ್ಥವಾಗಿ ಕ್ಷೇತ್ರವನ್ನು ಮುನ್ನಡೆಸುವಂತಾಗಲಿ. –ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ




■ ಶ್ರೀಕ್ಷೇತ್ರ ಶ್ರವಣಬೆಳಗೊಳದ ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಪಟ್ಟಾಚಾರ್ಯ ಮಹಾಸ್ವಾಮಿಗಳು ನಮ್ಮನ್ನಗಲಿದ ಸುದ್ದಿ ತಿಳಿದು ಅತ್ಯಂತ ದುಃಖವಾಯಿತು. ಪೂಜ್ಯರ ಅಗಲಿಕೆ ನಾಡಿಗೆ ತುಂಬಲಾರದ ನಷ್ಟವಾಗಿದ್ದು, ಅವರ ಆತ್ಮಕ್ಕೆ ಸದ್ಗತಿ ಕೋರುತ್ತೇನೆ.–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ.



■ ಪರಮಪೂಜ್ಯರು 1970ರಲ್ಲಿ ಶ್ರವಣಬೆಳಗೊಳ ಜೈನ ಮಠದ ಪೀಠವೇರಿದ್ದರು. ಅಲ್ಲಿಂದ ಇಲ್ಲಿಯವರೆಗೆ ಶ್ರೀಮಠದ ಏಳಿಗೆಗೆ ತಮ್ಮದೇ ಆದ ಅಮೂಲ್ಯ ಕೊಡುಗೆ ನೀಡಿದ್ದರು. ಇತಿಹಾಸ ತಜ್ಞ, ತತ್ವಜ್ಞಾನಿ, ಇತಿಹಾಸ, ಕನ್ನಡ, ಸಂಸ್ಕೃತದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದ ಶ್ರೀಗಳು, ಪ್ರಾಕೃತ ಭಾಷೆಯಲ್ಲೂ ಸ್ನಾತಕೋತ್ತರ ಪದವಿ ಪಡೆದು, ಈ ಭಾಷೆಯ ಅಭಿವೃದ್ಧಿಗೆ ಅಹರ್ನಿಶಿ ದುಡಿದಿದ್ದರು. ನೂರಾರು ಜೈನ ದೇವಾಲಯ ಪುನರುಜ್ಜೀವನ ಗೊಳಿಸಿದ ಕಾಯಕಯೋಗಿ, ಶಿಕ್ಷಣಕ್ಕೆ ಆದ್ಯತೆ ನೀಡಿದ್ದ ಶ್ರೀಗಳು ಪಾಲಿಟೆಕ್ನಿಕ್, ಇಂಜಿನಿಯರಿಂಗ್, ನರ್ಸಿಂಗ್, ಪ್ರಾಕೃತ ವಿವಿ ಸ್ಥಾಪನೆ ಮಾಡಿದ್ದರು. ಇವರ ನಿಧನದಿಂದ ಧಾರ್ಮಿಕ, ಆಧ್ಯಾತ್ಮಿಕ ಹಾಗೂ ಶೈಕ್ಷಣಿಕ ಕ್ಷೇತ್ರಕ್ಕೆ ತುಂಬಲಾರದ ನಷ್ಟವಾಗಿದೆ.

–ಹೆಚ್.ಡಿ.ದೇವೇಗೌಡ, ಮಾಜಿ ಪ್ರಧಾನಿ.



■ ಶ್ರವಣಬೆಳಗೊಳದ ಜೈನಮಠದ ಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರು ವಿಧಿವಶರಾದ ಸುದ್ದಿ ತಿಳಿದು ಅತೀವ ನೋವಾಯಿತು. ಧಾರ್ಮಿಕ ಚಟುವಟಿಕೆಗಳ ಜೊತೆ ಶಿಕ್ಷಣ, ಸಮಾಜ ಸುಧಾರಣೆಗಾಗಿ ದುಡಿಯುತ್ತಿದ್ದ ಶ್ರೀಗಳ ಅಗಲಿಕೆಯಿಂದ ಸಮಾಜ ಬಡವಾಗಿದೆ. ಶ್ರೀಗಳ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಮಠದ ಅನುಯಾಯಿಗಳಿಗೆ ದೇವರು ಕರುಣಿಸಲಿ – ಸಿದ್ದರಾಮಯ್ಯ, ವಿಪಕ್ಷ ನಾಯಕ.



■ ಶ್ರವಣಬೆಳಗೊಳದ ಜೈನಪೀಠದ ಜಗದ್ಗುರು ಶ್ರೀಚಾರುಕೀರ್ತಿ ಭಟ್ಟಾರಕ ಮಹಾ ಸ್ವಾಮೀಜಿ ಅವರು ಅಗಲಿದ ವಿಷಯ ಕೇಳಿ ನನಗೆ ತೀವ್ರ ಆಘಾತ ಉಂಟಾಗಿದೆ. ಶ್ರೀಭಗವಾನ್ ಬಾಹುಬಲಿ ಅವರ ಶಾಂತಿ, ಅಹಿಂಸೆ, ಸಹನೆ ತತ್ವಗಳನ್ನು ಪಸರಿಸುತ್ತಾ ಜನರಲ್ಲಿ ಅರಿವಿನ ಬೆಳಕು ಮೂಡಿಸಿದ್ದ ಪರಮಪೂಜ್ಯರು ನಾಡಿಗೆ ಅಪಾರ ಸೇವೆ ಸಲ್ಲಿಸಿದ್ದರು.

– ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಮುಖ್ಯಮಂತ್ರಿ.

ಸಾರಿಗೆ ನೌಕರರ ಮುಷ್ಕರಕ್ಕೆ ಕರ್ನಾಟಕ ಹೈಕೋರ್ಟ್ ತಡೆ!

ಬೆಂಗಳೂರು, ಮಾ.23– ಸಾರಿಗೆ ನೌಕರರ ವೇತನ ಶೇಕಡ 15ರಷ್ಟು ಹೆಚ್ಚಳಕ್ಕೆ ರಾಜ್ಯ ಸರ್ಕಾರ ಆದೇಶಿಸಿದ್ದರೂ ಇದಕ್ಕೆ ಒಪ್ಪದ ಸಾರಿಗೆ ನೌಕರರ ಸಂಘದ ಸಮಾನ ಮನಸ್ಕರ ವೇದಿಕೆ ಅಧ್ಯಕ್ಷ ಆರ್. ಚಂದ್ರಶೇಖರ್ ನಾಳೆಯಿಂದ ಮುಷ್ಕರ ನಡೆಸುವುದಾಗಿ ಘೋಷಿಸಿದ್ದರು. ಇದೀಗ ಹೈಕೋರ್ಟ್ ನಾಳಿನ ಸಾರಿಗೆ ನೌಕರರ ಮುಷ್ಕರಕ್ಕೆ ತಡೆ ನೀಡಿದೆ. ರಾಜ್ಯದಲ್ಲಿ ಪರೀಕ್ಷೆಗಳು ನಡೆಯುತ್ತಿದ್ದು ಮುಷ್ಕರದಿಂದ ಪರೀಕ್ಷೆ ಬರೆಯಲಿರುವ ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗುತ್ತದೆ. ಹೀಗಾಗಿ

ಮೂರನೇ ಪುಟದಿಂದ

ರಾಹುಲ್ ಗಾಂಧಿಗೆ 2 ವರ್ಷ ಜೈಲು ಶಿಕ್ಷೆ

ನರೇಂದ್ರ ಮೋದಿ ಈ ಹೆಸರು ಹೊಂದಿರುವವರನ್ನು ಉಲ್ಲೇಖಿಸಿದ್ದ ಅವರು, ಎಲ್ಲ ಮೋದಿಗಳೂ ಕಳ್ಳರು.

ಮೋದಿ ಉಪನಾಮ ಹೊಂದಿರುವವರು ಕಳ್ಳರಾಗಲು ಹೇಗೆ ಸಾಧ್ಯ ಎಂದು ವ್ಯಂಗ್ಯವಾಡಿದ್ದರು.

ರಾಹುಲ್ ಹೇಳಿಕೆಯಿಂದ ಸಿಟ್ಟಿಗೆದ್ದಿದ್ದ ಬಿಜೆಪಿ ಶಾಸಕ ಪೂರ್ಣೇಶ್ ಮೋದಿ, ದೂರು ದಾಖಲು ಮಾಡಿದ್ದರು. 2019ರ ಏಪ್ರಿಲ್ ತಿಂಗಳಲ್ಲಿ ರಾಹುಲ್ ಗಾಂಧಿ ವಿರುದ್ಧ ಐಪಿಸಿ ಸೆಕ್ಷನ್ 499 ಮತ್ತು 500ರ ಅಡಿ ಮಾನಹಾನಿ ಪ್ರಕರಣ ದಾಖಲಾಗಿತ್ತು. ಇದೀಗ ಈ ಪ್ರಕರಣದಲ್ಲಿ ನ್ಯಾಯಾಲಯ ರಾಹುಲ್ ಗಾಂಧಿಗೆ ಅವರನ್ನು ದೋಷಿ ಎಂದು ತೀರ್ಪು ನೀಡಿದೆ.

ಲೋಕಸಭೆ ಸದಸ್ಯತ್ವ ಕಳೆದುಕೊಳ್ಳುವ ಭೀತಿ: ಮೋದಿ ಪದನಾಮ ಪ್ರಕರಣ ಸಂಬಂಧ ಎರಡು ವರ್ಷಗಳ ಜೈಲು ಶಿಕ್ಷೆಗೆ ಗುರಿಯಾಗಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಲೋಕಸಭೆ ಸದಸ್ಯತ್ವ ಕಳೆದುಕೊಳ್ಳುವ ಭೀತಿ ಎದುರಾಗಿದೆ. 1951ರ ಜನಪ್ರತಿನಿಧಿಗಳ ಕಾಯ್ದೆಯ ಸೆಕ್ಷನ್ 8(3) ಪ್ರಕಾರ, ಜನಪ್ರತಿನಿಧಿಯೊಬ್ಬರು ಪ್ರಕರಣವೊಂದರಲ್ಲಿ ಕನಿಷ್ಠ ಎರಡು ವರ್ಷ ಜೈಲು ಶಿಕ್ಷೆಗೆ ಒಳಗಾದರೆ ಅವರು ಅನರ್ಹತೆಗೆ ಒಳಗಾಗುತ್ತಾರೆ. ಈ ಪ್ರಕರಣದಲ್ಲಿ ರಾಹುಲ್ ಗಾಂಧಿ ಅವರಿಗೆ 2 ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗಿದ್ದು, ಅನರ್ಹತೆ ಭೀತಿ ಎದುರಿಸುತ್ತಿದ್ದಾರೆ. ಸದ್ಯ ರಾಹುಲ್ ಗಾಂಧಿ ಅವರಿಗೆ ಮೇಲ್ಮನವಿ ಸಲ್ಲಿಸಲು ಒಂದು ತಿಂಗಳ ಕಾಲಾವಕಾಶ ನೀಡಲಾಗಿದ್ದು, ಆದರೆ ಇದು ಅನರ್ಹತೆಗೆ ಅಡ್ಡಿಬಾರದು.

ಶಿಕ್ಷೆ ಪ್ರಕಟವಾದ ಕೂಡಲೇ ಸದಸ್ಯತ್ವ ರದ್ದು: ಜನಪ್ರತಿನಿಧಿಯೊಬ್ಬರು ಪ್ರಕರಣವೊಂದರಲ್ಲಿ ಕನಿಷ್ಠ 2 ವರ್ಷ ಜೈಲು ಶಿಕ್ಷಗೆ ಗುರಿಯಾಗಿದ್ದೇ ಆದಲ್ಲಿ, ಅವರ ಸದಸ್ಯತ್ವವು ತಕ್ಷಣಕ್ಕೆ ಜಾರಿಗೆ ಬರುವಂತೆ ಅನರ್ಹಗೊಳ್ಳಲಿದೆ ಎಂದು ಸುಪ್ರೀಂಕೋರ್ಟ್ 2013ರಲ್ಲಿ (ಲಿಲಿ ಥೋಮಸ್ ಹಾಗೂ ಭಾರತ ಸರ್ಕಾರ ಪ್ರಕರಣ) ತೀರ್ಪು ನೀಡಿತ್ತು. ಇದರ ಜತೆಗೆ ಶಿಕ್ಷೆಗೆ ಗುರಿಯಾದ ಜನಪ್ರತಿನಿಧಿ ತಮ್ಮೆಲ್ಲಾ ಕಾನೂನು ಹೋರಾಟ ಮುಗಿಯುವವರೆಗೂ (ಸುಪ್ರೀಂ ಕೋರ್ಟ್ ತೀರ್ಪಿನವರೆಗೂ) ಜನಪ್ರತಿನಿಧಿಯಾಗಿ ಮುಂದುವರಿಯಬಹುದು. ಹಾಗೂ ಶಿಕ್ಷೆ ಪ್ರಕಟವಾದ ಬಳಿಕ ಮೂರು ತಿಂಗಳವರೆಗೆ ಮೇಲ್ಮನವಿ ಸಲ್ಲಿಸಲು ಅವಕಾಶ ಇದೆ ಎನ್ನುವ ಜನಪ್ರತಿನಿಧಿ ಕಾಯ್ದೆಯ ಸೆಕ್ಷನ್‌ಗಳನ್ನು ಸುಪ್ರೀಂಕೋರ್ಟ್ ಅಸಂವಿಧಾನಿಕ ಎಂದು ತೀರ್ಪು ನೀಡಿತ್ತು. ಶಿಕ್ಷೆಗೆ ಒಳಗಾದ ಜನಪ್ರತಿನಿಧಿಗಳು ತಕ್ಷಣವೇ ಅನರ್ಹಗೊಳ್ಳುತ್ತಾರೆ ಎನ್ನುವ ಸುಪ್ರೀಂಕೋರ್ಟ್‌ನ ತೀರ್ಪಿನ ವಿರುದ್ಧವಾಗಿ, ಅಂದಿನ ಕಾನೂನು ಸಚಿವ ಕಪಿಲ್ ಸಿಬಲ್ ಅವರು ರಾಜ್ಯಸಭೆಯಲ್ಲಿ ಹೊಸ ಮಸೂದೆ ಮಂಡಿಸಿದ್ದರು. ಶಿಕ್ಷೆ ಪ್ರಕಟವಾದ ಕೂಡಲೇ ಅನರ್ಹತೆ ಜಾರಿಯಾಗುವುದಿಲ್ಲ ಎನ್ನುವ ಅಂಶ ಅದರಲ್ಲಿ ಇತ್ತು. ಈ ನಡುವೆ ತೀರ್ಪು ಪ್ರಶ್ನಿಸಿ ಕೇಂದ್ರ ಸರ್ಕಾರವು ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು ಆದರೆ ಅದನ್ನು ಸುಪ್ರೀಂಕೋರ್ಟ್ ರದ್ದುಗೊಳಿಸಿತ್ತು.

ಇದಾದ ಬಳಿಕ ಮೇವು ಹಗರಣದ ತೀರ್ಪು ಬರುವುದಕ್ಕೂ ಕೆಲ ದಿನಗಳ ಮುಂಚೆ, ಸುಪ್ರೀಂಕೋರ್ಟ್ ತೀರ್ಪಿನ ವಿರುದ್ಧ ತರಲು ಉದ್ದೇಶಿಸಲಾಗಿದ್ದ ಕಾನೂನನ್ನು ಸುಗ್ರೀವಾಜ್ಞೆ ಮೂಲಕ ಜಾರಿಗೆ ತರಲು ಸರ್ಕಾರ ಮುಂದಾಗಿತ್ತು. ಈ ವೇಳೆ ಕಾಂಗ್ರೆಸ್ ಉಪಾಧ್ಯಕ್ಷರಾಗಿದ್ದ ರಾಹುಲ್ ಗಾಂಧಿಯವರು, ಪತ್ರಿಕಾಗೋಷ್ಠಿ ನಡೆಸಿ 'ಇದು ಸಂಪೂರ್ಣ ಅಸಂಬದ್ಧವಾಗಿದೆ. ಅದನ್ನು ಹರಿದು ಬಿಸಾಡಬೇಕು' ಎಂದು ಸುಗ್ರೀವಾಜ್ಞೆ ವಿರುದ್ಧ ಗುಡುಗಿದ್ದರು. ಇದಾದ ಐದು ದಿನಗಳ ಬಳಿಕ ಸರ್ಕಾರ ಸುಗ್ರೀವಾಜ್ಞೆ ಮಸೂದೆಯನ್ನು ಹಿಂಪಡೆದಿತ್ತು. ಇದೀಗ ಅದೇ ಕಾನೂನು ರಾಹುಲ್ ಗಾಂಧಿ ಅವರಿಗೆ ಮುಳುವಾಗುವ ಸಾಧ್ಯತೆ ಇದೆ.

ಮುಂದೇನು?: ಒಂದು ವೇಳೆ ರಾಹುಲ್ ಗಾಂಧಿ ಅನರ್ಹರಾದರೆ, ಅವರು ಪ್ರತಿನಿಧಿಸುತ್ತಿರುವ ವಯನಾಡ್ ಕ್ಷೇತ್ರಕ್ಕೆ ಉಪಚುನಾವಣೆ ನಡೆಯಲಿದೆ. ಆರು ತಿಂಗಳೊಳಗೆ ಚುನಾವಣೆ ನಡೆಸುವುದು ಚುನಾವಣಾ ಆಯೋಗದ ಜವಾಬ್ದಾರಿ. ಕ್ರಿಮಿನಲ್ ಅಪರಾಧಗಳಲ್ಲಿ ಸದಸ್ಯತ್ವ ಕಳೆದುಕೊಂಡ ಜನಪ್ರತಿನಿಧಿ ಐದು ವರ್ಷಗಳ ಕಾಲ ಚುನಾವಣೆಯಲ್ಲಿ ಸ್ಪರ್ಧೆ ಮಾಡುವಂತಿಲ್ಲ. ಹೀಗಾಗಿ ರಾಹುಲ್ ಗಾಂಧಿಗೆ ಐದು ವರ್ಷ ಸ್ಪರ್ಧೆ ಮಾಡುವ ಅವಕಾಶ ಇಲ್ಲ. ಮೇಲ್ಮನವಿ ಸಲ್ಲಿಸಿದರೆ, ಹೈಕೋರ್ಟ್ ತೀರ್ಪಿನ ಮೇಲೆ ಉಳಿದ ಪ್ರಕ್ರಿಯೆಗಳು ನಿರ್ಧಾರವಾಗಲಿವೆ.

ತೀರ್ಪು ಪ್ರಶ್ನಿಸಿ ಮೇಲ್ಮನವಿ: ಕಾಂಗ್ರೆಸ್

ನವದೆಹಲಿ, ಮಾ.23– ಕ್ರಿಮಿನಲ್ ಮಾನನಷ್ಟ ಮೊಕದ್ದಮೆ ಪ್ರಕರಣದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಗುಜರಾತ್ ಕೋರ್ಟ್ ಎರಡು ವರ್ಷ ಜೈಲು ಶಿಕ್ಷೆ ವಿಧಿಸಿದ್ದು, ಈ ತೀರ್ಪು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲಾಗುವುದು ಎಂದು ಕಾಂಗ್ರೆಸ್ ಗುರುವಾರ ಹೇಳಿದೆ. ಸತ್ಯದ ಪರ ಧ್ವನಿ ಎತ್ತಿದ್ದಕ್ಕಾಗಿ ರಾಹುಲ್ ಗಾಂಧಿ ಅವರನ್ನು ಶಿಕ್ಷಿಸಲಾಗುತ್ತಿದೆ ಎಂದು ಆರೋಪಿಸಿದ ಕಾಂಗ್ರೆಸ್, ಕೇಂದ್ರ ಸರ್ಕಾರ ರಾಹುಲ್ ಗಾಂಧಿಯವರ ಧ್ವನಿಯನ್ನು ಹತ್ತಿಕ್ಕಲು ಪ್ರಯತ್ನಿಸುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದೆ.

ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಸೇರಿದಂತೆ ಹಲವು ಕಾಂಗ್ರೆಸ್ ನಾಯಕರು ಕೋರ್ಟ್ ತೀರ್ಪಿನ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಭಯಭೀತರಾಗಿರುವ ಅಧಿಕಾರ ಯಂತ್ರವು, 'ಸಾಮ್, ದಾಮ್, ದಂಡ್, ಭೇದ'(ಪುಸ್ತಕದಲ್ಲಿನ ಪ್ರತಿಯೊಂದು ತಂತ್ರ)ದ ಮೂಲಕ ರಾಹುಲ್ ಗಾಂಧಿಯವರ ಧ್ವನಿಯನ್ನು ಹತ್ತಿಕ್ಕಲು ಪ್ರಯತ್ನಿಸುತ್ತಿದೆ ಎಂದು ಪ್ರಿಯಾಂಕಾ ಗಾಂಧಿ ಅವರು ಹಿಂದಿಯಲ್ಲಿ ಟ್ವೀಟ್ ಮಾಡಿದ್ದಾರೆ. ಈ ಬಗ್ಗೆ ಮೇಲ್ಮನವಿ ಸಲ್ಲಿಸಲಾಗುವುದು ಎಂದು ಹೇಳಿರುವ ಖರ್ಗೆ ಅವರು, ಇತರರತ್ತ ಒಂದು ಬೆರಳನ್ನು ತೋರಿಸಿದರೆ, ಅವರತ್ತ ನಾಲ್ಕು ಬೆರಳುಗಳು ತೋರಿಸುತ್ತವೆ ಎಂದು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ರಾಷ್ಟ್ರಪತಿಗಳಿಂದ ಎಸ್.ಎಂ.ಕೃಷ್ಣರಿಗೆ 'ಪದ್ಮವಿಭೂಷಣ', ಮೈಸೂರಿನ ಎಸ್.ಸುಬ್ಬರಾಮನ್‌ರಿಗೆ 'ಪದ್ಮಶ್ರೀ' ಪ್ರಶಸ್ತಿ ಪ್ರದಾನ



ರಾಷ್ಟ್ರಪತಿ ದ್ರೌಪದಿ ಮುರ್ಮುರಿಂದ ಪದ್ಮವಿಭೂಷಣ ಪ್ರಶಸ್ತಿ ಸ್ವೀಕರಿಸಿದ ಮಾಜಿ ಮುಖ್ಯಮಂತ್ರಿ, ನಾಡಿನ ರಾಜಕೀಯ ಮುತ್ಸದ್ಧಿ ಎಸ್.ಎಂ.ಕೃಷ್ಣ



ಆರ್ಕಿಯಾಲಜಿಕಲ್ ಕೆಮಿಸ್ಟ್ ಎಸ್.ಸುಬ್ಬರಾಮನ್ ಅವರಿಗೆ ಪದ್ಮಶ್ರೀ ಪ್ರಶಸ್ತಿ ಪ್ರದಾನ ಮಾಡಿದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು

ಮೈಸೂರು, ಮಾ.23(ಆರ್‌ಕೆ)–ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ಬುಧವಾರ ಸಂಜೆ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸಾಧಕ ಗಣ್ಯರಿಗೆ ಪದ್ಮವಿಭೂಷಣ, ಪದ್ಮಭೂಷಣ, ಪದ್ಮಶ್ರೀ ಪ್ರಶಸ್ತಿಗಳನ್ನು ಪ್ರದಾನ ಮಾಡಿದರು.

ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರಿಗೆ 'ಪದ್ಮವಿಭೂಷಣ', ಮೈಸೂರಿನ ಪುರಾತತ್ವ ತಜ್ಞ ಎಸ್.ಸುಬ್ಬರಾಮನ್ ಅವರಿಗೆ ಪದ್ಮಶ್ರೀ ಪ್ರಶಸ್ತಿಯನ್ನು ರಾಷ್ಟ್ರಪತಿಗಳಿಂದ ಸ್ವೀಕರಿಸಿದರು. ಇವರು ಸೇರಿದಂತೆ 54 ಗಣ್ಯರಿಗೆ ಪದ್ಮ ಪ್ರಶಸ್ತಿ ಪ್ರದಾನ ಮಾಡಲಾಯಿತು. ಮೈಸೂರಿನ ಖ್ಯಾತ ಲೇಖಕ ಡಾ. ಎಸ್.ಎಲ್.ಭೈರಪ್ಪ ಅವರಿಗೆ ಏಪ್ರಿಲ್ 5ರಂದು ನಡೆಯಲಿರುವ ಸಮಾರಂಭದಲ್ಲಿ ಪದ್ಮಭೂಷಣ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಈ ಬಾರಿ 6 ಮಂದಿಗೆ ಪದ್ಮವಿಭೂಷಣ, 9 ಮಂದಿಗೆ ಪದ್ಮಭೂಷಣ ಹಾಗೂ 91 ಮಂದಿಗೆ ಪದ್ಮಶ್ರೀ ಪ್ರಶಸ್ತಿ ನೀಡಲಾಗಿದೆ. ಆ ಪೈಕಿ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರಿಗೆ ಪಬ್ಲಿಕ್ ಅಫೇರ್ಸ್ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆ ಪರಿಗಣಿಸಿ ಭಾರತ ಸರ್ಕಾರವು ಪ್ರತಿಷ್ಠಿತ ಪದ್ಮವಿಭೂಷಣ ಪ್ರಶಸ್ತಿ ನೀಡಿ ಗೌರವಿಸಿದೆ. ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿ, ಉಪ ಮುಖ್ಯಮಂತ್ರಿಯಾಗಿ, ವಿದೇಶಾಂಗ ಸಚಿವರಾಗಿ, ರಾಜ್ಯಪಾಲರಾಗಿ, ವಿಧಾನಸಭಾಧ್ಯಕ್ಷರಾಗಿ ಸೇವೆ ಸಲ್ಲಿಸಿರುವ 91 ವರ್ಷದ ಎಸ್.ಎಂ.ಕೃಷ್ಣ ಇತ್ತೀಚೆಗಷ್ಟೇ ಸಕ್ರಿಯ ರಾಜಕಾರಣದಿಂದ ನಿವೃತ್ತರಾಗಿದ್ದಾರೆ.

ಎಸ್.ಎಂ.ಕೃಷ್ಣ ಅವರಿಗೆ ಪದ್ಮವಿಭೂಷಣ ಪ್ರಶಸ್ತಿ ಪ್ರದಾನ ಮಾಡಿದ ಬಳಿಕ ಟ್ವೀಟ್ ಮಾಡಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ಮಾಜಿ ವಿದೇಶಾಂಗ ವ್ಯವಹಾರಗಳ ಸಚಿವರು ಹಾಗೂ ಕರ್ನಾಟಕದ ಮಾಜಿ ಮುಖ್ಯಮಂತ್ರಿ ಕೃಷ್ಣ ಅವರು 6 ದಶಕಗಳಿಗೂ ಹೆಚ್ಚು ಕಾಲ ಆಡಳಿತದಲ್ಲಿ ಅವಿರತ ಸಾಧನೆ ಗೈದಿದ್ದಾರೆಂದು ಶ್ಲಾಘಿಸಿದ್ದಾರೆ.

ಪದ್ಮ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ವಿವಿಧ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿ ರಾಷ್ಟ್ರದ ಪ್ರಗತಿಗೆ ಕೊಡುಗೆ ನೀಡಿದ ಗಣ್ಯರಿಗೆ ಪದ್ಮ ಪ್ರಶಸ್ತಿ ಪ್ರದಾನ ಮಾಡುತ್ತಿರುವುದು ಇತರರಿಗೆ ಪ್ರೇರಣೆ ಮತ್ತು ಗೌರವ ತಂದಿದೆ ಎಂದು ಟ್ವೀಟ್ ಮಾಡಿ ಪ್ರಶಂಸಿಸಿದ್ದಾರೆ.

ಅವಿಸ್ಮರಣೀಯ: ರಾಷ್ಟ್ರಪತಿಗಳಿಂದ ಪದ್ಮಶ್ರೀ ಪ್ರಶಸ್ತಿ ಸ್ವೀಕರಿಸಿದ ಮೈಸೂರಿನ ಖ್ಯಾತ ಪುರಾತತ್ವ ತಜ್ಞ ಎಸ್.ಸುಬ್ಬರಾಮನ್ ಅವರು 'ಮೈಸೂರು ಮಿತ್ರ'ನೊಂದಿಗೆ ಸಂತಸದ ಕ್ಷಣವನ್ನು ಹಂಚಿಕೊಂಡರು. ನವದೆಹಲಿಯಿಂದ ದೂರವಾಣಿ ಮೂಲಕ ಮಾತನಾಡಿದ 93 ವರ್ಷದ ಸುಬ್ಬರಾಮನ್ ಅವರು, ಆರ್ಕಿಯಲಾಜಿಕಲ್ ಸರ್ವೆ ಆಫ್ ಇಂಡಿಯಾ (ASI)ದಲ್ಲಿ ಸೂಪರಿಂಟೆಂಡಿಂಗ್ ಆರ್ಕಿಯಲಾಜಿಕಲ್ ಕೆಮಿಸ್ಟ್ ಆಗಿ ಸೇವೆ ಸಲ್ಲಿಸಿ ನಿವೃತ್ತಿಯಾಗಿದ್ದೇನೆ. ನನ್ನ ಕೆಲಸವನ್ನು ಗುರ್ತಿಸಿ ಸರ್ಕಾರ ನನಗೆ ಆ ಜವಾಬ್ದಾರಿ ನೀಡಿತ್ತು. ಪ್ರಧಾನಮಂತ್ರಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಹಾಗೂ ಹಲವು ಗಣ್ಯಾತಿ ಗಣ್ಯರ ಸಮ್ಮುಖದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಪದ್ಮಶ್ರೀ ಪ್ರಶಸ್ತಿ ಸ್ವೀಕರಿಸಿದ ಅವಿಸ್ಮರಣೀಯ ಕ್ಷಣವನ್ನು ಎಂದೂ ಮರೆಯಲಾಗದು ಎಂದರು.

ನನ್ನ ಮೊಮ್ಮಗಳಾದ ಸಿಂಧುಳೊಂದಿಗೆ ಮಾರ್ಚ್ 21ರಂದು ನಾನು ನವದೆಹಲಿಗೆ ಬಂದೆ. ಯುಎಸ್‌ಎಯ ನಾಸಾ ಏಮ್ಸ್ ರೀಸರ್ಚ್ ಸೆಂಟರ್‌ನಲ್ಲಿ ಎಲೆಕ್ಟ್ರಾನಿಕ್ಸ್ ಸಿಸ್ಟಮ್ಸ್ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿರುವ ನನ್ನ ಮಗ ರಾಮ್‌ಕುಮಾರ್ ಸುಬ್ಬರಾಮನ್ ಈ ಸಮಾರಂಭದಲ್ಲಿ ಪಾಲ್ಗೊಳ್ಳುವುದಕ್ಕಾಗಿಯೇ ನವದೆಹಲಿಗೆ ಬಂದಿದ್ದು, ರಾಷ್ಟ್ರಪತಿಗಳಿಂದ ಪದ್ಮಶ್ರೀ ಪ್ರಶಸ್ತಿ ಸ್ವೀಕರಿಸುವಾಗ ಅವರಿಬ್ಬರೂ ರಾಷ್ಟ್ರಪತಿ ಭವನದಲ್ಲಿ ಆಸೀನರಾಗಿದ್ದರು ಎಂದು ಸುಬ್ಬರಾಮನ್ ನುಡಿದರು.

ಮಹಾರಾಷ್ಟ್ರದ ಅಜಂತ ಕೇವ್ಸ್ ಪೇಂಟಿಂಗ್ಸ್, ಕಾಂಬೋಡಿಯಾದ ಆಂಗ್‌ಕೋರ್ ವಾಟ್ ಟೆಂಪಲ್, ತಾಂಜೋರ್‌ನ ಬೃಹದೀಶ್ವರ ದೇವಸ್ಥಾನದ ಚೋಳ ಮತ್ತು ನಾಯಕ ಆಳ್ವಿಕೆ ಚಿತ್ರಕಲೆ ಹಾಗೂ ಭಾಮಿಯನ್ ಬುದ್ಧರ ಬೃಹತ್ ಪ್ರತಿಮೆಗಳ (ಆಫ್ಘಾನಿಸ್ತಾನದ ಎರಡು ಬೃಹತ್ ಪ್ರತಿಮೆಗಳು) ಸಂರಕ್ಷಣೆಯಲ್ಲಿ ಸುಬ್ಬರಾಮನ್ ಅವರ ಕಾರ್ಯ ಪ್ರಧಾನವಾದುದಾಗಿದೆ.

ಇಂದು ಬಿಜೆಪಿ ಯುವ ಸಂಕಲ್ಪ ಸಮಾವೇಶ

ಬಿಜೆಪಿ ರಾಜ್ಯ ಕಾರ್ಯದರ್ಶಿ ವಿನಯ್ ಬಿದ್ರೆ ಉದ್ಘಾಟನೆ



ಮೈಸೂರು,ಮಾ.23(ಪಿಎಂ)– ಮೈಸೂರು ನಗರ ಬಿಜೆಪಿ ಯುವ ಮೋರ್ಚಾ ವತಿಯಿಂದ ಮಾ.24ರಂದು ಬಿಜೆಪಿ ಯುವ ಸಂಕಲ್ಪ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಯುವ ಮೋರ್ಚಾ ನಗರಾಧ್ಯಕ್ಷ ಕಿರಣ್‌ಗೌಡ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 5.30ಕ್ಕೆ ಮೈಸೂರಿನ ಜೆಕೆ ಮೈದಾನದ ಮೈಸೂರು ವೈದ್ಯಕೀಯ ಕಾಲೇಜಿನ ಪ್ಲಾಟಿನಂ ಜುಬಿಲಿ ಸಭಾಂಗಣದಲ್ಲಿ ಸಮಾವೇಶ ನಡೆಯಲಿದೆ. ಬಿಜೆಪಿ ರಾಜ್ಯ ಕಾರ್ಯದರ್ಶಿ ವಿನಯ್ ಬಿದ್ರೆ ಸಮಾವೇಶ ಉದ್ಘಾಟಿಸಲಿದ್ದಾರೆ ಎಂದರು.

ಸಂಸದ ಪ್ರತಾಪ್ ಸಿಂಹ, ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಬಿಜೆಪಿ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ ಮೇಯರ್ ಶಿವಕುಮಾರ್, ಉಪಮೇಯರ್ ಡಾ.ಡಿ.ರೂಪ ಸೇರಿದಂತೆ ಬಿಜೆಪಿ ಮುಖಂಡರು ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ. 2 ಸಾವಿರಕ್ಕೂ ಹೆಚ್ಚು ಯುವ ಮೋರ್ಚಾ ಕಾರ್ಯಕರ್ತರು ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಆಸಕ್ತ ಯುವ ಜನರಿಗೂ ಸಮಾವೇಶಕ್ಕೆ ಮುಕ್ತ ಪ್ರವೇಶವಿದೆ. ಮೈಸೂರು ನಗರ ವ್ಯಾಪ್ತಿಯ ವಿಧಾನಸಭಾ ಕ್ಷೇತ್ರಗಳಿಂದ ಯುವ ಮೋರ್ಚಾ ಕಾರ್ಯಕರ್ತರು ಬೈಕ್ ರ್‍ಯಾಲಿ ಮೂಲಕ ಸಮಾವೇಶಕ್ಕೆ ಆಗಮಿಸಲಿದ್ದಾರೆ ಎಂದರು. ಮೈಸೂರು ನಗರ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಬಿ.ಎಂ.ಸಂತೋಷ್, ಕಾರ್ಯದರ್ಶಿ ಹರ್ಷ, ಪದಾಧಿಕಾರಿ ಸಚಿನ್, ಸಮಾವೇಶದ ಸಂಚಾಲಕ ಎಸ್.ಭರತ್ ಗೋಷ್ಠಿಯಲ್ಲಿದ್ದರು.

ಬಿಜೆಪಿ ಬೆಂಬಲಿಸಿ ಚಾಮುಂಡೇಶ್ವರಿ ಕ್ಷೇತ್ರದ ಅಭಿವೃದ್ಧಿಗೆ ಅವಕಾಶ ಕಲ್ಪಿಸಿ

ಕ್ಷೇತ್ರದ ಜನತೆಯಲ್ಲಿ ಬಿಜೆಪಿ ಮುಖಂಡ ಎನ್.ಅರುಣ್‌ಕುಮಾರ್ ಗೌಡ ಮನವಿ



ಮೈಸೂರು, ಮಾ.23(ಪಿಎಂ)– ರಾಜ್ಯದಲ್ಲಿ ಮತ್ತೊಮ್ಮೆ ಬಿಜೆಪಿ ಅಧಿಕಾರಕ್ಕೆ ಬರುವುದು ನಿಶ್ಚಿತ. ಚಾಮುಂಡೇಶ್ವರಿ ಕ್ಷೇತ್ರದ ಜನತೆ ಬಿಜೆಪಿ ಬೆಂಬಲಿಸುವ ಮೂಲಕ ಕ್ಷೇತ್ರದ ಅಭಿವೃದ್ಧಿಗೆ ಪೂರಕ ವಾತಾವರಣ ಕಲ್ಪಿಸಬೇಕೆಂದು ಕ್ಷೇತ್ರದ ಬಿಜೆಪಿ ನಿಕಟಪೂರ್ವ ಅಧ್ಯಕ್ಷ ಹಾಗೂ ಮುಖಂಡ ಎನ್.ಅರುಣ್‌ಕುಮಾರ್ ಗೌಡ ಕೋರಿದರು.

ಕ್ಷೇತ್ರ ವ್ಯಾಪ್ತಿಯ ಈರಪ್ಪನಕೊಪ್ಪಲು ಗ್ರಾಮಕ್ಕೆ ಭೇಟಿ ನೀಡಿ, ಗ್ರಾಮಸ್ಥರು, ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಅವರು, ಕೇಂದ್ರದಲ್ಲಿ ಪ್ರಧಾನಿ ನರೇಂದ್ರ ಮೋದಿಯವರು, ರಾಜ್ಯದಲ್ಲಿ ಮಾಜಿ ಸಿಎಂ ಯಡಿಯೂರಪ್ಪ, ಸಿಎಂ ಬಸವರಾಜ ಬೊಮ್ಮಾಯಿಯವರು ಜನಪರ ಯೋಜನೆಗಳನ್ನು ನೀಡಿದ್ದಾರೆ. ಹಾಗಾಗಿ ರಾಜ್ಯದಲ್ಲಿ ಮತ್ತೊಮ್ಮೆ ಜನತೆಯ ಆಶೀರ್ವಾದ ಬಿಜೆಪಿಗೆ ಸಿಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಇಂತಹ ಸಂದರ್ಭದಲ್ಲಿ ಚಾಮುಂಡೇಶ್ವರಿ ಕ್ಷೇತ್ರದಲ್ಲೂ ಬಿಜೆಪಿ ಅಭ್ಯರ್ಥಿ ಚುನಾಯಿಸಿದರೆ, ಕ್ಷೇತ್ರದ ಅಭಿವೃದ್ಧಿ ಶರವೇಗದಲ್ಲಿ ಸಾಗಲಿದೆ. ಅಲ್ಲದೆ, ಕ್ಷೇತ್ರವನ್ನು ನಿಮ್ಮೆಲ್ಲರ ನಿರೀಕ್ಷೆಯಂತೆ ಮಾದರಿ ಕ್ಷೇತ್ರವನ್ನಾಗಿ ಮಾಡಲು ಸಹಕಾರಿಯಾಗಲಿದೆ. ಆದ್ದರಿಂದ ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿಯನ್ನು ಬೆಂಬಲಿಸಬೇಕೆಂದು ಕ್ಷೇತ್ರದ ಜನತೆಯಲ್ಲಿ ಮನವಿ ಮಾಡಿದರು.

ಕ್ಷೇತ್ರದ ಬಿಜೆಪಿ ಮುಖಂಡ ಗೋಪಾಲ್ ಗೌಡ, ಗ್ರಾಪಂ ಸದಸ್ಯ ಲೋಕೇಶ್, ಗ್ರಾಮದ ಮುಖಂಡರಾದ ಸೋಮರಾಜು, ಸೋಮಶೇಖರ್, ಚಿಕ್ಕಸ್ವಾಮಿ ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.



ಮೈಸೂರಿನ ಪಡುವಾರಹಳ್ಳಿ, 3ನೇ ಮುಖ್ಯರಸ್ತೆಯಲ್ಲಿರುವ ಸರ್ಕಾರಿ ಶಾಲೆ ಆವರಣದಲ್ಲಿ ಸುಮಾರು 14 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಅತ್ಯಾಧುನಿಕ ಶುದ್ಧ ಕುಡಿಯುವ ನೀರಿನ ಘಟಕವನ್ನು ಶಾಸಕ ಎಲ್.ನಾಗೇಂದ್ರ ಉದ್ಘಾಟಿಸಿದರು. ಇದೇ ವೇಳೆ ಮೇಟಗಳ್ಳಿ ರೈಲ್ವೆ ಗೇಟ್ ರಸ್ತೆಯಲ್ಲಿರುವ ಸಿದ್ದಪ್ಪಾಜಿ ದೇವಸ್ಥಾನದಲ್ಲಿ 9 ಲಕ್ಷ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿ, ಆದಿಜಾಂಬವ ಕಾಲೋನಿಯಲ್ಲಿ ಅಂಬೇಡ್ಕರ್ ಸಮುದಾಯ ಭವನ ನಿರ್ಮಾಣ ಕಾಮಗಾರಿಗೂ ಭೂಮಿಪೂಜೆ ನೆರವೇರಿಸಿದರು. ನಗರಪಾಲಿಕೆ ಸದಸ್ಯರಾದ ಚಿಕ್ಕವೆಂಕಟು, ರಮೇಶ್, ಮಾಜಿ ಸದಸ್ಯ ದೇವರಾಜು, ಒಂಟಿಕೊಪ್ಪಲು ವಾರ್ಡ್ ಅಧ್ಯಕ್ಷ ಮಂಜು, ಕೇಬಲ್ ಶಿವು, ನರೇಂದ್ರ ಬಾಬು, ಸಿ.ಡಿ.ಕುಮಾರ್, ಬಸವರಾಜು, ನಾರಾಯಣ, ವೇಣು, ಗೋಪಾಲ್, ಟೇಲರ್ ಸ್ವಾಮಿ, ಟ್ರಸ್ಟ್ ಸೋಮಣ್ಣ, ಮಧು ಗಿರೀಶ್, ಸುರೇಶ್, ಉದಯ್, ಸುಧಾ ರಾಮಚಂದ್ರ, ಉಮಾ, ಧನಲಕ್ಷ್ಮಿ, ಛಾಯಾ, ಮೇಟಗಳ್ಳಿ ವಾರ್ಡ್ ಅಧ್ಯಕ್ಷ ನರಸಿಂಹಮೂರ್ತಿ, ಪಟೇಲ್ ವೆಂಕಟರಾಮಗೌಡ, ವಿನೋದ್, ಶಿವು, ರವಿಕೆಂಪಣ್ಣ, ಕರಿಯಪ್ಪ, ದಾಸು, ರಾಜು, ವಿನೋದ್, ಸತೀಶ್, ಪೃಥ್ವಿ, ಯಜಮಾನರಾದ ಹೊಂಗಯ್ಯ, ರಾಮಶಾಸ್ತ್ರಿ, ಮುದ್ದು ಮಾದೇವು ಉಪಸ್ಥಿತರಿದ್ದರು.

ಮೀಸಲಾತಿ ಸಂಬಂಧ ಸುರ್ಜೇವಾಲಾಗೆ ಮುಖ್ಯಮಂತ್ರಿ ಬೊಮ್ಮಾಯಿ ತಿರುಗೇಟು

ಬೆಂಗಳೂರು, ಮಾ.23(ಕೆಎಂಶಿ)–ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಮೀಸಲಾತಿಗೆ ಸಂಬಂಧಿಸಿದಂತೆ ಇತಿಹಾಸವನ್ನು ಓದಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಲಹೆ ನೀಡಿದರು.

ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಮುಖ್ಯಮಂತ್ರಿಗಳ ರಾಜೀನಾಮೆಗೆ ಆಗ್ರಹಿಸಿರುವ ಬಗ್ಗೆ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು, ಮೀಸಲಾತಿ ಬಗ್ಗೆ ಕಾಂಗ್ರೆಸ್‌ಗೆ ಮಾತನಾಡುವ ನೈತಿಕ ಹಾಗೂ ರಾಜಕೀಯ ಅಧಿಕಾರವಿಲ್ಲ ಎಂದರು.

ಈಗಾಗಲೇ ಮೀಸಲಾತಿಗೆ ಕಾನೂನು ರಚಿಸಿದ್ದು, ಆ ಪ್ರಕಾರ ನೇಮಕಾತಿ ಹಾಗೂ ಬಡ್ತಿ ಪ್ರಕ್ರಿಯೆ ಪ್ರಾರಂಭವಾಗಿದೆ. ಸಂವಿಧಾನದ ಶೆಡ್ಯೂಲ್ 9ಕ್ಕೆ ಸೇರಿಸಲು ಸಚಿವ ಸಂಪುಟದ ಅನುಮೋದನೆಯಾಗಿದ್ದು, ರಾಜ್ಯಪಾಲರಿಗೆ ಕಳುಹಿಸಲಾಗಿದೆ. ಶೆಡ್ಯೂಲ್ 9ಗೆ ಸೇರ್ಪಡೆ ಮಾಡುವ ಬದ್ಧತೆ ಸರ್ಕಾರಕ್ಕಿದೆ ಎಂದರು.

ಯುಗಾದಿ ಸಂಗೀತೋತ್ಸವ... ಪೊಲೀಸ್ ಬ್ಯಾಂಡ್‌ನ ನಿನಾದ...

ಅರಮನೆ ಆವರಣದಲ್ಲಿ ಸಂಗೀತ ಪ್ರೇಮಿಗಳಿಗೆ ಗುರುಕಿರಣ್ ಹಾಡು, ನೃತ್ಯದ ರಸದೌತಣ



ಮೈಸೂರು, ಮಾ.23(ಎಂಕೆ)– ಪೊಲೀಸ್ ಬ್ಯಾಂಡ್‌ನ ಸುಮಧುರ ಸವಿನಾದ ಕಿವಿಗೆ ಇಂಪು ನೀಡಿದರೆ, ಖ್ಯಾತ ಸಂಗೀತ ನಿರ್ದೇಶಕ ಗುರುಕಿರಣ್ ಸಂಗೀತ ರಸಸಂಜೆ ಮುದ ನೀಡಿತು...!

ಮೈಸೂರು ಅರಮನೆ ಆವರಣದಲ್ಲಿ ನಡೆಯುತ್ತಿರುವ 'ಯುಗಾದಿ ಸಂಗೀತೋತ್ಸವ'ದಲ್ಲಿ ಮನಸ್ಸಿಗೆ ಆಹ್ಲಾದ ನೀಡುವ ವಾದ್ಯ ಪರಿಕರಗಳ ನಾದ, ಕಿವಿಗೆ ಇಂಪಾದ ಸುಮಧುರ ಹಾಡು, ನೃತ್ಯಗಳ ವೈಭವ ಸಂಗೀತ ರಸಿಕರ ಮನಸೂರೆಗೊಂಡಿತು. ಆರಂಭದಲ್ಲಿ ತ್ಯಾಗರಾಜರು, ಮುತ್ತಯ್ಯ ಭಾಗವತರು ಸೇರಿದಂತೆ ಹಲವರ ರಚನೆಯ ಸುಮಧುರ ಹಾಡುಗಳನ್ನು ನುಡಿಸಿದ ಪೊಲೀಸ್ ಇಲಾಖೆಯ ಕರ್ನಾಟಕ ಬ್ಯಾಂಡ್‌ನ ಕಲಾವಿದರು ಕೇಳುಗರ ಕಿವಿಗಳಿಗೆ ಸುಮಧುರ ಸಂಗೀತ ನಾದ ನೀಡಿ, ಮನಸ್ಸಿಗೆ ಮುದ ನೀಡಿದರು. ಬ್ಯಾಂಡ್ ಆರ್.ಮೋಹನ್ ನೇತೃತ್ವದಲ್ಲಿ ನಡೆದ ಕರ್ನಾಟಕ ಬ್ಯಾಂಡ್, ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

ಗುರುಕಿರಣ್ ನೈಟ್ಸ್: ಖ್ಯಾತ ಸಂಗೀತ ನಿರ್ದೇಶಕ, ಹಿನ್ನಲೆ ಗಾಯಕ ಗುರುಕಿರಣ್ ಮತ್ತು ತಂಡದವರಿಂದ ಪ್ರಸ್ತುತಪಡಿಸಿದ 'ಗುರುಕಿರಣ್ ನೈಟ್ಸ್' ಸಂಗೀತ ಸಂಜೆ ನೆರೆದಿದ್ದವರು ಸಂಭ್ರಮಿಸುವಂತೆ ಮಾಡಿತು. ಬಾಯ್ಸ್ ಗ್ರೂಪ್‌ನ ನೃತ್ಯಪಟುಗಳ 'ಜೈ ಶ್ರೀರಾಮ್, ಜೈ ಭಜರಂಗಿ' ನೃತ್ಯದೊಂದಿಗೆ ಆರಂಭಗೊಂಡ ಸಂಗೀತ ಕಾರ್ಯಕ್ರಮ ಅಭಿಮಾನಿಗಳಿಗೆ ಮಸ್ತ್ ಮಜಾ ತಂದಿತು. ಖ್ಯಾತ ಗಾಯಕಿ ಅನುರಾಧ ಭಟ್, 'ಶ್ರೀ ಚಾಮುಂಡೇಶ್ವರಿ ಅಮ್ಮ' ಹಾಡನ್ನು ಹಾಡಿದರೆ, ಗಾಯಕಿ ಚೈತ್ರ ಆಪ್ತರಕ್ಷಕ ಚಿತ್ರ 'ಓಂಕಾರ ಅಭಿನಯ ವೇದ' ಹಾಗೂ ಮೈಸೂರು ಗಾಯಕ ನಿತಿನ್ ರಾಜಾರಾಂ ಶಾಸ್ತ್ರಿ 'ಈ ಕನ್ನಡ ಮಣ್ಣನ್ನು ಮರಿಬೇಡ' ಹಾಡನ್ನು ಹಾಡುವ ಮೂಲಕ ಸಂಗೀತ ಪ್ರಿಯರ ಮೆಚ್ಚುಗೆಗೆ ಪಾತ್ರರಾದರು.

'ಊರು ಅಂದ್ರೆ ಊರು ಇದು ನಮ್ಮ ಮೈಸೂರು', ಸೂರು ಅಂದ್ರೆ ಸೂರು ಇದು ನಮ್ಮ ಮೈಸೂರು' ಎಂದು ಹಾಡುತ್ತಲೇ ವೇದಿಕೆಗೆ ಆಗಮಿಸಿದ ಗುರುಕಿರಣ್ ಒಮ್ಮೆಗೆ ಐದಾರು ಹಾಡುಗಳನ್ನು ಹಾಡಿ, ನೃತ್ಯ ಕಲಾವಿದರೊಂದಿಗೆ ಹೆಜ್ಜೆ ಹಾಕಿ ರಂಜಿಸಿದರು. 'ಅಮ್ಮ ಐಲವ್ ಯೂ' ಚಿತ್ರ 'ಅಮ್ಮ ನನ್ನಿಜನುಮ ನಿನ್ನ ವರದಾನವಮ್ಮ' ಹಾಡಿನ ಮೂಲಕ ತಾಯಿ ಪ್ರೀತಿ ಕಟ್ಟಿಕೊಟ್ಟರು. ಬಳಿಕ ಹತ್ತು-ಹಲವು ಹಾಡು, ನೃತ್ಯದ ಮೂಲಕ ಕಲಾ ರಸಿಕರ ಮನತಣಿಸಿದರು. ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಅರಮನೆ ಮಂಡಳಿ ಉಪ ನಿರ್ದೇಶಕ ಸುಬ್ರಮಣ್ಯ ಕಲಾವಿದರಿಗೆ ನೆನಪಿನ ಕಾಣಿಕೆ ನೀಡಿ, ಅಭಿನಂದಿಸಿದರು.



ಮೈಸೂರು ಮಿತ್ರ ಶುಕ್ರವಾರ 24 ಮಾರ್ಚ್ 2023

ಜಿಲ್ಲೆಗೆ ಜೀವರಕ್ಷಕ ಉಪಕರಣ, ಐಸಿಯು ಸೌಲಭ್ಯವಿರುವ

ಎರಡು ತುರ್ತು ವಾಹನಗಳ ಹಸ್ತಾಂತರ

- ಸಂಸದರ ಅನುದಾನದಿಂದ ಪ್ರತಾಪ್‌ಸಿಂಹ ಕೊಡುಗೆ
- ವಿರಾಜಪೇಟೆ, ಮಡಿಕೇರಿಯ ಜನರಿಗೆ ಅನುಕೂಲ



ಮಡಿಕೇರಿ, ಮಾ.23– ನಗರದ ಜಿಲ್ಲಾ ಸ್ಪತ್ರೆಯ ಆವರಣದಲ್ಲಿ ಸಂಸದರ ಅನುದಾನದಲ್ಲಿ 17 ಲಕ್ಷ ರೂ. ವೆಚ್ಚದ ಪ್ರಾಥಮಿಕ ಜೀವ ರಕ್ಷಕ ಉಪಕರಣ ಹಾಗೂ 42 ಲಕ್ಷ ರೂ. ಮೌಲ್ಯದ ಅತ್ಯಾಧುನಿಕ ಐಸಿಯು ಸೌಲಭ್ಯ ಹೊಂದಿರುವ ಒಟ್ಟು 2 ಜೀವ ರಕ್ಷಕ ತುರ್ತು ವಾಹನಗಳನ್ನು ಹಸ್ತಾಂತರಿಸುವ ಮೂಲಕ ಸಂಸದರು ಜಿಲ್ಲೆಯ ಎರಡೂ ವಿಧಾನ ಸಭಾ ಕ್ಷೇತ್ರಗಳಿಗೆ ಆರೋಗ್ಯ ಸೇವೆಯನ್ನು ವಿಸ್ತರಿಸಿದ್ದಾರೆ.

ವಿರಾಜಪೇಟೆ ಕ್ಷೇತ್ರದ ಶಾಸಕ ಕೆ.ಜಿ. ಬೋಪಯ್ಯ ಅವರ ಮನವಿಯಂತೆ 17 ಲಕ್ಷ ರೂ. ಮೌಲ್ಯದ ತುರ್ತು ವಾಹನವನ್ನು ವಿರಾಜಪೇಟೆ ಸರಕಾರಿ ಆಸ್ಪತ್ರೆಗೆ ಮತ್ತು 42 ಲಕ್ಷ ರೂ. ಮೌಲ್ಯದ ಆತ್ಯಾಧುನಿಕ ಐಸಿಯು ಸೌಲಭ್ಯ ಹೊಂದಿರುವ ತುರ್ತು ವಾಹನವನ್ನು ಶಾಸಕ ಅಪ್ಪಚ್ಚು ರಂಜನ್ ಅವರ ಕೋರಿಕೆ ಮೇರೆಗೆ ಮಡಿಕೇರಿ ಮೆಡಿಕಲ್ ಕಾಲೇಜಿಗೆ ಸಂಸದ ಪ್ರತಾಪ್ ಸಿಂಹ ಹಸ್ತಾಂತರಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಂಸದ ಪ್ರತಾಪ್ ಸಿಂಹ ಕೋವಿಡ್ ಸಂದರ್ಭ ಆರೋಗ್ಯ ಕ್ಷೇತ್ರದ ಉನ್ನತೀಕರಣಕ್ಕೆ ಪ್ರಧಾನಿ ನರೇಂದ್ರ ಮೋದಿ ಹೆಚ್ಚಿನ ಒತ್ತು ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಹಿಂದಿನ ಸಂಸದರ ನಿಧಿ ಯಲ್ಲಿ ಬಳಕೆಯಾಗದೇ ಉಳಿದಿದ್ದ 2 ಕೋಟಿ ರೂ.ಗಳನ್ನು ಆರೋಗ್ಯ ಕ್ಷೇತ್ರಕ್ಕೆ ಬಳಸುವಂತೆ ಸೂಚಿಸಿದ್ದರು. ಅದರಂತೆ ಮೈಸೂರಿಗೆ 4 ಹಾಗೂ ಕೊಡಗಿಗೆ 2 ಜೀವ ರಕ್ಷಕ ತುರ್ತು ವಾಹನಗಳನ್ನು ಹಸ್ತಾಂತರಿಸುತ್ತಿರುವುದಾಗಿ ತಿಳಿಸಿದರು.

ಮಲ್ಟಿ ಸೆಷಾಲಿಟಿ ಆಸ್ಪತ್ರೆ: ಮಡಿಕೇರಿ ಜಿಲ್ಲಾಸ್ಪತ್ರೆಯನ್ನು 750 ಸುಸಜ್ಜಿತ ಹಾಸಿಗೆಗಳ ನ್ಯೂರೋ, ಟ್ರಾಮ ಮತ್ತು ಕಾರ್ಡಿಯಾಕ್ ವಿಶೇಷತೆಗಳನ್ನು ಒಳಗೊಂಡಂತೆ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯನ್ನಾಗಿ ನಿರ್ಮಾಣ ಮಾಡಲಾಗುತ್ತಿದೆ ಎಂದು ಅವರು ಇದೇ ವೇಳೆ ಮಾಹಿತಿ ನೀಡಿದರು.

ಜಿಲ್ಲಾಸ್ಪತ್ರೆಯ ಆವರಣದಲ್ಲಿ ಈಗಾಗಲೇ 100 ಕೋಟಿ ರೂ. ವೆಚ್ಚದಲ್ಲಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಕಟ್ಟಡ ನಿರ್ಮಾಣ ಮಾಡಲಾಗುತ್ತಿದ್ದು, ಶೀಘ್ರದಲ್ಲೇ ಲೋಕಾರ್ಪಣೆ ಮಾಡಲಾಗುತ್ತದೆ. ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರ ಅವಧಿಯಲ್ಲಿ ಈ ಆಸ್ಪತ್ರೆಯನ್ನು ಮೆಡಿಕಲ್ ಕಾಲೇಜು ನಿಯಮಗಳಿಗೆ ಅನುಗುಣವಾಗಿ ಉನ್ನತೀಕರಣ ಮಾಡಲು 100 ಕೋಟಿ ರೂ.ಗಳನ್ನು ನೀಡಲಾಗಿದೆ. ಒಟ್ಟು 750 ಸುಸಜ್ಜಿತ ಹಾಸಿಗೆಗಳ ಸೌಲಭ್ಯ ಇರಲಿದ್ದು, ಕೊಡಗಿನ ಜನ ಸಂಖ್ಯೆಗೆ ಅನುಗುಣವಾಗಿ ಕಾರ್ಡಿಯಾಕ್, ಟ್ರಾಮ ಮತ್ತು ನ್ಯೂರೋ ವಿಭಾಗಗಳು ಇದೇ ಜಿಲ್ಲಾಸ್ಪತ್ರೆಯಲ್ಲಿ ಇರಲಿದೆ. ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಲಭಿಸುವ ಎಲ್ಲಾ ಸೌಲಭ್ಯಗಳು ಈ ಆಸ್ಪತ್ರೆ ಕಟ್ಟಡದಲ್ಲೇ ಲಭ್ಯವಾಗಲಿದೆ. ಕಟ್ಟಡ ಕಾಮಗಾರಿ ವೇಗವಾಗಿ ಸಾಗಿದ್ದು, ಶೀಘ್ರದಲ್ಲೇ ಲೋಕಾರ್ಪಣೆ ಮಾಡಲಾಗುತ್ತದೆ ಎಂದು ಸಂಸದ ಪ್ರತಾಪ್ ಸಿಂಹ ಮಾಹಿತಿ ನೀಡಿದರು.

ಈ ಸಂದರ್ಭ ಶಾಸಕರಾದ ಕೆ.ಜಿ. ಬೋಪಯ್ಯ, ಅಪ್ಪಚ್ಚು ರಂಜನ್, ಎಂಎಲ್‌ಸಿ ಸುಜಾ ಕುಶಾಲಪ್ಪ ಜಿಲ್ಲಾಧಿಕಾರಿ ಡಾ. ಬಿ.ಸಿ. ಸತೀಶ, ಮೆಡಿಕಲ್ ಕಾಲೇಜ್ ಡೀನ್ ಕುಶಾಲಪ್ಪ, ಮಕ್ಕಳ ತಜ್ಞ ಡಾ. ಪುರುಷೋತ್ತಮ್, ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ರಮೇಶ್ ಹೊಳ್ಳ ಸೇರಿದಂತೆ ಮತ್ತಿತರರು ಹಾಜರಿದ್ದರು.

ವಿರಾಜಪೇಟೆಯಲ್ಲಿ ತೆರಿಗೆ ಹೆಚ್ಚಳ ವಿರೋಧಿಸಿ ಕಾಂಗ್ರೆಸ್ ಪ್ರತಿಭಟನೆ



ವಿರಾಜಪೇಟೆ, ಮಾ.23– ಪುರಸಭೆ ವ್ಯಾಪ್ತಿಯಲ್ಲಿ ವಾಣಿಜ್ಯ, ವಸತಿ ಸೇರಿದಂತೆ ಇತ್ಯಾದಿ ತೆರಿಗೆ ಏರಿಕೆಯನ್ನು ವಿರೋಧಿಸಿ ಕಾಂಗ್ರೆಸ್ ಪಕ್ಷ ಪುರಸಭೆ ಎದುರು ಪ್ರತಿಭಟನೆ ನಡೆಸಿತು.

ಪ್ರತಿಭಟನೆ ನೇತೃತ್ವ ವಹಿಸಿದ್ದ ನಗರ ಕಾಂಗ್ರೆಸ್ ಅಧ್ಯಕ್ಷ ಮಾದಂಡ ತಿಮ್ಮಯ್ಯ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಪಟ್ಟಣದ ವ್ಯಾಪಾರಿಗಳು ತೀವ್ರ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದಾರೆ. ಇದೀಗ ಏಕಾಏಕಿ ವಸತಿ, ನೀರು ಸೇರಿದಂತೆ ವಿವಿಧ ತೆರಿಗೆಯನ್ನು ಶೇ.3 ರಷ್ಟು ಏರಿಕೆ ಮಾಡಿರುವುದು ಸೂಕ್ತವಲ್ಲ, ಬಿಜೆಪಿಯ ಸದಸ್ಯರು ಸಾಮಾಜಿಕ ಜಾಲತಾಣದಲ್ಲಿ ತೆರಿಗೆ ಏರಿಕೆ ಕೈ ಬಿಡಲಾಗಿದೆ ಎಂದು ಹೇಳಿಕೊಂಡಿದ್ದಾರೆ. ಈ ವಿಚಾರ ನ್ಯಾಯಸಮ್ಮತವಾಗಿ ಪುರಸಭೆಯಲ್ಲಿ ಚರ್ಚೆಯಾಗಬೇಕು. ಕೂಡಲೇ ಈ ನಿರ್ಧಾರವನ್ನು ಹಿಂದಕ್ಕೆ ಪಡೆಯಬೇಕು ಎಂದರು. ಪುರಸಭೆ ಸದಸ್ಯ ಎಸ್.ಹೆಚ್. ಮತೀನ್ ಮಾತನಾಡಿ, ತೆರಿಗೆ ಏರಿಕೆಯನ್ನು ನಾವು ವಿರೋಧ ಮಾಡುತ್ತೇವೆ. ಇದು ಖಂಡನೀಯ ಹಾಗೂ ಪ್ರಜಾಪ್ರಭುತ್ವದ ಕಗ್ಗೊಲೆಯಾಗಿದೆ. ಬಿಜೆಪಿ ಸದಸ್ಯರು ಮೊದಲು ಶಿಸ್ತು ಕಲಿಯಬೇಕು. ನಿಯಮವನ್ನು ಅರಿತು ಮಾತನಾಡುವುದು ಉತ್ತಮ. ಪುರಸಭೆಯ ಮುಖ್ಯಾಧಿಕಾರಿ ಸಭೆಯನ್ನು ಸೂಕ್ತ ರೀತಿ ನಡೆಸಬೇಕು, ಯಾರ ಕೈ ಗೊಂಬೆಯಾಗಬಾರದು ಎಂದರು. ಹಿರಿಯ ಸದಸ್ಯ ಸಿ.ಕೆ. ಪೃಥ್ವಿನಾಥ್ ಮಾತನಾಡಿ, ಸರಕಾರದ ಆದೇಶ ಇಲ್ಲದೆ ತೆರಿಗೆ ಏರಿಕೆ ಸರಿಯಲ್ಲ. ಈ ಸಂಬಂಧ ಸಭೆಯಲ್ಲಿಯೇ ಪ್ರತಿಭಟಿಸಿರುವುದಾಗಿ ಹೇಳಿದರು.

ವಿರಾಜಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪುರಸಭೆ ಸದಸ್ಯ ಪಿ.ರಂಜಿ ಪೂಣಚ್ಚ ಮಾತನಾಡಿ, ಬಿಜೆಪಿ ಅಧಿಕಾರಕ್ಕೆ ಬಂದ ಬಳಿಕ ಮೂರು ಬಾರಿ ತೆರಿಗೆ ಏರಿಕೆ ಮಾಡಲಾಗಿದೆ. ವಿವಿಧ ತೆರಿಗೆ ಶೇ.3 ರಷ್ಟು ಏರಿಕೆ ಮಾಡಿರುವುದು ಜನಸಾಮಾನ್ಯರಿಗೆ ಹೊರೆಯಾಗುತ್ತದೆ. ಬಿಜೆಪಿ ಆಡಳಿತದಲ್ಲಿ ಅಭಿವೃದ್ಧಿ ಶೂನ್ಯ, ಪಟ್ಟಣದಲ್ಲಿ ಚರಂಡಿ, ರಸ್ತೆ ಸೇರಿದಂತೆ ಮೂಲಭೂತ ಸೌಕರ್ಯ ಕಾಣದೆ ಪಟ್ಟಣ ಬರಿದಾಗಿದೆ. ಉತ್ತಮ ಆಡಳಿತ ನೀಡಲು ಸಾಧ್ಯವಾಗದೆ ಜನರ ಮೇಲೆ ತೆರಿಗೆ ಏರಿಕೆ ಮಾಡಿರುವುದು ಸರಿಯಲ್ಲ ಎಂದರು.

ಜಿಲ್ಲಾ ಕಾಂಗ್ರೆಸ್‌ನ ಮಾಜಿ ಕಾನೂನು ಸಲಹೆಗಾರ ಡಿ.ಸಿ. ಧ್ರುವಕುಮಾರ್ ಮಾತನಾಡಿದರು. ಪ್ರತಿಭಟನೆಯಲ್ಲಿ ಪಪಂ ಮಾಜಿ ಅಧ್ಯಕ್ಷ ವಿ.ಕೆ.ಸತೀಶ್, ಕಾಂಗ್ರೆಸ್ ಮುಖಂಡರಾದ ಮಾದಂಡ ಎಸ್. ಪೂವಯ್ಯ, ಜಿ.ಜಿ. ಮೋಹನ್, ನಗರ ಕಾಂಗ್ರೆಸ್ ಕಾರ್ಯದರ್ಶಿ ಶಶಿಧರನ್, ಪುರಸಭೆ ಸದಸ್ಯರಾದ ತಬಸಮ್ ಮತ್ತು ಮಹಮ್ಮದ್ ರಾಫಿ, ಅಗಸ್ಟಿನ್ ಬೆನ್ನಿ ಮತ್ತಿತರ ಪ್ರಮುಖರು ಉಪಸ್ಥಿತರಿದ್ದರು.

ಮನವಿ ಸ್ವೀಕರಿಸಿದ ಮುಖ್ಯಾಧಿಕಾರಿ ಚಂದ್ರಕುಮಾರ್ ಮಾತನಾಡಿ, ತೆರಿಗೆ ಏರಿಕೆ ಬಗ್ಗೆ ಚರ್ಚಿಸಲು ಈ ಕುರಿತು ನಿರ್ಧಾರ ಕೈಗೊಂಡು ಎರಡು ದಿನದಲ್ಲಿ ತುರ್ತು ಸಭೆ ನಡೆಸಿ ಈ ವಿಚಾರದ ಕುರಿತು ಮರು ನಿರ್ಧಾರ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಅನುಪಯುಕ್ತ ರಾಸಾಯನಿಕ ಸರಕು ಸಾಗಿಸುತ್ತಿದ್ದ ಲಾರಿ ಭಸ್ಮ

ಚಾಲಕ ಅಪಾಯದಿಂದ ಪಾರು, ತಾಂತ್ರಿಕದೋಷದಿಂದ ಬೆಂಕಿ ಸಾಧ್ಯತೆ



ಮಡಿಕೇರಿ, ಮಾ.23– ತಮಿಳುನಾಡಿನ ಕೊಯಮತ್ತೂರಿನಿಂದ ಮಂಗಳೂರು ಕಡೆಗೆ ಅನುಪಯುಕ್ತ ರಾಸಾಯನಿಕ ಸರಕನ್ನು ಸಾಗಿಸುತ್ತಿದ್ದ ಲಾರಿಯೊಂದು ಸಂಪೂರ್ಣ ಸುಟ್ಟು ಕರಕಲಾದ ಘಟನೆ ಕುಶಾಲನಗರದಲ್ಲಿ ನಡೆದಿದೆ.

ಗುರುವಾರ ಮುಂಜಾನೆ 2 ಗಂಟೆಯ ವೇಳೆಗೆ ಈ ಘಟನೆ ನಡೆದಿದ್ದು, ಲಾರಿ ಚಾಲಕ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಸರಕು ಸಾಗಿಸುತ್ತಿದ್ದ ಲಾರಿ ಕುಶಾಲನಗರಕ್ಕೆ ಆಗಮಿಸಿದ ಸಂದರ್ಭ ತಾಂತ್ರಿಕ ದೋಷ ಕಾಣಿಸಿಕೊಂಡಿತು. ಈ ಹಿನ್ನೆಲೆಯಲ್ಲಿ ಲಾರಿಯನ್ನು ಚಾಲಕ ಅಲ್ಲಿನ ಸರಕಾರಿ ಶಾಲೆಯ ಸಮೀಪದ ಹೆದ್ದಾರಿ ಬದಿ ನಿಲ್ಲಿಸಿದ್ದ. ಗುರುವಾರ ಬೆಳಗಿನ ಜಾವ ಲಾರಿಯ ಹಿಂಬದಿಯಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ನೋಡು ನೋಡುತ್ತಿದ್ದಂತೆಯೇ ಲಾರಿಗೆ ಬೆಂಕಿ ವ್ಯಾಪಿಸಿದೆ. ಈ ಸಂದರ್ಭ ಚಾಲಕ ಲಾರಿಯಲ್ಲಿದ್ದ ದಾಖಲೆಗಳನ್ನು ತೆಗೆದುಕೊಂಡಿದ್ದಾರೆ.

ಅನುಪಯುಕ್ತ ರಾಸಾಯನಿಕ ಮತ್ತು ಅದರ ಉತ್ಪನ್ನಗಳು ಲಾರಿಯಲ್ಲಿದ್ದ ಪರಿಣಾಮ ಬೆಂಕಿ ವೇಗವಾಗಿ ಹರಡಿದೆ. ವಿಷಯ ತಿಳಿಯುತ್ತಿದ್ದಂತೆಯೇ ಕುಶಾಲನಗರ ಅಗ್ನಿ ಶಾಮಕ ದಳದ ಸಿಬ್ಬಂದಿಗಳು ಸ್ಥಳಕ್ಕಾಗಮಿಸಿ ಬೆಂಕಿ ನಂದಿಸಲು ಕಾರ್ಯಾಚರಣೆ ನಡೆಸಿದರೂ ಬೆಂಕಿ ಹತೋಟಿಗೆ ಬರಲಿಲ್ಲ.

ಈ ಹಿನ್ನೆಲೆಯಲ್ಲಿ ಪಿರಿಯಾಪಟ್ಟಣದ ಅಗ್ನಿ ಶಾಮಕ ದಳದ ಸಿಬ್ಬಂದಿಗಳ ಸಹಿತ ಅಗ್ನಿ ನಂದಕ ವಾಹನವನ್ನು ಕುಶಾಲನಗರಕ್ಕೆ ಬರಮಾಡಿಕೊಂಡು ಬೆಂಕಿಯನ್ನು ನಂದಿಸಲಾಯಿತು. ಆದರೆ ಲಾರಿ ಮತ್ತು ಲಾರಿಯಲ್ಲಿದ್ದ ಅನುಪಯುಕ್ತ ರಾಸಾಯನಿಕ ವಸ್ತುಗಳು ಸಂಪೂರ್ಣವಾಗಿ ಸುಟ್ಟು ಕರಕಲಾಗಿದೆ. ಹೆದ್ದಾರಿಯಲ್ಲಿ ಈ ಘಟನೆ ನಡೆದ ಕಾರಣ ಸ್ಥಳದಲ್ಲಿ ಪೊಲೀಸರು ಹಾಜರಿದ್ದು, ಇತರ ವಾಹನಗಳ ಸುರಕ್ಷಿತ ಸಂಚಾರಕ್ಕೆ ಅನುವು ಮಾಡಿಕೊಟ್ಟಿದ್ದಾರೆ. ಈ ಘಟನೆ ಕುರಿತು ಕುಶಾಲನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಉಂಗುರ ನುಂಗಿದ 8 ತಿಂಗಳ ಹಸುಳೆ ಸಾವು

ಸಿದ್ದಾಪುರ(ಕೊಡಗು), ಮಾ.23– ಉಂಗುರ ನುಂಗಿದ ಎಂಟು ತಿಂಗಳ ಹಸುಗೂಸೊಂದು ಮೃತಪಟ್ಟಿರುವ



ಘಟನೆ ವಿರಾಜಪೇಟೆ ತಾಲೂಕಿನ ಸಿದ್ದಾಪುರ ಗ್ರಾಮ ಪಂಚಾಯತಿ ವ್ಯಾಪ್ತಿಯ ಕರಡಿಗೋಡು ಗ್ರಾಮದಲ್ಲಿ ಸಂಭವಿಸಿದೆ.

ಗ್ರಾಮದ ನಿವಾಸಿ ಮುನೀರ್ ಎಂಬುವರ ಗಂಡು ಮಗು ರಾತ್ರಿ ಮನೆಯಲ್ಲಿ ಆಟವಾಡುತ್ತಿದ್ದಾಗ ಆಕಸ್ಮಿಕವಾಗಿ ಉಂಗುರ ನುಂಗಿತ್ತು. ತಕ್ಷಣ ಸಿದ್ದಾಪುರ ಸಮುದಾಯ ಆರೋಗ್ಯ ಕೇಂದ್ರಕ್ಕೆ ದಾಖಲಿಸಿದರೂ ತೀವ್ರ ಉಸಿರಾಟದ ಸಮಸ್ಯೆಯಿಂದಾಗಿ ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿತ್ತು.

ವೈದ್ಯರು ಸರ್ಜರಿ ಮೂಲಕ ಉಂಗುರವನ್ನು ಹೊರತೆಗೆಯಲು ಸಾಧ್ಯವಾಯಿತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಗುರುವಾರ ಬೆಳಗ್ಗಿನ ಜಾವ ಮಗು ಮೃತಪಟ್ಟಿದೆ. ಆಕಸ್ಮಿಕವಾಗಿ ನಡೆದ ಘಟನೆಯಿಂದ ಮಗು ಮೃತಪಟ್ಟಿದ್ದು ಕುಟುಂಬದವರ ರೋಧನ ಮುಗಿಲು ಮುಟ್ಟಿತ್ತು. ಏನು ಅರಿವಿಲ್ಲದ ಮಕ್ಕಳು ಆಟವಾಡುವಾಗ ಸಿಕ್ಕಿದ ವಸ್ತುಗಳನ್ನೆಲ್ಲ ಬಾಯಿಗೆ ಹಾಕಿಕೊಳ್ಳುತ್ತವೆ. ಪೋಷಕರು ಜಾಗ್ರತರಾಗಬೇಕಾಗಿದೆ.

ಸರಕಾರಿ ಜಾಗಕ್ಕೆ ನಮೂನೆ 9/11ಎ ನೀಡಿದ ಪಿಡಿಒ

ಕರ್ತವ್ಯ ಲೋಪವೆಸಗಿರುವ ಬಗ್ಗೆ ದಾಖಲೆಗಳನ್ನೂ ಬಿಡುಗಡೆ ಮಾಡಿದ ಗ್ರಾಪಂ ಸದಸ್ಯ

ಸಿದ್ದಾಪುರ, ಮಾ.23– ಕಾನೂನನ್ನು ಗಾಳಿಗೆ ತೂರಿ ಸರಕಾರಿ ಜಾಗಕ್ಕೆ ಸಿದ್ದಾಪುರ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ನಮೂನೆ 9/11ಎ ನೀಡುವ ಮೂಲಕ ಕರ್ತವ್ಯ ಲೋಪ ಎಸಗಿರುವುದಲ್ಲದೆ ಅವ್ಯವಹಾರ ನಡೆಸಿದ್ದಾರೆ ಎಂದು ಗ್ರಾಮ ಪಂಚಾಯತಿ ಸದಸ್ಯ ಎಂ.ಎಸ್ ಶಾಹಿನುಲ್ಲಾ ಆರೋಪಿಸಿದ್ದಾರೆ.



ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಆರ್.ಟಿ.ಸಿ ಸಂಖ್ಯೆ 131/1 ಕ್ಕೆ ನಮೂನೆ 9/11 ನೀಡುವಂತೆ ಸಹಕಾರ ಸಂಘವೊಂದು ಸಿದ್ದಾಪುರದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ಸಿದ್ದಾಪುರ ಗ್ರಾಮ ಪಂಚಾಯತಿಗೆ ಅರ್ಜಿ ಸಲ್ಲಿಸಿತ್ತು. ಸದರಿ ಅರ್ಜಿಯ ಬಗ್ಗೆ 12.01.2023 ರಂದು ನಡೆದ ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ಚರ್ಚಿಸಲಾಗಿ, ದಾಖಲಾತಿ ಪರಿಶೀಲಿಸಿದ ಸಂದರ್ಭದಲ್ಲಿ ಆರ್.ಟಿ.ಸಿಯಲ್ಲಿರುವ ಜಾಗದ ಮಾಹಿತಿ ಸರ್ಕಾರದ್ದು ಎಂದು ನಮೂದಾಗಿದ್ದರಿಂದ 9/11 ಎ ನೀಡಲು ಸಾಧ್ಯವಿಲ್ಲವೆಂದು ಸಭೆಯಲ್ಲಿ ನಿರ್ಣಯಿಸಲಾಗಿತ್ತು.

ಆದರೆ ಇವೆಲ್ಲವನ್ನು ಗಾಳಿಗೆ ತೂರಿ ಗ್ರಾಮ ಪಂಚಾಯತಿ ಪಿಡಿಒ 9/11 ಎ ನೀಡಿರುವುದಾಗಿ ಆರೋಪಿಸಿದ ಅವರು ಇದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಬಿಡುಗಡೆ ಮಾಡಿದರು. ಸರಕಾರಿ ಜಾಗಕ್ಕೆ ನಮೂನೆ 9/11ಎ ನೀಡಿರುವುದರ ಹಿಂದೆ ಹಲವು ವ್ಯಕ್ತಿಗಳು ಶಾಮೀಲಾಗಿದ್ದು, ಬಾರಿ ಮೊತ್ತದ ಅವ್ಯವಹಾರ ನಡೆದಿದೆ ಎಂದು ಆರೋಪಿಸಿರುವ ಶಾಹಿನುಲ್ಲಾ ಮೇಲಾಧಿಕಾರಿಗಳು ತನಿಖೆ ನಡೆಸಬೇಕೆಂದು ಒತ್ತಾಯಿಸಿದರು.

15.02.2018 ರಲ್ಲಿ ನಡೆದ ಸಚಿವ ಸಂಪುಟದ ಸಭೆಯಲ್ಲಿ ಇ–ಸ್ವತ್ತು ತಂತ್ರಾಂಶಕ್ಕೆ ಬದಲಾವಣೆ ಮಾಡಿ ಸರಕಾರ ಆದೇಶ ಹೊರಡಿಸಿರುವ ಪ್ರಕಾರವಾಗಿಯೇ ಕಾನೂನಿನ ಚೌಕಟ್ಟಿನಲ್ಲಿ 9/11ಎ ನೀಡಲಾಗಿದೆ. ಮತ್ತು ಗ್ರಾಮ ಪಂಚಾಯತಿಯ ನಿರ್ಣಯ ಪುಸ್ತಕದಲ್ಲಿ ಕಾರ್ಯದರ್ಶಿಯ ಕೈ ತಪ್ಪಿನಿಂದ 9/11ಎ ಕೊಡಲು ಸಾಧ್ಯವಿಲ್ಲವೆಂದು ಬರೆಯಲಾಗಿದೆ ಎಂದು ಸಿದ್ದಾಪುರ ಗ್ರಾಮ ಪಂಚಾಯತಿ ಪಿಡಿಓ ಮನಮೋಹನ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ ಸ್ಪಷ್ಟಪಡಿಸಿದರು.

ಮಹದೇಶ್ವರ ಬೆಟ್ಟದಲ್ಲಿ ಯುಗಾದಿ ಮಹಾರಥೋತ್ಸವ

ಉಘೇ ಮಾದಪ್ಪ, ಉಘೇ ಮಾಯ್ಕಾರ, ಮೊಳಗಿದ ಘೋಷಣೆ



ಹನೂರು, ಮಾ.23– ಹೊಸ ಸಂವತ್ಸರದ ಚಂದ್ರಮಾನ ಯುಗಾದಿ ಹಬ್ಬದ ಪ್ರಯುಕ್ತ ಮಲೆ ಮಹದೇಶ್ವರ ಬೆಟ್ಟದಲ್ಲಿ ಬುಧವಾರ ಮಹಾರಥೋತ್ಸವವು ಬಹಳ ವಿಜೃಂಭಣೆಯಿಂದ ಜರುಗಿತು. ಈ ರಥೋತ್ಸವದಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಿದ್ದರು.

ಹನೂರು ತಾಲೂಕಿನ ಮಲೆ ಮಹದೇಶ್ವರ ಬೆಟ್ಟದಲ್ಲಿ ಯುಗಾದಿ ಜಾತ್ರೆ ಹಿನ್ನೆಲೆಯಲ್ಲಿ ಕಳೆದ ನಾಲ್ಕು ದಿನಗಳಿಂದ ಸಡಗರ–ಸಂಭ್ರಮದಿಂದ ಜಾತ್ರೆ ನಡೆಯಿತು. ಮಾ.22ರ ಬುಧವಾರ ಮುಂಜಾನೆ 4 ಗಂಟೆಯಿಂದ ಮಾದಪ್ಪನಿಗೆ ವಿಶೇಷ ಪೂಜೆ ನೆರವೇರಿಸಿ ಬಳಿಕ ಸಾಲೂರು ಬೃಹನ್ಮಠದ ಪೀಠಾಧಿಪತಿ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ನೇತೃತ್ವದಲ್ಲಿ ಮಹಾ ರಥೋತ್ಸವಕ್ಕೆ ಚಾಲನೆ ದೊರೆಯಿತು.

ಬೆಳಗ್ಗೆ 9.50 ಗಂಟೆಯಿಂದ 10.30 ಗಂಟೆವರೆಗೆ ನಡೆಯುವ ಶುಭಲಗ್ನದಲ್ಲಿ ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ಶ್ರದ್ಧಾಭಕ್ತಿಯಿಂದ ಮಹಾರಥೋತ್ಸವ ನೆರವೇರಿತು.

ರಥೋತ್ಸವದ ವೇಳೆ ನೆರೆದಿದ್ದ ಭಕ್ತಸಮೂಹ ಉಘೇ ಮಾದಪ್ಪ ಉಘೇ ಮಾಯ್ಕಾರ ಎಂಬ ಜಯಘೋಷ ಮೊಳಗಿಸಿ ಹರ್ಷೋದ್ಗಾರ ವ್ಯಕ್ತಪಡಿಸಿದರು. ಬೇಡಗಂಪಣ ಸಮುದಾಯದ ಪುಟ್ಟ ಬಾಲೆಯರು ಮಹಾರಥಕ್ಕೆ ಬೆಲ್ಲದ ಆರತಿ ಬೆಳಗಿದರು. ಯುಗಾದಿ ಹಬ್ಬದ ಹಿನ್ನಲೆ ಬೇವು–ಬೆಲ್ಲ ಮಿಶ್ರಿತ ಪ್ರಸಾದವನ್ನು ಭಕ್ತರಿಗೆ ವಿತರಣೆ ಮಾಡಲಾಯಿತು.

ತಮಿಳುನಾಡು ಸೇರಿದಂತೆ ರಾಜ್ಯದ ವಿವಿಧ ಮೂಲೆಗಳಿಂದ ವಾಹನ ಹಾಗೂ ಪಾದಯಾತ್ರೆ ಮೂಲಕ ಆಗಮಿಸಿದ್ದ ಭಕ್ತರು ಮಾದಪ್ಪನ ದರ್ಶನ ಪಡೆದು ಮಹಾರಥೋತ್ಸವದಲ್ಲಿ ಪಾಲ್ಗೊಂಡು ಪುನೀತರಾದರು.

ಪ್ರಾಧಿಕಾರದ ಕಾರ್ಯದರ್ಶಿ ಶ್ರೀಮತಿ ಕಾತ್ಯಾಯಿನಿ ದೇವಿಯವರು ದೇವರ ದರ್ಶನ, ಕುಡಿಯುವ ನೀರು, ದಾಸೋಹ, ನೆರಳಿನ ವ್ಯವಸ್ಥೆ, ಹೆಚ್ಚುವರಿ ಶೌಚಾಲಯ, ಸ್ನಾನ ಘಟಕಗಳು, ಬಂದಂತಹ ಭಕ್ತಾದಿಗಳಿಗೆ ಮೂಲಭೂತ ಸೌಕರ್ಯಗಳನ್ನು ಪ್ರಾಧಿಕಾರದ ವತಿಯಿಂದ ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡಿದ್ದರು.

ಮಹದೇಶ್ವರ ಬೆಟ್ಟ ಪೊಲೀಸ್ ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ನಂಜುಂಡ ಸ್ವಾಮಿಯವರು ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಮುಂಜಾಗ್ರತ ಕ್ರಮವಾಗಿ ಮಹದೇಶ್ವರ ಬೆಟ್ಟ ಸುತ್ತ ಮುತ್ತಲ ಸ್ಥಳಗಳಲ್ಲಿ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜನೆ ಮಾಡಿ ಅಗತ್ಯ ಬಂದೋಬಸ್ತ್ ವ್ಯವಸ್ಥೆ ಮಾಡಿದ್ದರು.

ರೈತರ ಮನವಿಗೆ ಸ್ಪಂದಿಸಿದ ಕೇಂದ್ರ

ಅರಿಶಿನ ಬೆಳೆಗೆ ಬೆಂಬಲ ಬೆಲೆ ನಿಗದಿ

ಚಾಮರಾಜನಗರ, ಮಾ.23– ತೀವ್ರ ದರ ಕುಸಿತಕಂಡಿರುವ ಅರಿಶಿನ ಬೆಳೆಯನ್ನು ಮಾರುಕಟ್ಟೆ ಮಧ್ಯ ಪ್ರವೇಶ ಯೋಜನೆಯಡಿ ಸೇರಿಸಿ ಬೆಂಬಲ ಬೆಲೆ ಘೋಷಿಸಬೇಕೆಂಬ ರಾಜ್ಯ ಸರ್ಕಾರದ ಪ್ರಸ್ತಾವನೆಗೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದ್ದು, ಪ್ರತೀ ಕ್ವಿಂಟಾಲ್ ಅರಿಶಿನ ಖರೀದಿಗೆ 6,694 ರೂ. ನಿಗದಿ ಮಾಡಿದೆ.

ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಡಿ ಅರಿಶಿನ ಬೆಳೆಯನ್ನು ಖರೀದಿಸಬೇಕೆಂದು ಅರಿಶಿನ ಬೆಳೆಗಾರರ ನಿಯೋಗ ವಸತಿ, ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಅವರಿಗೆ ಮನವಿ ಸಲ್ಲಿಸಿ ಅರಿಶಿನ ಬೆಳೆಗಾರರನ್ನು ಸಂಕಷ್ಟದಿಂದ ಪಾರು ಮಾಡಬೇಕೆಂದು ಕೋರಿದ್ದರು.

ಸೋಮಣ್ಣ ಈ ಮನವಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ರಾಜ್ಯ ಸರ್ಕಾರ ಈ ಪ್ರಸ್ತಾವವನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿ ಮನವಿ ಮಾಡಿತ್ತು. ರಾಜ್ಯ ಸರ್ಕಾರದ ಮನವಿಗೆ ಸ್ಪಂದಿಸಿರುವ ಕೇಂದ್ರ ಸರ್ಕಾರ 2022–23ನೇ ಹಂಗಾಮಿಗೆ ಪ್ರತಿ ಕ್ವಿಂಟಾಲ್ ಅರಿಶಿನಕ್ಕೆ 6,694 ರೂ. ಮಾರುಕಟ್ಟೆ ಮಧ್ಯ ಪ್ರವೇಶ ಯೋಜನೆಯಡಿ ಖರೀದಿ ದರ ನಿಗದಿ ಮಾಡಿದೆ. ಅರಿಶಿನ ಖರೀದಿಗೆ ಮಾರುಕಟ್ಟೆ ಮಧ್ಯ ಪ್ರವೇಶ ಯೋಜನೆ ಯಡಿ ಸಂಬಂಧ ಕೇಂದ್ರದ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯ ರಾಜ್ಯ ಸರ್ಕಾರಕ್ಕೆ ಮಾ.22ರಂದು ಪತ್ರ ಬರೆದು ರಾಜ್ಯ ಸರ್ಕಾರದ ಪ್ರಸ್ತಾವನೆಗೆ ಅನುಮೋದನೆ ನೀಡಿದೆ.

ಅರಿಶಿನ ಬೆಳೆಗೆ ಪ್ರಚಲಿತ ಮಾರುಕಟ್ಟೆ ದರ ಪ್ರತೀ ಕ್ವಿಂಟಾಲ್ ಗೆ 5,200 ರೂ. ಇದೆ. ಮಾರುಕಟ್ಟೆ ಮಧ್ಯ ಪ್ರವೇಶ ಯೋಜನೆಯಡಿ ಪ್ರತೀ ಕ್ವಿಂಟಾಲ್ ಗೆ 6,694 ರೂ. ನಿಗದಿ ಮಾಡಿರುವುದರಿಂದ ರೈತರಿಗೆ 1,400 ರೂ ಗಳಿಂದ 1,500 ರೂ ವರೆಗೆ ಲಾಭವಾಗಲಿದೆ. ಅರಿಶಿನ ಬೆಳೆಗಾರರು, ರೈತರ ಮನವಿಗೆ ಸರ್ಕಾರ ಸ್ಪಂದಿಸಿದ ಹಿನ್ನೆಲೆಯಲ್ಲಿ ರೈತ ಮುಖಂಡರಾದ ಹೊನ್ನೂರು ಪ್ರಕಾಶ್ ಸೇರಿದಂತೆ ಜಿಲ್ಲೆಯ ರೈತ ಮುಖಂಡರು ಜಿಲ್ಲಾ ಉಸ್ತುವಾರಿ ಸಚಿವರಾದ ವಿ. ಸೋಮಣ್ಣ ಅವರಿಗೆ ಅಭಿನಂದನೆ ಸಲ್ಲಿಸಿದ್ದಾರೆ.

ಸೋಮಣ್ಣಗೆ ಜಿಲ್ಲಾ ಬಿಜೆಪಿ ಕಾರ್ಯಕರ್ತರ ಬೆಂಬಲ

ಚಾಮರಾಜನಗರ, ಮಾ.23– ಜಿಲ್ಲಾ ಉಸ್ತುವಾರಿ ಸಚಿವ ವಿ. ಸೋಮಣ್ಣ ಪರವಾಗಿ ಜಿಲ್ಲಾ ಬಿಜೆಪಿ ಕಾರ್ಯಕರ್ತರು ಇದ್ದಾರೆ. ಅವರಿಗೆ ಕಾರ್ಯಕರ್ತರ ಬೆಂಬಲವಿದೆ. ಹೀಗಾಗಿ, ಸೋಮಣ್ಣ ವಿರುದ್ಧವಾಗಿ ಬಿಜೆಪಿ ಜಿಲ್ಲಾ ವಕ್ತಾರ ಅಯ್ಯನಪುರ ಶಿವಕುಮಾರ್ ಮಾಡಿರುವ ಆರೋಪ ಸತ್ಯಕ್ಕೆ ದೂರವಾಗಿದೆ ಎಂದು ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಎ.ಆರ್. ಬಾಲರಾಜು ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜಿಲ್ಲೆಯಲ್ಲಿ ವಿ. ಸೋಮಣ್ಣ ಅವರಿಂದ ಪಕ್ಷ ಸಂಘಟನೆಯಾಗಿಲ್ಲ. ಅವರು ಜಿಲ್ಲಾ ಉಸ್ತುವಾರಿ ವಹಿಸಿಕೊಂಡ ನಂತರ ಜಿಲ್ಲಾ ಅಭಿವೃದ್ಧಿ ಕೆಲಸ ಮಾಡಿಲ್ಲ. ಬೇರೆ ಪಕ್ಷದ ನಾಯಕರೊಂದಿಗೆ ಓಡಾಡುತ್ತಿದ್ದಾರೆ ಎಂಬ ಶಿವಕುಮಾರ್ ಅವರ ಆರೋಪ ಹಾಸ್ಯಾಸ್ಪದವಾಗಿದೆ ಎಂದರು. ಅಯ್ಯನಪುರ ಶಿವಕುಮಾರ್ ಜಿಲ್ಲಾಧ್ಯಕ್ಷರಿಗೆ ಹಾಗೂ ಮಹಾಶಕ್ತಿ ಕೇಂದ್ರ ಅಧ್ಯಕ್ಷರಿಗೆ ತಪ್ಪು ಮಾಹಿತಿ ನೀಡಿದರು. ಹೀಗಾಗಿ, ಸುದ್ದಿಗೋಷ್ಠಿಯ ವಿಚಾರದ ಬಗ್ಗೆ ಮೊದಲೇ ಯಾರಿಗೂ ಮಾಹಿತಿ ಇರಲಿಲ್ಲ. ಸುದ್ದಿಗೋಷ್ಠಿ ನಡೆದ ನಂತರ ವಷ್ಟೇ ವಿಚಾರ ತಿಳಿದಿದ್ದು, ಈ ಬಗ್ಗೆ ಅವರೊಂದಿಗೆ ಸುದ್ದಿಗೋಷ್ಠಿಯಲ್ಲಿ ಪಾಲ್ಗೊಂಡಿದ್ದ ಕೆಲವರು ಬೇಸರ ವ್ಯಕ್ತಪಡಿಸಿದ್ದಾರೆ. ಇದೊಂದು ಶಿವಕುಮಾರ್ ಅವರ ವೈಯಕ್ತಿಕ ಹೇಳಿಕೆ ಹೊರತು ಪಕ್ಷದ ಹೇಳಿಕೆಯಲ್ಲ ಎಂದು ಸ್ಪಷ್ಟಪಡಿಸಿದರು.

ಸೋಮಣ್ಣ ಅವರು 45 ವರ್ಷಗಳಿಂದ ರಾಜಕೀಯದಲ್ಲಿ ಇದ್ದಾರೆ. ಶಾಸಕರಾಗಿ, ಸಚಿವರಾಗಿ ಹಲವು ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದರೆ. ಅವರೊಬ್ಬರು ರಾಜ್ಯ ನಾಯಕರು. ಅವರಿಗೆ ಗೋ ಬ್ಯಾಕ್ ಚಳವಳಿ ನಡೆಸುತ್ತೇವೆ ಎಂದು ಹೇಳಿಕೆ ನೀಡಿರುವುದು ಸರಿಯಲ್ಲ. ಈಗಾಗಲೇ ಪಕ್ಷದಿಂದ ಅಯ್ಯನಪುರ ಶಿವಕುಮಾರ್ ಸೇರಿದಂತೆ ಅಂದು ಸುದ್ದಿಗೋಷ್ಠಿಯಲ್ಲಿ ಪಾಲ್ಗೊಂಡಿದ್ದ ಎಲ್ಲರಿಗೂ ನೋಟೀಸ್ ನೀಡಿ, 15ದಿನಗಳಲ್ಲಿ ಉತ್ತರ ನೀಡುವಂತೆ ಸೂಚನೆ ನೀಡಲಾಗಿದೆ. 15 ದಿನಗಳ ನಂತರ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದರು.

ಬಿಜೆಪಿ ಹೈಕಮಾಂಡ್ ಯಾರಿಗೆ ಟಿಕೆಟ್ ನೀಡಿದರು ಅವರ ಪರವಾಗಿ ನಾವು ಕೆಲಸ ಮಾಡುತ್ತೇವೆ. ಸೋಮಣ್ಣ ಅವರು ಇದುವರೆವಿಗೂ ಎಲ್ಲಿಯೂ ನಾನು ಚಾಮರಾಜನಗರ ಕ್ಷೇತ್ರದ ಅಭ್ಯರ್ಥಿ ಎಂದು ಹೇಳಿಕೆ ನೀಡಿಲ್ಲ. ಹಳೆ ಮೈಸೂರು ಭಾಗದಲ್ಲಿ ಪ್ರಭಾವಿತ ರಾಜಕಾರಣಿಯಾಗಿರುವ ಅವರು ಪಕ್ಷದ ಗೆಲುವಿಗೆ ಅವಶ್ಯಕವಾಗಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಗುಂಡ್ಲುಪೇಟೆ ಪುರಸಭಾ ಅಧ್ಯಕ್ಷ ಪಿ. ಗಿರೀಶ್, ಎಪಿಎಂಸಿ ಅಧ್ಯಕ್ಷರಾದ ಎಂ. ಮನೋಜ್‌ಪಟೇಲ್, ರವಿ, ಜಿಪಂ ಮಾಜಿ ಅಧ್ಯಕ್ಷ ನಟರಾಜು, ನಗರಸಭೆ ಸದಸ್ಯರಾದ ಶಿವರಾಜ್, ಚಂದ್ರಶೇಖರ್ ಹಾಜರಿದ್ದರು.

ಕರ್ತವ್ಯ ಲೋಪ: ಜಿಲ್ಲಾಧಿಕಾರಿ ಕಚೇರಿ ದ್ವಿತೀಯ ದರ್ಜೆ ಸಹಾಯಕಿ ಅಮಾನತು

ಚಾಮರಾಜನಗರ, ಮಾ.23– ಜಿಲ್ಲಾಧಿಕಾರಿ ಕಚೇರಿ ಆಡಳಿತ ಶಾಖೆ ವಿಷಯ ನಿರ್ವಾಹಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಜಿ. ಸೌಮ್ಯರನ್ನು ಕರ್ತವ್ಯಲೋಪದ ಮೇಲೆ ಅಮಾನತು ಮಾಡಿ ಜಿಲ್ಲಾಧಿಕಾರಿಗಳು ಆದೇಶ ಮಾಡಿದ್ದಾರೆ.

ಚೆಕ್ ಹಾಳೆ ನಾಪತ್ತೆ ಆಡಳಿತ ಶಾಖೆಯ ಗ್ರಾಮೀಣ ರಸಪ್ರಶ್ನೆ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಜಿಲ್ಲಾಡಳಿತ ಭವನದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಜಿಲ್ಲಾಧಿಕಾರಿ ಹೆಸರಿನ ಖಾತೆ ಸಂಖ್ಯೆ 64040634843ರ 100 ಹಾಳೆಗಳ ಚೆಕ್‌ಪುಸ್ತಕದಲ್ಲಿ 13 ವಿವಿಧ ಸಂಖ್ಯೆಯ ಹಾಳೆಗಳು ನಾಪತ್ತೆಯಾಗಿದ್ದವು. ಎಸ್‌ಬಿಐ ವ್ಯವಸ್ಥಾಪಕರ ವರದಿಯಂತೆ ಡಿ.23 ರಿಂದ ಇಲ್ಲಿಯವರೆಗೆ ವಿವಿಧ ದಿನಾಂಕಗಳಂದು ರಾಜೇಶ್ ಎಸ್‌ಬಿ ಖಾತೆ 33834028355 ಹಾಗೂ ನಂಜುಂಡಯ್ಯ ಎಸ್‌ಬಿ ಖಾತೆ 41357581663 ಖಾತೆಗಳಿಗೆ ಹಣ ಜಮ ಆಗಿದೆ. ಇದಕ್ಕೆ ಜಿಲ್ಲಾಧಿಕಾರಿಗಳ ಅನುಮೋದನೆ ಇರಲಿಲ್ಲ. ಜಿ ಸೌಮ್ಯ ಪ್ರತಿದಿನ ಖಾತೆಯಲ್ಲಿರುವ ನಗದು ಚೆಕ್ ವಿತರಣಾ ವಹಿಯ ವಿತರಣೆಯಾದ ಮೊತ್ತಕ್ಕೆ ತಾಳೆ ನೋಡಿ ನಗದು ವಹಿಯಲ್ಲಿ ದೃಢೀಕರಿಸಿಕೊಳ್ಳಬೇಕಿತ್ತು. ಆದರೆ ನಗದು ವಹಿ ಸಮರ್ಪಕ ನಿರ್ವಹಣೆ ಮಾಡದೆ ಕರ್ತವ್ಯ ಲೋಪ ಎಸಗಿರುವುದರಿಂದ ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಾವಳಿ ಉಲ್ಲಂಘನೆ ಮಾಡಿದ್ದಕ್ಕಾಗಿ ಜಿಲ್ಲಾಧಿಕಾರಿಗಳು ಅಮಾನತು ಮಾಡಿ ಆದೇಶಿಸಿದ್ದಾರೆ.

ಇಂದು ಗುಂಡ್ಲುಪೇಟೆಯಲ್ಲಿ ಜಿಲ್ಲಾ ಬಿಜೆಪಿ ಯುವ ಸಂಕಲ್ಪ ಸಮಾವೇಶ

ಬೈಕ್ ರ್‍ಯಾಲಿ ಮೂಲಕ ಗಣ್ಯರಿಗೆ ಸ್ವಾಗತ, 10 ಸಾವಿರಕ್ಕೂ ಅಧಿಕ ಕಾರ್ಯಕರ್ತರ ನಿರೀಕ್ಷೆ



ಗುಂಡ್ಲುಪೇಟೆ ಪಟ್ಟಣದ ಡಿ.ದೇವರಾಜ ಅರಸು ಕ್ರೀಡಾಂಗಣದಲ್ಲಿ ಯುವ ಸಂಕಲ್ಪ ಸಮಾವೇಶದ ಸಿದ್ಧತೆಯನ್ನು ನಿರಂಜನಕುಮಾರ್ ಕಾರ್ಯಕರ್ತರೊಂದಿಗೆ ಪರಿಶೀಲಿಸಿದರು. ಬಿ.ಎಸ್.ಮಹೇಶ್, ನಾಗಪ್ಪ, ಮಲ್ಲೇಶ್, ನಟರಾಜು ಇದ್ದರು.

ಗುಂಡ್ಲುಪೇಟೆ, ಮಾ.23– ಪಟ್ಟಣದ ದೇವರಾಜ ಅರಸು ಕ್ರೀಡಾಂಗಣದಲ್ಲಿ ಶುಕ್ರವಾರ (ಮಾ.24) ಬಿಜೆಪಿ ಜಿಲ್ಲಾ ಯುವ ಮೋರ್ಚಾದಿಂದ ಜಿಲ್ಲಾ ಮಟ್ಟದ ಯುವ ಸಂಕಲ್ಪ ಸಮಾವೇಶವನ್ನು ಏರ್ಪಡಿಸಲಾಗಿದ್ದು, ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ಸಮಾವೇಶ ಯಶಸ್ವಿಗೊಳಿಸುವಂತೆ ಶಾಸಕ ಸಿ.ಎಸ್.ನಿರಂಜನ್ ಕುಮಾರ್ ಮನವಿ ಮಾಡಿದ್ದಾರೆ.

ಪಟ್ಟಣದ ಡಿ.ದೇವರಾಜ ಅರಸು ಕ್ರೀಡಾಂಗಣದಲ್ಲಿ ವೇದಿಕೆ ಮತ್ತು ಸಿದ್ಧತೆಗಳನ್ನು ವೀಕ್ಷಿಸಿದ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾ.24ರ ಶುಕ್ರವಾರ ಬೆಳಗ್ಗೆ 10.30ಕ್ಕೆ ಗುಂಡ್ಲುಪೇಟೆಯ ದೇವರಾಜ ಅರಸು ಕ್ರೀಡಾಂಗಣದಲ್ಲಿ ಯುವ ಸಂಕಲ್ಪ ಸಮಾವೇಶ ನಡೆಯಲಿದೆ. ಇದರಲ್ಲಿ ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ, ಯುವ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷ ತೇಜಸ್ವಿ ಸೂರ್ಯ, ಸುರಪುರ ಶಾಸಕ ರಾಜು ನರಸಿಂಹನಾಯಕ, ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ನಾರಾಯಣ ಪ್ರಸಾದ್ ಸೇರಿದಂತೆ ಹಲವು ಮುಖಂಡರು ಭಾಗವಹಿಸಲಿದ್ದಾರೆ ಎಂದರು.

ಸಮಾವೇಶಕ್ಕೂ ಮೊದಲು ಬೆಳಗ್ಗೆ 10 ಗಂಟೆಗೆ ಬೇಗೂರಿನಲ್ಲಿ ಬೈಕ್ ರ್‍ಯಾಲಿಗೆ ವಿಜಯೇಂದ್ರ ಚಾಲನೆ ನೀಡುವರು. ಎಲ್ಲಾ ಗಣ್ಯರನ್ನು ಬೈಕ್ ರ್‍ಯಾಲಿ ಜತೆಗೆ ಪಟ್ಟಣಕ್ಕೆ ಕರೆ ತರಲಾಗುವುದು. ಸಹಸ್ರಾರು ಬೈಕ್‌ಗಳಲ್ಲಿ ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದ ಕಾರ್ಯಕರ್ತರು ಇದರಲ್ಲಿ ಭಾಗವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಸುಮಾರು 10 ಸಾವಿರ ಜನರು ಭಾಗವಹಿಸುವ ನಿರೀಕ್ಷೆ ಇದೆ. ಇದರಲ್ಲಿ ಪಕ್ಷದ ಕಾರ್ಯಕರ್ತರು, ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು.

ವಿ.ಸೋಮಣ್ಣ ಅವರಿಗೆ ಸ್ವಾಗತ: ಚಾಮರಾಜನಗರ ಜಿಲ್ಲೆಯ ಚುನಾವಣಾ ಉಸ್ತುವಾರಿಯಾಗಿ ವಿ.ಸೋಮಣ್ಣ ನೇಮಕಕ್ಕೆ ಶಾಸಕ ನಿರಂಜನ್ ಕುಮಾರ್ ಸ್ವಾಗತ ಮಾಡಿದರು.

ವಿ.ಸೋಮಣ್ಣ ಪಕ್ಷದ ಹಿರಿಯ ನಾಯಕರು ಅವರು ಯಾವುದೇ ಕಾರಣಕ್ಕೂ ಬಿಜೆಪಿ ಪಕ್ಷ ತೊರೆಯುವುದಿಲ್ಲ. ಜಿಲ್ಲೆಯಲ್ಲಿ ಭಾರತೀಯ ಜನತಾ ಪಕ್ಷವನ್ನು ನಾವೆಲ್ಲರೂ ಸೇರಿ ಸಂಘಟಿಸಿ ನಾಲ್ಕು ಕ್ಷೇತ್ರಗಳಲ್ಲಿ ಬಿಜೆಪಿಯ ಗೆಲುವಿಗೆ ಶ್ರಮಿಸುತ್ತೇವೆ ಎಂದರು.

ಈ ಸಂದರ್ಭದಲ್ಲಿ ಮಂಡಲಾಧ್ಯಕ್ಷ ದೊಡ್ಡಹುಂಡಿ ಜಗದೀಶ್, ಜಿಲ್ಲಾ ಉಪಾಧ್ಯಕ್ಷ ಹಿರಿಕಾಟಿ ಸೋಮಶೇಖರ್, ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಹಂಗಳ ಪ್ರಣಯ್, ಪ್ರಧಾನ ಕಾರ್ಯದರ್ಶಿ ಸೂರ್ಯ ಕುಮಾರ್, ಸುನೀಲ್ ಮೂಡ್ಲು, ಕೆರಹಳ್ಳಿ ಮಹದೇವಸ್ವಾಮಿ, ಮಾಧ್ಯಮ ಸಂಚಾಲಕ ಶಿಂಡನಪುರ ಮಂಜುನಾಥ್ ಸೇರಿದಂತೆ ಇನ್ನಿತರರು ಇದ್ದರು.

ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಮಾ.23– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮವು ಗುಂಡ್ಲುಪೇಟೆ ಉಪವಿಭಾಗ ವ್ಯಾಪ್ತಿಯಲ್ಲಿ 4ನೇ ತ್ರೈಮಾಸಿಕ ನಿರ್ವಹಣೆ ಕಾಮಗಾರಿಯನ್ನು ಮಾ.25ರಂದು ಹಮ್ಮಿಕೊಂಡಿರುವುದರಿಂದ ಅಂದು ಬೆಳಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ತೆರಕಣಾಂಬಿ ವ್ಯಾಪ್ತಿಯ ಬೊಮ್ಮನಹಳ್ಳಿ, ಕುಂದಗೆರೆ, ಕಟ್ನವಾಡಿ, ದೇಪಾಪುರ, ಎನ್.ಜೆ.ವೈ, ಗೋವಿಂದಪುರ, ಕಗ್ಗಳ, ಕೆಲಸಿಪುರ, ಲಕ್ಕೂರು, ಫ್ಯಾಕ್ಟರಿ, ವಾಟರ್ ಸಪ್ಲೈ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಮಾ.27ರಿಂದ 5, 8ನೇ ತರಗತಿ ವಿದ್ಯಾರ್ಥಿಗಳಿಗೆ ಮೌಲ್ಯಾಂಕನ

ಚಾಮರಾಜನಗರ, ಮಾ.23– 2022–23ನೇ ಸಾಲಿನಲ್ಲಿ ರಾಜ್ಯ ಪಠ್ಯ ಕ್ರಮಕ್ಕೆ ಒಳಪಡುವ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 5 ಮತ್ತು 8ನೇ ತರಗತಿಯ ವಿದ್ಯಾರ್ಥಿಗಳಿಗೆ ಮೌಲ್ಯಾಂಕನವನ್ನು ಮಾ.27ರಿಂದ ಏಪ್ರಿಲ್ 1ರವರೆಗೆ ನಡೆಸಲಾಗುತ್ತದೆ.

ಈ ಮೌಲ್ಯಾಂಕನವು ವಾರ್ಷಿಕ ಪರೀಕ್ಷೆಯಾಗಿರುವುದಿಲ್ಲ ಹಾಗೂ ಯಾವುದೇ ವಿದ್ಯಾರ್ಥಿಗಳನ್ನು ಅನುತ್ತೀರ್ಣಗೊಳಿಸುವುದಿಲ್ಲ. ಮೌಲ್ಯಾಂಕನದ ಮೂಲಕ ವಿದ್ಯಾರ್ಥಿಗಳ ಕಲಿಕಾ ಗುಣಮಟ್ಟ, ಕಲಿಕಾ ನ್ಯೂನತೆ ಹಾಗೂ ಕಲಿಕಾ ಪ್ರಗತಿಗಳನ್ನು ತಿಳಿದು ಮುಂದಿನ ಶೈಕ್ಷಣಿಕ ವರ್ಷದ ಕಲಿಕಾ ಕೊರತೆಯನ್ನು ನೀಗಿಸುವ ಕಾರ್ಯತಂತ್ರಗಳನ್ನು ರೂಪಿಸುವ ಉದ್ದೇಶ ಹೊಂದಿದೆ. ಮೌಲ್ಯಾಂಕನ ಫಲಿತಾಂಶವನ್ನು ಸಾರ್ವಜನಿಕವಾಗಿ ಪ್ರಕಟಿಸದೆ ಕೇವಲ ವಿದ್ಯಾರ್ಥಿಗಳು ಹಾಗೂ ಪೋಷಕರೊಡನೆ ಸಮಾಲೋಚಿಸ ಲಾಗುವುದು. ಮೌಲ್ಯಾಂಕನದ ಪ್ರಶ್ನೆಗಳು ನಿಗದಿಪಡಿಸಿದ ಪಠ್ಯ ಪುಸ್ತಕವನ್ನು ಆಧರಿಸಿ ಸಿದ್ಧಪಡಿಸಲಾಗಿರುತ್ತದೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಮಿತ್ರ
ಶುಕ್ರವಾರ 24 ಮಾರ್ಚ್ 2023

ಮೂರನೇ ಪುಟದಿಂದ

ಪ್ರೊ.ಎನ್.ಕೆ.ಲೋಕನಾಥ್

ಪ್ರೊ.ಹೇಮಂತ್ ಕುಮಾರ್ ಅವರ ಕುಲಪತಿ ಅವಧಿ ಅಂತ್ಯಗೊಂಡ ಹಿನ್ನೆಲೆಯಲ್ಲಿ ವಾಣಿಜ್ಯ ನಿಕಾಯದ ಡೀನ್ ಪ್ರೊ. ಹೆಚ್.ರಾಜಶೇಖರ್ ಅವರನ್ನು 2023ರ ಫೆ.19ರವರೆಗೆ ಮೈಸೂರು ವಿಶ್ವವಿದ್ಯಾನಿಲಯದ ಹಂಗಾಮಿ ಕುಲಪತಿಯನ್ನಾಗಿ 2022ರ ನ.14 ರಂದು ನೇಮಕ ಮಾಡಲಾಗಿತ್ತು. ನಂತರ ಕಲಾ ನಿಕಾಯದ ಡೀನ್ ಪ್ರೊ. ಮುಜಾಫರ್ ಹೆಚ್. ಅಸಾದಿ ಅವರನ್ನು ಹಂಗಾಮಿ ಕುಲಪತಿಯನ್ನಾಗಿ 2023ರ ಫೆ.15 ರಿಂದ ಜಾರಿಗೆ ಬರುವಂತೆ ರಾಜ್ಯಪಾಲರು ನೇಮಿಸಿ, ಆದೇಶ ಹೊರಡಿಸಿದ್ದರು. ಕುಲಪತಿಗಳ ಆಯ್ಕೆ ಸಂಬಂಧ ರಚಿಸಲಾಗಿದ್ದ ಶೋಧ ಸಮಿತಿಯು ಸರ್ಕಾರಕ್ಕೆ ಪ್ರೊ. ಲೋಕನಾಥ್ ಸೇರಿದಂತೆ ಪ್ರೊ. ಶರತ್ ಅನಂತಮೂರ್ತಿ, ಡಾ. ಡಿ.ಎಸ್.ಗುರು ಅವರ ಹೆಸರುಗಳನ್ನು ಶಿಫಾರಸು ಮಾಡಿತ್ತು. ಉನ್ನತ ಶಿಕ್ಷಣ ಇಲಾಖೆಯು ಸಮಿತಿ ಸಲ್ಲಿಸಿದ್ದ ವರದಿಯನ್ನು ರಾಜ್ಯಪಾಲರಿಗೆ ಸಲ್ಲಿಸಿತ್ತು. ಅಂತಿಮವಾಗಿ ರಾಜ್ಯಪಾಲರು ಪರಿಶೀಲಿಸಿ, ಪ್ರೊ. ಎನ್.ಕೆ.ಲೋಕನಾಥ್ ಅವರನ್ನು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಯಾಗಿ ನೇಮಿಸಿ, ಆದೇಶಿಸಿದ್ದಾರೆ.

ಕುಳಿತ ಕುರ್ಚಿಯಲ್ಲಿ ಕೂರುವ ಭಾಗ್ಯ ನನ್ನದು!

ನೂತನ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ತಿಳಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ಇಂದು ಅಧಿಕಾರ ವಹಿಸಿಕೊಂಡ ಪ್ರೊ.ಎನ್.ಕೆ.ಲೋಕನಾಥ್ ಅವರು ವಿವಿಯ ಗುಣಮಟ್ಟ ಉಳಿಸಿಕೊಂಡು ಉನ್ನತ ದರ್ಜೆಗೆ ಕೊಂಡೊಯ್ಯುವ ಯೋಜನೆಗಳ ಕುರಿತು 'ಮೈಸೂರು ಮಿತ್ರ'ನೊಂದಿಗೆ ಅಭಿಪ್ರಾಯ ಹಂಚಿಕೊಂಡರು. ನನ್ನನ್ನು ನಂಬಿ ಇಂತಹ ದೊಡ್ಡ ಜವಾಬ್ದಾರಿಯನ್ನು ನೀಡಿರುವ ರಾಜ್ಯಪಾಲರು, ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರಿಗೆ ಧನ್ಯವಾದ ತಿಳಿಸುತ್ತೇನೆ. ಅವರ ನಂಬಿಕೆಯನ್ನು ಉಳಿಸಿಕೊಂಡು ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತೇನೆ. ಬೇರೆ ವಿವಿಗಳಲ್ಲಿ ಭೌತಶಾಸ್ತ್ರ ವಿಭಾಗದವರು ಕುಲಪತಿಗಳಾಗಿದ್ದರೂ ಇದೇ ಮೊದಲ ಬಾರಿಗೆ ಮೈಸೂರು ವಿವಿಯಲ್ಲಿ ಭೌತಶಾಸ್ತ್ರ ವಿಭಾಗದ ನಾನು ಕುಲಪತಿಯಾಗಿರುವುದು ಸಂತಸ ಉಂಟುಮಾಡಿದೆ ಎಂದರು.

ಕಳೆದ ನಾಲ್ಕು ವರ್ಷಗಳಿಂದ ಮೈಸೂರು ವಿವಿಯ ಯೋಜನಾ ಮಾನಿಟರಿಂಗ್ ಮೌಲ್ಯಮಾಪನ ಮಂಡಳಿಯ ನಿರ್ದೇಶಕನಾಗಿ ಕಾರ್ಯನಿರ್ವಹಿಸಿರುವುದರಿಂದ ವಿವಿಯ ಎಲ್ಲಾ ಆಗು ಹೋಗುಗಳ ಬಗ್ಗೆ ತಿಳಿದಿದ್ದು, ಸಮಸ್ಯೆಗಳು ಎಷ್ಟಿವೆ ಎಂಬುದು ಗೊತ್ತಿದೆ. ಉತ್ತಮ ಹಾಗೂ ಗುಣಮಟ್ಟದ ಶಿಕ್ಷಣ ನೀಡುವುದು ನನ್ನ ಮೊದಲ ಗುರಿಯಾಗಿದೆ. ವಿದೇಶಗಳಲ್ಲಿಯೂ ಕೆಲಸ ಮಾಡಿರುವುದರಿಂದ ಶಿಕ್ಷಣದ ಬಗ್ಗೆ ಹೆಚ್ಚಿನ ಅನುಭವವಿದೆ. ಅದನ್ನು ಬಳಸಿಕೊಂಡು ಯುಜಿಸಿಯ ಹೊಸ ಯೋಜನೆಯಾದ ಟ್ವಿನಿಂಗ್ ಕಾರ್ಯಕ್ರಮದಡಿ ಕಾರ್ಯಕ್ರಮಗಳನ್ನು ನೀಡುವುದರ ಜೊತೆಗೆ ವಿವಿಧ ದೇಶಗಳೊಟ್ಟಿಗೆ ಒಡಂಬಡಿಕೆ ಮಾಡಿಕೊಂಡು ಹೊಸ ಯೋಜನೆಗಳನ್ನು ತರುವ ಮೂಲಕ ವಿವಿಯನ್ನು ಮೇಲ್ಪಟ್ಟಕ್ಕೆ ಕೊಂಡೊಯ್ಯುವ ಆಲೋಚನೆ ಇದೆ. ಈಗ ಮೈಸೂರು ವಿವಿ ಮೈಸೂರು ಜಿಲ್ಲೆಗೆ ಮಾತ್ರ ಸೀಮಿತವಾಗಿದ್ದು, ಇದರ ಗುಣಮಟ್ಟ ರಕ್ಷಿಸಿಕೊಂಡು, ಬೇರೆಡೆಯಿಂದಲೂ ವಿದ್ಯಾರ್ಥಿಗಳು ಇಲ್ಲಿಗೆ ಬರುವಂತೆ ಮಾಡುವುದಲ್ಲದೆ, ವಿವಿಯ ಯಶಸ್ಸನ್ನು ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟಕ್ಕೆ ತೆಗೆದುಕೊಂಡು ಹೋಗಬೇಕಿದೆ. ಕಳೆದ ನಾಲ್ಕು ವರ್ಷಗಳಿಂದ ಇಲ್ಲಿನ ರ‍್ಯಾಂಕ್ ಅನ್ನು ನಾನು ನೋಡಿಕೊಂಡು ಬಂದಿದ್ದು, ಅದನ್ನು ಹೆಚ್ಚಿಸುವುದರತ್ತ ಗಮನಹರಿಸಬೇಕಿದೆ ಎಂದರು.

ಪ್ರಮುಖ ಆರೋಪಿ ಜಾಮೀನು ಅರ್ಜಿ ವಜಾ

ನಗರಪಾಲಿಕೆಗೆ ದೂರು ಸಲ್ಲಿಸಿದ್ದರು. ಅಲ್ಲದೇ ಅದೇ ವಿಚಾರವಾಗಿ ಅವರು ನ್ಯಾಯಾಲಯದ ಮೊರೆ ಹೋಗಿದ್ದರು. ಈ ಹಿನ್ನೆಲೆಯಲ್ಲಿ ಅಕ್ರಮ ನಿರ್ಮಾಣ ತೆರವುಗೊಳಿಸುವಂತೆ ಮಾದಪ್ಪ ಅವರಿಗೆ ಪಾಲಿಕೆಯಿಂದ ನೋಟಿಸ್ ಜಾರಿ ಮಾಡಲಾಗಿತ್ತು.

ಇದರಿಂದಾಗಿ ಕುಲಕರ್ಣಿಯವರನ್ನು ಹತ್ಯೆ ಮಾಡಲು ನಿರ್ಧರಿಸಿ, ಮಾದಪ್ಪ ಪುತ್ರ ಮನುಗೌಡ ತನ್ನ ಸ್ನೇಹಿತ ವರುಣ್ ಕಾರನ್ನು ಪಡೆದು ಕುಲಕರ್ಣಿಯವರು 2022ರ ನ.5ರಂದು ಸಂಜೆ ಮಾನಸ ಗಂಗೋತ್ರಿ ಆವರಣದಲ್ಲಿ ವಾಯು ವಿಹಾರದಲ್ಲಿದ್ದಾಗ ಕಾರು ಹರಿಸಿ ಅವರನ್ನು ಹತ್ಯೆ ಮಾಡಿದ್ದ. ಮೊದಲಿಗೆ ಇದು ಹಿಟ್ ಅಂಡ್ ರನ್ ಕೇಸ್ ಎಂದು ಭಾವಿಸಿ ವಿವಿ ಪುರಂ ಸಂಚಾರ ಠಾಣೆ ಪೊಲೀಸರು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ್ದಾರೆ. ಆದರೆ ಸ್ಥಳದಲ್ಲಿ ಲಭ್ಯವಾದ ಸಿಸಿ ಕ್ಯಾಮರಾ ದೃಶ್ಯಾವಳಿಗಳನ್ನು ಪರಿಶೀಲನೆ ಮಾಡಿದಾಗ ಉದ್ದೇಶಪೂರ್ವಕವಾಗಿಯೇ ಕುಲಕರ್ಣಿ ಅವರ ಮೇಲೆ ಕಾರು ಹರಿಸಿರುವುದು ಗೋಚರವಾಯಿತು. ಈ ಹಿನ್ನೆಲೆಯಲ್ಲಿ ಕೊಲೆ ಪ್ರಕರಣ ದಾಖಲಿಸಿಕೊಂಡ ಜಯಲಕ್ಷ್ಮೀಪುರಂ ಠಾಣೆ ಪೊಲೀಸರು ತನಿಖೆ ಆರಂಭಿಸಿದ್ದು, ಆ ಠಾಣೆಯ ಪ್ರಭಾರ ಇನ್ಸ್‌ಪೆಕ್ಟರ್ ಆಗಿದ್ದ ಮೋಹನ್ ಕುಮಾರ್ ನೇತೃತ್ವದ ತಂಡ ಹತ್ಯೆ ನಡೆದ ಎರಡನೇ ದಿನಕ್ಕೆ ಮನುಗೌಡನನ್ನು ಬಂಧಿಸಿದ್ದು, ಅದರ ಮರು ದಿನ ಆತನ ಸ್ನೇಹಿತ ವರುಣ್‌ನನ್ನು ಬಂಧಿಸಿತ್ತು. ಪೊಲೀಸರ ವಿಚಾರಣೆ ವೇಳೆ ಕಟ್ಟಡದ ಮಾಲೀಕ ಮಾದಪ್ಪ ಅವರಿಗೆ ತಮ್ಮ ಪುತ್ರ ಕುಲಕರ್ಣಿ ಅವರನ್ನು ಹತ್ಯೆ ಮಾಡುವ ವಿಚಾರ ಗೊತ್ತಿರಲಿಲ್ಲ ಎಂಬುದು ಮನವರಿಕೆಯಾದ ಹಿನ್ನೆಲೆಯಲ್ಲಿ ಪೊಲೀಸರು ಮನುಗೌಡ ಮತ್ತು ವರುಣ್‌ನನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ ಇಬ್ಬರನ್ನೂ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿತ್ತು. ತನಿಖೆ ಪೂರ್ಣಗೊಳಿಸಿದ ತನಿಖಾಧಿಕಾರಿಗಳು ಜ.27ರಂದು ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದಾರೆ.

> ನಿವೃತ್ತ ಐಬಿ ಅಧಿಕಾರಿ ಹತ್ಯೆಗೆ ಕಾರಣವಾದ ನೆರೆ ಮನೆಯ ಅಕ್ರಮ ನಿರ್ಮಾಣ ತೆರವುಗೊಳಿಸಿಲ್ಲ. ಅಕ್ರಮ ನಿರ್ಮಾಣವಾಗಿದೆ ಎಂಬ ನಿರ್ಧಾರಕ್ಕೆ ಬಂದಿದ್ದ ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳು ಅದನ್ನು ತೆರವುಗೊಳಿಸುವಂತೆ ಮನೆ ಮಾಲೀಕ ಮಾದಪ್ಪ ಅವರಿಗೆ ನೋಟಿಸ್ ಜಾರಿ ಮಾಡಿದ್ದರು. ನೋಟಿಸ್‌ನಲ್ಲಿ ನೀಡಿದ್ದ ಅವಧಿಯೊಳಗೆ ಅವರು ಅಕ್ರಮ ನಿರ್ಮಾಣ ತೆರವುಗೊಳಿಸದ ಕಾರಣ ಪಾಲಿಕೆ ಅಧಿಕಾರಿಗಳೇ ಅಕ್ರಮ ನಿರ್ಮಾಣವನ್ನು ತೆರವುಗೊಳಿಸಲು ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ತೆರಳಿದ್ದರು. ಆದರೆ ಅಷ್ಟರಲ್ಲಾಗಲೇ ಮಾದಪ್ಪ ಅವರು ತಡೆಯಾಜ್ಞೆ ತಂದಿದ್ದರು. ಈ ತಡೆಯಾಜ್ಞೆಯನ್ನು ತೆರವುಗೊಳಿಸಲು ನಗರ ಪಾಲಿಕೆ ಅಧಿಕಾರಿಗಳು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಈ ಸಂಬಂಧ ಪಾಲಿಕೆ ಪರ ವಕೀಲರು ಹಾಗೂ ಮಾದಪ್ಪ ಪರ ವಕೀಲರ ವಾದ-ಪ್ರತಿವಾದ ಮುಗಿದು ಮುಂದಿನ ವಿಚಾರಣೆ ವೇಳೆ ಆದೇಶ ಹೊರಬೀಳುವ ಹಂತದಲ್ಲಿ ಆರ್.ಎನ್. ಕುಲಕರ್ಣಿ ಅವರ ಪರವಾಗಿ ನಂದಕಿಶೋರ್ ಎಂಬ ವಕೀಲರು ಅರ್ಜಿ ಸಲ್ಲಿಸಿದ್ದು, ಅದಕ್ಕೆ ಮಾದಪ್ಪ ಪರ ವಕೀಲರು ಆಕ್ಷೇಪಣೆ ವ್ಯಕ್ತಪಡಿಸಿದ್ದಾರೆ. ನಂದಕಿಶೋರ್ ಅವರನ್ನು ಈ ಪ್ರಕರಣದಲ್ಲಿ ವಾದ ಮಂಡಿಸಲು ಅನುಮತಿಸಬೇಕೇ ಬೇಡವೇ ಎಂಬುದರ ಬಗ್ಗೆ ನ್ಯಾಯಾಲಯ ನಿರ್ಧಾರ ಮಾಡಿದ ನಂತರವೇ ಅಕ್ರಮ ನಿರ್ಮಾಣ ತೆರವಿಗೆ ನೀಡಿರುವ ತಡೆಯಾಜ್ಞೆ ಸಂಬಂಧ ನ್ಯಾಯಾಲಯ ತೀರ್ಮಾನಕ್ಕೆ ಬರುವ ಸಾಧ್ಯತೆ ಇದೆ ಎಂದು ನಗರ ಪಾಲಿಕೆ ಮೂಲಗಳು ತಿಳಿಸಿವೆ.

ಮೊದಲ ಪಟ್ಟಿಗೆ ಬಿಡುಗಡೆ ಭಾಗ್ಯವಿಲ್ಲ

ಕ್ಷೇತ್ರದಲ್ಲಿ ನಿಮಗೆ ಗೆಲುವು ಸಿಗುವುದು ಬಹುತೇಕ ನಿಶ್ಚಿತವಾದರೂ, ಸಂಭವನೀಯ ಅಪಾಯಗಳೂ ಇವೆ ಎಂದು ಸಿದ್ದರಾಮಯ್ಯ ಅವರಿಗೆ ವಿವರಿಸಿದ್ದ ರಾಹುಲ್ ಗಾಂಧಿ, ನೀವು ಶೂನ್ಯ ಅಪಾಯದ ಕ್ಷೇತ್ರವನ್ನು ಆರಿಸಿಕೊಳ್ಳಿ ಎಂದು ಹೇಳಿದ್ದರು. ಈ ಹಿನ್ನೆಲೆಯಲ್ಲಿ ಸಿದ್ಧರಾಮಯ್ಯ ಅವರು ಕೋಲಾರ ವಿಧಾನಸಭಾ ಕ್ಷೇತ್ರದ ಮೇಲಿನ ಒಲವು ಕಡಿಮೆ ಮಾಡಿಕೊಂಡಿದ್ದರಾದರೂ, ಕೋಲಾರ ಕಾಂಗ್ರೆಸ್ಸಿನ ಕಾರ್ಯಕರ್ತರ ಪಡೆ ಭಾರೀ ಅಸಮಾಧಾನ ವ್ಯಕ್ತಪಡಿಸಿದೆ. ಕಾಂಗ್ರೆಸ್ ಮೂಲಗಳ ಪ್ರಕಾರ,ಸಿದ್ಧರಾಮಯ್ಯನವರಿಗೆ ಇದೀಗ ಚಿಕ್ಕಮಗಳೂರು ಜಿಲ್ಲೆಯ ಕಡೂರು ವಿಧಾನಸಭಾ ಕ್ಷೇತ್ರ ಅಪ್ಯಾಯಮಾನವಾಗಿ ಕಾಣುತ್ತಿದೆ. ಕುರುಬರು, ಪರಿಶಿಷ್ಟರು, ಮುಸ್ಲಿಮರ ಮತಗಳು ಸಾಲಿಡ್ ಆಗಿರುವುದರಿಂದ ಕಡೂರು ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿದರೆ ನಿರಾಯಾಸವಾಗಿ ಗೆಲ್ಲಬಹುದು ಎಂಬುದು ಅವರ ಯೋಚನೆ ಎಂಬುದು ಈ ಮೂಲಗಳ ವಿವರಣೆ.

ಮಹತ್ವದ ತೀರ್ಮಾನ

ನ್ಯಾಯಮೂರ್ತಿ ಪ್ರಸನ್ನ ಬಾಲಚಂದ್ರ ವರಾಳೆ ಮತ್ತು ನ್ಯಾಯಮೂರ್ತಿ ಅಶೋಕ್ ಎಸ್.ಕಿಣಗಿ ಒಳಗೊಂಡ ವಿಭಾಗೀಯ ಪೀಠ ಈ ಆದೇಶ ನೀಡಿದೆ. ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು, ರಾಜ್ಯ ಸರ್ಕಾರವು 2ಎ ಪ್ರವರ್ಗಕ್ಕೆ ಯಾವುದೇ ತೊಂದರೆ ಆಗದಂತೆ ನಡೆದುಕೊಳ್ಳಲಿದೆ. ಹೀಗಾಗಿ ಪ್ರಕರಣದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ನೀಡಿರುವ ಆದೇಶ ತೆರವು ಮಾಡಬೇಕು ಎಂದು ಕೋರಿದರು.

ಅಲ್ಲದೇ, ಈ ಕುರಿತು ದಿನದ ಅಂತ್ಯದೊಳಗೆ ಲಿಖಿತ ಹೇಳಿಕೆಯನ್ನು ಸಲ್ಲಿಸಲಾಗುವುದು ಎಂದು ಸರ್ಕಾರಿ ವಕೀಲರು ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯ ಪೀಠ, ಪ್ರಕರಣದಲ್ಲಿ ಸರ್ಕಾರ ಮುಂದೆ ಕೈಗೊಳ್ಳುವ ಎಲ್ಲ ಕ್ರಮಗಳು ಈ ಅರ್ಜಿ ಕುರಿತಂತೆ ನ್ಯಾಯಾಲಯ ಹೊರಡಿಸುವ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ ಎಂದು ಸ್ಪಷ್ಟಪಡಿಸಿತು. ಹೈಕೋರ್ಟ್‌ನ ಈ ಆದೇಶದಿಂದ ಪಂಚಮಸಾಲಿ ಸೇರಿದಂತೆ ಲಿಂಗಾಯತ ಪ್ರವರ್ಗಗಳನ್ನು ಹಿಂದುಳಿದ ವರ್ಗಗಳ ಪ್ರವರ್ಗ 2ಸಿ ಮತ್ತು ಒಕ್ಕಲಿಗರ ಸಮುದಾಯವನ್ನು 2ಡಿಗೆ ಸೇರಿಸಲು ಪ್ರಕ್ರಿಯೆ ಕೈಗೊಳ್ಳಲು ಈವರೆಗೂ ಇದ್ದಂತಹ ಅಡ್ಡಿ ನಿವಾರಣೆ ಆದಂತಾಗಿದೆ.

ಈ ಹಿಂದೆ ನಡೆದ ಅರ್ಜಿಯ ವಿಚಾರಣೆ ವೇಳೆ ಸರ್ಕಾರ, ಸಮುದಾಯವನ್ನು ಹಿಂದುಳಿದ ವರ್ಗಗಳ ಅಡಿ ಮೀಸಲು ಕಲ್ಪಿಸಲು ಕೋರಿದ ಅರ್ಜಿಗೆ ಆಕ್ಷೇಪಣೆ ಸಲ್ಲಿಸಿರುವ ರಾಜ್ಯ ಸರ್ಕಾರ, ಪ್ರತಿ ಹತ್ತು ವರ್ಷಕ್ಕೊಮ್ಮೆ ಹಿಂದುಳಿದ ವರ್ಗಗಳ ಮೀಸಲು ಪಟ್ಟಿಯನ್ನು ಪರಿಷ್ಕರಿಸುವ ಅಧಿಕಾರ ತನಗೆ ಇದೆ ಎಂದು ಪ್ರತಿಪಾದಿಸಿತ್ತು.

ಅಲ್ಲದೆ, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಕಾಯ್ದೆ-1995ರ ಸೆಕ್ಷನ್ 9ರ ಪ್ರಕಾರ ಯಾವುದಾದರೂ ಒಂದು ಸಮುದಾಯವು ತನ್ನನ್ನು ಹಿಂದುಳಿದ ವರ್ಗಕ್ಕೆ ಸೇರಿಸುವಂತೆ ಮನವಿ ಸಲ್ಲಿಸಿದರೆ, ಅದನ್ನು ಪರಿಶೀಲಿಸುವುದಕ್ಕೆ ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗಕ್ಕೆ ಅವಕಾಶವಿದೆ. ನಿಯಮಗಳ ಪ್ರಕಾರ ಆಯೋಗವು ಮನವಿ ಮಾಡಿರುವ ಸಮುದಾಯಗಳು ಸಾಮಾಜಿಕ, ಶೈಕ್ಷಣಿಕವಾಗಿ ಹಿಂದುಳಿದಿದೆಯೇ ಎಂಬ ವಿಚಾರವಾಗಿ ವಿಚಾರಣೆ, ಸಮೀಕ್ಷೆ, ತನಿಖೆ ನಡೆಸಿ ನಾಗರಿಕರ ಹಿಂದುಳಿದ ವರ್ಗಗಳ ವರ್ಗೀಕರಣದ ಬಗ್ಗೆ ಸರ್ಕಾರಕ್ಕೆ ಶಿಫಾರಸು ಮಾಡಬೇಕಾಗುತ್ತದೆ ಎಂದು ಆಕ್ಷೇಪಣೆಯಲ್ಲಿ ಸರ್ಕಾರ ತಿಳಿಸಿತ್ತು.

ಸ್ಥಾಯಿ ಸಮಿತಿಗಳ ರಚಿಸದೆ ಪಾಲಿಕೆಯಲ್ಲಿ 'ಭಾರೀ' ಭ್ರಷ್ಟಾಚಾರ

● ಮಾಜಿ ಮೇಯರ್ ಅಯೂಬ್ ಖಾನ್ ಆರೋಪ ● ನಿಯಮಾವಳಿ ಗಾಳಿಗೆ ತೂರಿ 'ಮೇಯರ್ ಶಿವಕುಮಾರ್ ದರ್ಬಾರ್'



ಮೈಸೂರು, ಮಾ.23(ಎಂಟಿವೈ)- ಮೈಸೂರು ಮಹಾನಗರ ಪಾಲಿಕೆಯಲ್ಲಿ ಕಳೆದ 7-8 ತಿಂಗಳಿಂದ ಭಾರೀ ಭ್ರಷ್ಟಾಚಾರ ನಡೆದಿರುವ ಶಂಕೆ ವ್ಯಕ್ತವಾಗುತ್ತಿದ್ದು, ಆ ಕಾರಣದಿಂದಲೇ ಕೌನ್ಸಿಲ್ ಸಭೆ ಮುಂದೂಡಿ, ಸ್ಥಾಯಿ ಸಮಿತಿಗಳಿಗೆ ಅಧ್ಯಕ್ಷರನ್ನು ಆಯ್ಕೆ ಮಾಡಲು ಮೇಯರ್ ಶಿವಕುಮಾರ್ ಹಿಂದೇಟು ಹಾಕುತ್ತಿದ್ದಾರೆ ಎಂದು ಮಾಜಿ ಮೇಯರ್ ಅಯೂಬ್ ಖಾನ್ ದೂರಿದ್ದಾರೆ.

ಮೈಸೂರು ಮಹಾನಗರ ಪಾಲಿಕೆ ವಿರೋಧ ಪಕ್ಷದ ನಾಯಕರ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಪ್ರದಾಯದಂತೆ ಮೇಯರ್ ಆಯ್ಕೆಯಾದ 7 ದಿನದಲ್ಲಿ ಸ್ಥಾಯಿ ಸಮಿತಿಗಳಿಗೆ ಅಧ್ಯಕ್ಷರನ್ನು ಆಯ್ಕೆ ಮಾಡಬೇಕು. ಆದರೆ, ಮೇಯರ್ ಶಿವಕುಮಾರ್ ನಿಯಮಾವಳಿ ಪಾಲಿಸದೇ ದುರಾಡಳಿತಕ್ಕೆ ಹೆಸರುವಾಸಿಯಾಗಿದ್ದಾರೆ. ಮೈಸೂರು ಮಹಾನಗರ ಪಾಲಿಕೆಯ ಇತಿಹಾಸದಲ್ಲೇ ಸುದೀರ್ಘ ಅವಧಿಗೆ ಸ್ಥಾಯಿ ಸಮಿತಿಗಳ ರಚನೆ ಮಾಡದೆ ನಿರ್ಲಕ್ಷಿಸಿದ ಅಪಖ್ಯಾತಿಗೆ ಒಳಗಾಗಿದ್ದಾರೆ. ಇದರಿಂದ ಮೈಸೂರು ನಗರದಲ್ಲಿ ಅಭಿವೃದ್ಧಿ ಕಾರ್ಯದೊಂದಿಗೆ ಫಲಾನುಭವಿಗಳಿಗೆ ಕೋಟ್ಯಾಂತರ ರೂ. ಮೌಲ್ಯದ ಸವಲತ್ತು ವಿತರಣೆ ಸಾಧ್ಯ ವಾಗದ ದುಸ್ಥಿತಿ ನಿರ್ಮಾಣವಾಗಿದೆ ಎಂದು ಆರೋಪಿಸಿದರು.

ಎಲ್ಲಾ ಅಧಿಕಾರ ತನ್ನ ಬಳಿಯೇ ಇರಬೇಕೆಂಬ ಧೋರಣೆಯಿಂದ ಮೇಯರ್ ಶಿವಕುಮಾರ್ ವರ್ತಿಸುತ್ತಿದ್ದಾರೆ. ಸ್ಥಾಯಿ ಸಮಿತಿಯಿಲ್ಲದೇ ಅಭಿವೃದ್ಧಿ ಕಾರ್ಯ ಸ್ಥಗಿತಗೊಂಡಿವೆ. ಪಾಲಿಕೆ ಇತಿಹಾಸದಲ್ಲಿ ಮೊದಲ ಬಾರಿಗೆ ಸುದೀರ್ಘ ಅವಧಿಯಲ್ಲಿ ಸ್ಥಾಯಿ ಸಮಿತಿಗಳಿಗೆ ಅಧ್ಯಕ್ಷರ ಆಯ್ಕೆ ಮಾಡದಿರುವ ಅಪಕೀರ್ತಿಗೆ ಬಿಜೆಪಿ ಆಡಳಿತ ಒಳಗಾಗಿದೆ ಎಂದು ಕಿಡಿಕಾರಿದರು.

ಬಿಜೆಪಿ ಮೇಯರ್‌ಗಳಿಗೆ ಅಧಿಕಾರ ನಡೆಸುವುದಕ್ಕೆ ಬರಲ್ಲ ಎಂಬುದು ಮತ್ತೊಮ್ಮೆ ಸಾಬೀತಾಗಿದೆ. ಮೈಸೂರು ಪಾಲಿಕೆಯ ಬಿಜೆಪಿಯ ಮೊದಲ ಮೇಯರ್ ಸುನಂದಾ ಪಾಲನೇತ್ರ ಅವರ ಅವಧಿಯಲ್ಲಿಯೂ ಕೇವಲ 3 ಕೌನ್ಸಿಲ್ ಸಭೆ ನಡೆದಿತ್ತು ಅದರಲ್ಲಿ ಕೊನೆ ಸಭೆಯನ್ನು ಗ್ಯಾಸ್ ಪೈಪ್‌ಲೈನ್ ಅಳವಡಿಕೆಗೆ ಅನುಮತಿ ಕೊಡುವುದಕ್ಕಾಗಿಯೇ ನಡೆಸಲಾಗಿತ್ತು. ಬಿಜೆಪಿಯ ಎರಡನೇ ಮೇಯರ್ ಶಿವಕುಮಾರ್ ಆಡಳಿತ ನಡೆಸಲು ಅಸಮರ್ಥರು ಎಂದು ತೋರಿಸಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು.

ಮಾರ್ಚ್ ಅಂತ್ಯದೊಳಗೆ ಬಜೆಟ್ ಮಂಡಿಸಬೇಕು. ಈ ಹಿಂದೆ ಎರಡು ತಿಂಗಳು ಮುಂಚೆ ಬಜೆಟ್‌ಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ಆದರೆ ಈ ಮೇಯರ್ ಯಾವುದೇ ಸಿದ್ಧತೆ ಮಾಡಿಕೊಂಡಿಲ್ಲ. ಮಾ.31ರ ನಂತರ ಪಾಲಿಕೆಯಲ್ಲಿ ಒಂದು ಪೈಸೆಯನ್ನೂ ಖರ್ಚು ಮಾಡಲು ಸಾಧ್ಯವಾಗುವುದಿಲ್ಲ. ಮಾಸಾಂತ್ಯಕ್ಕೆ ಚುನಾವಣಾ ನೀತಿ ಸಂಹಿತೆ ಜಾರಿಯಾಗುವ ಸಾಧ್ಯತೆಯಿದ್ದು, ಚುನಾವಣೆ ಮುಗಿದು ಫಲಿತಾಂಶ ಪ್ರಕಟವಾಗುವವರೆಗೂ ಯಾವುದೇ ಅಭಿವೃದ್ಧಿ ಕಾರ್ಯವಾಗಲೀ, ಬೇಸಿಗೆಯಿಂದ ತತ್ತರಿಸುವ ಬಡಾವಣೆಗಳಿಗೆ ಹೆಚ್ಚುವರಿ ಟ್ಯಾಂಕರ್‌ಗಳಲ್ಲಿ ನೀರು ಸರಬರಾಜು ಮಾಡುವುದಕ್ಕೂ ಸಾಧ್ಯವಾಗದು ಎಂದು ದೂರಿದರು.

> ಪಾಲಿಕೆಯ ಆ್ಯಕ್ಟ್ ಪ್ರಕಾರ ತಿಂಗಳಿಗೊಮ್ಮೆ ಕೌನ್ಸಿಲ್ ಸಭೆ ನಡೆಸಬೇಕು. ಇದುವರೆಗೂ ಸಾಕಷ್ಟು ಮಂದಿ ಮೇಯರ್ ಆಗಿ ಉತ್ತಮ ಕಾರ್ಯ ನಡೆಸಿದ್ದಾರೆ. ಒಬ್ಬೊಬ್ಬ ಮೇಯರ್ ತಮ್ಮ ಅವಧಿಯಲ್ಲಿ ತಿಂಗಳಿಗೆ 2 ಅಥವಾ 3 ಕೌನ್ಸಿಲ್ ಸಭೆ ನಡೆಸಿರುವ ದಾಖಲೆ ಇದೆ. ಹಾಲಿ ಮೇಯರ್ ಶಿವಕುಮಾರ್ ಅಧಿಕಾರ ನಡೆಸಿದ 8 ತಿಂಗಳಲ್ಲಿ 3 ಕೌನ್ಸಿಲ್ ಸಭೆ ಮಾತ್ರ ನಡೆಸಿದ್ದಾರೆ. ಆ ಸಭೆಗಳೆಲ್ಲಾ ಅರ್ಧಕ್ಕೇ ಮೊಟಕುಗೊಂಡಿವೆ. ಪೂರ್ಣ ಪ್ರಮಾಣದ ಸಭೆ ನಡೆಸುವುದಕ್ಕೂ ಸಾಧ್ಯವಾಗಿಲ್ಲ ಎಂದು ವಿಷಾದಿಸಿದರು.
> - ಮಾಜಿ ಮೇಯರ್ ಅಯೂಬ್ ಖಾನ್

ಈ ವಿಚಾರ ನಗರಾಭಿವೃದ್ಧಿ ಇಲಾಖೆಯ ಆಯುಕ್ತರಿಗೆ ತಿಳಿದಿದ್ದರೂ ಸುಮ್ಮನಿದ್ದಾರೆ. ಮೈಸೂರು ಪಾಲಿಕೆಯ ಆಯುಕ್ತರೂ ಬಿಜೆಪಿ ನಾಯಕರ ಕೈಗೊಂಬೆಯಂತೆ ವರ್ತಿಸುತ್ತಿದ್ದಾರೆ. ಕೂಡಲೇ ಮೇಯರ್ ಶಿವಕುಮಾರ್ ರಾಜೀನಾಮೆ ನೀಡಿ ಪಾಲಿಕೆಯ ಗೌರವ ಕಾಪಾಡಬೇಕು ಎಂದರು.

ಚುನಾವಣೆ ಸಮೀಪಿಸುತ್ತಿರುವ ಸಂದರ್ಭದಲ್ಲಿಯೇ ಮೈಸೂರಿನ ಕೆ.ಆರ್, ಚಾಮರಾಜ ಕ್ಷೇತ್ರಕ್ಕೆ ಸರ್ಕಾರ ಅನುದಾನ ಬಿಡುಗಡೆ ಮಾಡಿದೆ. ಈ ಅನುದಾನವನ್ನು ದುರ್ಬಳಕೆ ಮಾಡಿಕೊಳ್ಳಲು ಸ್ಥಾಯಿ ಸಮಿತಿಯನ್ನು ರಚಿಸುತ್ತಿಲ್ಲ ಎಂಬ ಅನುಮಾನ ಕಾಡುತ್ತಿದೆ. 50 ಸಾವಿರ ಮೇಲ್ಪಟ್ಟ ಕಾಮಗಾರಿಗೆ ಹಣಕಾಸು ಸ್ಥಾಯಿ ಸಮಿತಿಯಿಂದ ಅನುಮೋದನೆ ಪಡೆಯಬೇಕು. ಆದರೆ, ಪ್ರತಿ 49 ಸಾವಿರಕ್ಕೆ ಒಂದು ಕಾಮಗಾರಿಯಂತೆ ವಿಂಗಡಿಸಿ, ಮೇಯರ್ ಹಾಗೂ ಆಯುಕ್ತರ ಸಹಿಯೊಂದಿಗೆ ಜಿಲ್ಲಾಧಿಕಾರಿಗಳ ಅನುಮತಿ ಪಡೆದು ತಮಗೆ ಬೇಕಾದವರಿಗೆ ಗುತ್ತಿಗೆ ನೀಡುವ ಸಂಚು ನಡೆಸಲಾಗುತ್ತಿದೆ ಎಂದು ಆರೋಪಿಸಿದರು.

ಈ ಸಂಬಂಧ ಪಕ್ಷದ ವರಿಷ್ಠರೊಂದಿಗೆ ಚರ್ಚಿಸಿ, ಇನ್ನೆರಡು ದಿನದಲ್ಲಿ ಕತ್ತೆಯೊಂದಿಗೆ ಪಾಲಿಕೆ ಕಚೇರಿ ಮುಂಭಾಗದಿಂದ ಪ್ರಾದೇಶಿಕ ಆಯುಕ್ತರವರೆಗೆ ಮೆರವಣಿಗೆ ನಡೆಸುವುದಾಗಿ ತಿಳಿಸಿದರು.

ಮಾಜಿ ಮೇಯರ್ ಆರೀಫ್ ಹುಸೇನ್ ಮಾತನಾಡಿ, ರಾಜ್ಯದ ಬಿಜೆಪಿ ಸರ್ಕಾರದ ವಿರುದ್ಧ ಶೇ.40ರಷ್ಟು ಕಮಿಷನ್ ಆರೋಪದ ಬೆನ್ನಲ್ಲೇ ಮೈಸೂರು ಮಹಾನಗರ ಪಾಲಿಕೆಯಲ್ಲಿ ಶೇ.60ರಷ್ಟು ಕಮಿಷನ್ ಹಂತಕ್ಕೆ ತಲುಪಿದೆ ಎಂದು ದೂರಲಾಗುತ್ತಿದೆ. ಅದನ್ನು ಮುಚ್ಚಿ ಹಾಕುವುದಕ್ಕಾಗಿಯೇ ಕೌನ್ಸಿಲ್ ಸಭೆ ನಡೆಸುತ್ತಿಲ್ಲ, ಸ್ಥಾಯಿ ಸಮಿತಿ ರಚಿಸುತ್ತಿಲ್ಲ. ಪರಿಶಿಷ್ಟ, ಪಂಗಡಕ್ಕೆ ಸೇರಿದ ಮೇಯರ್ ಶಿವಕುಮಾರ್ ಅವರನ್ನು ನೆಪಮಾತ್ರಕ್ಕೆ ಮೇಯರ್ ಮಾಡಿ, ಆಡಳಿತ ನಡೆಸದಂತೆ ಕಡಿವಾಣ ಹಾಕಿದ್ದಾರೆ. ಪ್ರತಿದಿನ ಶಾಸಕರು ಹಾಗೂ ಸಂಸದರು ಲೆಟರ್ ಕೊಟ್ಟು ಅವರನ್ನು ನಿಯಂತ್ರಿಸುತ್ತಿದ್ದಾರೆ ಎಂದು ದೂರಿದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಮೇಯರ್ ಪುಷ್ಪಲತಾ ಜಗನ್ನಾಥ್, ಮಾಜಿ ಉಪ ಮೇಯರ್‌ಗಳಾದ ಶ್ರೀಧರ್, ಶಾಂತಕುಮಾರಿ, ಸದಸ್ಯರಾದ ಜೆ.ಗೋಪಿ, ಶೋಭ ಸುನೀಲ್, ರಜನಿ ಅಣ್ಣಯ್ಯ, ಲಕ್ಷ್ಮಿ ಕುಮಾರ್, ಶಿವಕುಮಾರ್, ಸತ್ಯರಾಜ್, ಲೋಕೇಶ್ ಪಿಯಾ, ಹಾಜಿರಾ ಸೀಮಾ ಹಾಗೂ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಮೂರನೇ ಬಾರಿ ಪಾಲಿಕೆ ಕೌನ್ಸಿಲ್ ಸಭೆ ರದ್ದು ಖಂಡಿಸಿ ಕಾಂಗ್ರೆಸ್ ಸದಸ್ಯರ ಪ್ರತಿಭಟನೆ

ಮೇಯರ್ ಕುರ್ಚಿಗೆ ಕತ್ತೆ ಚಿತ್ರ ಅಂಟಿಸಿ ಆಕ್ರೋಶ



ಮೈಸೂರು, ಮಾ.23(ಎಂಟಿವೈ)- ಮೈಸೂರು ಮಹಾನಗರ ಪಾಲಿಕೆಯಲ್ಲಿ ಇಂದು(ಮಾ.23) ನಡೆಯಬೇಕಾಗಿದ್ದ ಕೌನ್ಸಿಲ್ ಸಭೆ ರದ್ದು ಮಾಡಿದ್ದನ್ನು ಖಂಡಿಸಿ ಪಾಲಿಕೆ ಕಾಂಗ್ರೆಸ್ ಸದಸ್ಯರು ಮೇಯರ್ ಕಚೇರಿಯಿಂದ ಅವರ ಕುರ್ಚಿಯನ್ನು ಹೊರ ತಂದು, ಅದಕ್ಕೆ ಕತ್ತೆ ಚಿತ್ರ ಅಂಟಿಸಿ ಆಕ್ರೋಶ ವ್ಯಕ್ತಪಡಿಸಿದರು.

ಸಭೆ ನಿಗದಿ ಮಾಡಿ, ಕೊನೆ ಘಳಿಗೆಯಲ್ಲಿ ಕೌನ್ಸಿಲ್ ಸಭೆಯನ್ನು ಮೂರನೇ ಬಾರಿಗೆ ಮುಂದೂಡಿದ ಹಿನ್ನೆಲೆಯಲ್ಲಿ ಅಸಮಾಧಾನಗೊಂಡ ಪಾಲಿಕೆಯ ಕಾಂಗ್ರೆಸ್ ಸದಸ್ಯರು, ಮೇಯರ್ ಶಿವಕುಮಾರ್ ಕೊಠಡಿಯ ಮುಂದೆ ಕೆಲಕಾಲ ಪ್ರತಿಭಟನೆ ನಡೆಸಿ, ಘೋಷಣೆ ಕೂಗಿದರು. ಬಳಿಕ ಮೇಯರ್ ಕಚೇರಿಗೆ ನುಗ್ಗಿ, ಅವರು ಕುಳಿತುಕೊಳ್ಳುವ ಕುರ್ಚಿಯನ್ನು ಹೊರಗೆ ತಂದು, ಅದಕ್ಕೆ ಕತ್ತೆ ಭಾವಚಿತ್ರವನ್ನು ಅಂಟಿಸಿ ಕಿಡಿಕಾರಿದರು.

ಮೈಸೂರು ಮಹಾನಗರ ಪಾಲಿಕೆಯ ಮೇಯರ್ ಹಾಗೂ ಪಾಲಿಕೆ ಆಯುಕ್ತರು ಬಿಜೆಪಿ ನಾಯಕರ ಕೈಗೊಂಬೆಯಾಗಿದ್ದಾರೆ. ಬಿಜೆಪಿ ಶಾಸಕರು ಹಾಗೂ ಸಂಸದರ ಆಜ್ಞೆಯಂತೆ ವರ್ತಿಸುತ್ತಿದ್ದಾರೆ. ಇದರಿಂದ ಪಾಲಿಕೆ ಘನತೆಗೆ ಧಕ್ಕೆಯಾಗುತ್ತಿದೆ. ಸ್ವಹಿತಾಸಕ್ತಿಗಾಗಿ ಮೈಸೂರು ಜನರ ಹಿತವನ್ನು ಮೇಯರ್ ಬಲಿಕೊಡುತ್ತಿದ್ದಾರೆ. ಪಾಲಿಕೆಯ ಇತಿಹಾಸಕ್ಕೆ ಮಸಿ ಬಳಿಯುವ ಕೆಲಸ ಮಾಡುತ್ತಿದ್ದಾರೆ ಎಂದು ದೂರಿದರು.

ಪ್ರತಿಭಟನೆಯಲ್ಲಿ ಮಾಜಿ ಮೇಯರ್‌ಗಳಾದ ಅಯೂಬ್‌ಖಾನ್, ಆರೀಫ್ ಹುಸೇನ್, ಪುಷ್ಪಲತಾ ಜಗನ್ನಾಥ್, ಮಾಜಿ ಉಪಮೇಯರ್ ಶಾಂತಕುಮಾರಿ, ಶ್ರೀಧರ್, ಪಾಲಿಕೆ ಸದಸ್ಯರಾದ ಶೋಭ ಸುನೀಲ್, ಲೋಕೇಶ್ ಪಿಯಾ, ರಜನಿ ಅಣ್ಣಯ್ಯ, ಜೆಡಿಎಸ್ ಸದಸ್ಯ ಎಂ.ಡಿ.ನಾಗರಾಜು ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಬಡ ಮಹಿಳೆಯರಿಗೆ ಹೊಲಿಗೆ ಯಂತ್ರ ವಿತರಣೆ



ಮೈಸೂರು, ಮಾ.23(ಎಂಕೆ)- ಮೈಸೂರಿನ ಮಂಜುನಾಥಪುರದಲ್ಲಿರುವ ಸಮುದಾಯ ಭವನದಲ್ಲಿ ನಗರಪಾಲಿಕೆಯ 24:10 ಹಾಗೂ 7.25 ಯೋಜನೆಯ ಅನುದಾನದಡಿ ಆಯ್ಕೆಯಾದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ಸಮುದಾಯದ 30 ಮಂದಿ ಮಹಿಳಾ ಫಲಾನುಭವಿಗಳಿಗೆ ಶಾಸಕ ಎಲ್.ನಾಗೇಂದ್ರ ಹೊಲಿಗೆಯಂತ್ರ(ಟೈಲರಿಂಗ್ ಮಷಿನ್)ಗಳನ್ನು ಗುರುವಾರ ವಿತರಣೆ ಮಾಡಿದರು.

ಬಳಿಕ ಮಾತನಾಡಿದ ಅವರು, ಮಂಜುನಾಥಪುರ ಇತರೆ ಬಡಾವಣೆಗಳಂತೆ ಅಭಿವೃದ್ಧಿಯಾಗಿದೆ. ಸಮುದಾಯ ಭವನ, ಮನೆಗಳ ಹಕ್ಕು ಪತ್ರ, ರಸ್ತೆ-ಚರಂಡಿ ಅಭಿವೃದ್ಧಿ, ಕುಡಿಯುವ ನೀರು ಸೇರಿದಂತೆ ಹಲವು ಅಭಿವೃದ್ಧಿ ಕಾರ್ಯಕ್ರಮಗಳು ನಡೆದಿದೆ. ಏನೇ ಸಮಸ್ಯೆಯಿದ್ದರೂ ನೇರವಾಗಿ ತಿಳಿಸಿ ಎಂದು ಹೇಳಿದ ಅವರು, ಮುಂದಿನ ವಿಧಾನ ಸಭಾ ಚುನಾವಣೆಯಲ್ಲಿ ಮತ ನೀಡಿ ಗೆಲ್ಲಿಸುವ ಮೂಲಕ ಬಡಾವಣೆ ಅಭಿವೃದ್ಧಿಗೆ ಸಹಕರಿಸಿ ಎಂದು ಮನವಿ ಮಾಡಿದರು.

ನಗರಪಾಲಿಕೆ ಸದಸ್ಯ ರವೀಂದ್ರ ಮಾತನಾಡಿ, ಮುಂದಿನ ದಿನಗಳಲ್ಲಿ ಮಂಜುನಾಥಪುರದ ನಿವಾಸಿಗಳ ಅನುಕೂಲಕ್ಕಾಗಿ ಹೈಟೆಕ್ ಬಸ್ ನಿಲ್ದಾಣ, ಆರೋಗ್ಯ ಕೇಂದ್ರ ನಿರ್ಮಾಣವಾಗಲಿದೆ. 5 ರಿಂದ 10ನೇ ತರಗತಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ತರಬೇತಿ ನೀಡುವ ಪ್ರಯತ್ನ ನಡೆಸಲಾಗುವುದು. ಹಾಗೆಯೇ ಟೈಲರಿಂಗ್ ತರಬೇತಿ ಅಗತ್ಯವಿದ್ದವರಿಗೂ ನೀಡಲಾಗುವುದು. ನಗರ ಪಾಲಿಕೆಯಿಂದ ಬಡ ಜನರಿಗೆ ಹಲವಾರು ಯೋಜನೆಗಳಿದ್ದು, ಸದುಪಯೋಗ ಪಡಿಸಿಕೊಳ್ಳುವಂತೆ ತಿಳಿಸಿದರು.

ನಗರಪಾಲಿಕೆ ಸಹಾಯಕ ಆಯುಕ್ತೆ ಚಂದ್ರಮ್ಮ ಸ್ಥಳೀಯ ಮುಖಂಡರಾದ ವೆಂಕಟರಾಮು, ಕವಿತಾ, ಗೋವಿಂದು, ಗುರು, ಸುಬ್ರಮಣಿ, ಸರಸ್ವತಿ, ಶೋಭ ಲಕ್ಷ್ಮಿ, ವೇದಾಂಬ ಮತ್ತಿತರರಿದ್ದರು.

ಇಂದು ಮಾದಕ ವಸ್ತು ನಾಶ

ಮೈಸೂರು, ಮಾ.23(ಎಂಕೆ)- ಜಿಲ್ಲೆಯ ವಿವಿಧ ಪೊಲೀಸ್ ಠಾಣೆ ವ್ಯಾಪ್ತಿಯ 11 ಪ್ರಕರಣಗಳಲ್ಲಿ ವಶಪಡಿಸಿಕೊಂಡಿದ್ದ 7,64,640 ರೂ.ಮೌಲ್ಯದ 38 ಕೆಜಿ. 323 ಗ್ರಾಂ ಮಾದಕ ವಸ್ತು(ಗಾಂಜಾ)ವನ್ನು ನಾಳೆ(ಮಾ.24) ಮೈಸೂರು ತಾಲೂಕಿನ ಗುಜ್ಜೇಗೌಡನಪುರ ಗ್ರಾಮದ ಬಳಿಯಿರುವ M/S GIPS Bio-tech Incinerator ಪ್ಲಾಂಟ್‌ನಲ್ಲಿ ನಾಶಪಡಿಸಲಾಗುವುದು. ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆ, ಹೆಚ್.ಡಿ.ಕೋಟೆ, ಸಿಇಎನ್ ಕ್ರೈಂ, ಇಲವಾಲ, ಕೆ.ಆರ್.ನಗರ ಹಾಗೂ ನಂಜನಗೂಡು ಪೊಲೀಸ್ ಠಾಣೆ ವ್ಯಾಪ್ತಿಯ 11 ಪ್ರಕರಣಗಳಲ್ಲಿ ಗಾಂಜಾ ವಶಪಡಿಸಿಕೊಂಡಿದ್ದು, ನ್ಯಾಯಾಲಯದ ಆದೇಶಕ್ಕನುಗುಣವಾಗಿ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಸೋಸಲೆ ಮಠದ ಚಿನ್ನದ ತಟ್ಟೆ ಗಿರವಿ ಇಟ್ಟ ಪ್ರಕರಣ

ಮೂವರು ಆರೋಪಿಗಳಿಗೆ ತಲಾ 5 ಸಾವಿರ ದಂಡ

ಮೈಸೂರು, ಮಾ.23-ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಸೋಸಲೆ ಶ್ರೀ ವ್ಯಾಸರಾಜ ಮಠದ ಚಿನ್ನದ ತಟ್ಟೆಗಳನ್ನು ಗಿರವಿಯಿಟ್ಟ ಪ್ರಕರಣದಲ್ಲಿ ಮಠದ ಹಿಂದಿನ ಶ್ರೀಗಳೂ ಸೇರಿದಂತೆ ಮೂವರನ್ನು ಅಪರಾಧಿಗಳು ಎಂದು ಮೈಸೂರಿನ 6ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯದ ನ್ಯಾಯಾಧೀಶರಾದ ಗುರುರಾಜ ಸೋಮಕ್ಕಲವರ್ ತೀರ್ಪು ನೀಡಿದ್ದಾರೆ

ಮಠದ ಹಿಂದಿನ ಶ್ರೀಗಳಾದ ಶ್ರೀ ವಿದ್ಯಾ ಮನೋಹರ ತೀರ್ಥ, ಅವರ ತಾಯಿ ಶ್ರೀಮತಿ ಮತ್ತು ಹಿಂದಿನ ಆಡಳಿತ ಮಂಡಳಿಯ ಬಿ.ಆರ್. ನಟರಾಜ ಜೋಯಿಸ್ ಅಪರಾಧಿ ಗಳೆಂದು ಘೋಷಿಸಲ್ಪಟ್ಟವರಾಗಿದ್ದು, ಇವರಿಗೆ ತಲಾ 5 ಸಾವಿರ ರೂ. ದಂಡ ವಿಧಿಸಿರುವುದಲ್ಲದೇ, ತಲಾ 50 ಸಾವಿರ ರೂ. ಬಾಂಡ್ ಅನ್ನು ನೀಡಬೇಕು. ಒಂದು ವರ್ಷದವರೆಗೆ ಯಾವುದೇ ರೀತಿಯ ಅಪರಾಧಗಳನ್ನೂ ಎಸಗದೆ ಸ್ನಡತೆ ಹೊಂದಿರಬೇಕು. ಅಪರಾಧಿಗಳು ಅವರ ಶಾಶ್ವತ ವಿಳಾಸವನ್ನು ನೀಡಬೇಕು ಹಾಗೂ ಇವರ ಬಗ್ಗೆ ಅಧಿಕಾರಿ ಒಂದು ವರ್ಷದವರೆಗೆ ನಿಗಾ ವಹಿಸಬೇಕು ಎಂದು ತೀರ್ಪಿನಲ್ಲಿ ತಿಳಿಸಲಾಗಿದೆ

ಅಪರಾಧಿಗಳು ಭಾರತೀಯ ದಂಡ ಸಂಹಿತೆ 406, 408 ಮತ್ತು 420ರಡಿ ತಪ್ಪಿತಸ್ಥರೆಂದು ಸಾಬೀತಾಗಿದೆ ಆದರೆ ಶ್ರೀಮತಿ ಮತ್ತು ನಟರಾಜ ಜೋಯಿಸ್ ಅವರ ವಯಸ್ಸಿನ ಕಾರಣದಿಂದ ಹಾಗೂ ಶ್ರೀ ವಿದ್ಯಾಮನೋಹರ ತೀರ್ಥ ಅವರು ತಮ್ಮ ವಯೋವೃದ್ಧ ಪೋಷಕ ರನ್ನು ನೋಡಿಕೊಳ್ಳಬೇಕಾದ ಕಾರಣದಿಂದಾಗಿ ಜೈಲಿಗೆ ಕಳುಹಿಸುವ ವಿಚಾರದಲ್ಲಿ ವಿನಾಯಿತಿ ನೀಡಲಾಗಿದೆ ಎಂದು ತೀರ್ಪಿನಲ್ಲಿ ಉಲ್ಲೇಖಿಸಲಾಗಿದೆ

ವಿವರ: ಶ್ರೀ ವಿದ್ಯಾಮನೋಹರ ತೀರ್ಥ ಅವರು ಸೋಸಲೆ ವ್ಯಾಸರಾಜ ಮಠದ ಸ್ವಾಮೀಜಿಗಳಾಗಿದ್ದಾಗ ಮಠಕ್ಕೆ ಸೇರಿದ 500 ಗ್ರಾಂ ತೂಕದ 2 ಚಿನ್ನದ ತಟ್ಟೆಗಳನ್ನು ದೇವರಾಜ ಅರಸು ರಸ್ತೆಯಲ್ಲಿರುವ ಸುನಿಲ್ ಫೈನಾನ್ಸ್‌ನಲ್ಲಿ 5 ಲಕ್ಷ ರೂ.ಗಳಿಗೆ ಗಿರವಿ ಇಟ್ಟಿದ್ದರು. ಈ ಸಂಬಂಧ ಮಠದ ಭಕ್ತಾದಿಗಳು ವ್ಯಾಸರಾಜ ಮಠದ ಸೇವಾ ಸಮಿತಿಯ ಅಧ್ಯಕ್ಷರಾಗಿದ್ದ ಬೆಂಗಳೂರಿನ ನರೇಂದ್ರ ನೇತೃತ್ವದಲ್ಲಿ ಹೋರಾಟ ನಡೆಸಿದ್ದರು. ಅಲ್ಲದೇ ಲಕ್ಷ್ಮೀಪುರಂ ಠಾಣೆಯಲ್ಲಿ ಪ್ರಕರಣ ದಾಖಲಾಗಿ ಪೊಲೀಸರು ಚಿನ್ನದ ತಟ್ಟೆಗಳನ್ನು ವಶಪಡಿಸಿಕೊಂಡಿದ್ದರು.

'ಭವಿಷ್ಯನಿಧಿ ನಿಮ್ಮ ಹತ್ತಿರ': ಅಹವಾಲು ಸಲ್ಲಿಕೆಗೆ ಅವಕಾಶ

ಮೈಸೂರು,ಮಾ.23- ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆ ವತಿಯಿಂದ ಮೈಸೂರು ಪ್ರಾದೇಶಿಕ ಕಚೇರಿಯ 'ಭವಿಷ್ಯನಿಧಿ ನಿಮ್ಮ ಹತ್ತಿರ' 2.0 ಅಡಿಯಲ್ಲಿ ಜಿಲ್ಲಾ ವ್ಯಾಪ್ತಿಯ ಕಾರ್ಯಕ್ರಮವನ್ನು ಮಾ.27 (ಸೋಮವಾರ) ಬೆಳಗ್ಗೆ 9 ಗಂಟೆಯಿಂದ ಮೈಸೂರು ಜಿಲ್ಲೆಯ ಟಿ.ನರಸೀಪುರದ ತಾಲೂಕು ಪಂಚಾಯತ್ ಕಚೇರಿ, ಅಲ್ಲದೆ ಮಂಡ್ಯ ಜಿಲ್ಲೆಯ ಮಳವಳ್ಳಿ ಟಿಎಪಿಸಿಎಂಎಸ್ ಲಿಮಿಟೆಡ್‌ನ ರೈತ ಸಮುದಾಯ ಭವನ ಹಾಗೂ ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲದ ಜನನಿ ಆಸ್ಪತ್ರೆಯ ಸಿಡಿಎಸ್ ಸಮುದಾಯ ಭವನದಲ್ಲಿ ಏರ್ಪಡಿಸಲಾಗಿದೆ.

ಪಿಎಫ್ ಸದಸ್ಯರು, ಪಿಂಚಣಿದಾರರು, ಉದ್ಯೋಗದಾತರು ಅಗತ್ಯ ಮಾಹಿತಿಗಾಗಿ ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬಹುದು. ಹೆಚ್ಚಿನ ವಿವರಗಳಿಗಾಗಿ ಸಾರ್ವಜನಿಕ ಸಂಪರ್ಕಾಧಿಕಾರಿಯನ್ನು 0821-2599200/222 ಮೂಲಕ ಸಂಪರ್ಕಿಸಬಹುದು ಅಥವಾ ಕ್ಷೇತ್ರೀಯ ಭವಿಷ್ಯ ನಿಧಿ ಕಚೇರಿ, ಮೈಸೂರಿನ ಸಾಮಾಜಿಕ ಮಾಧ್ಯಮ ವೇದಿಕೆ (@epfomysore) ಗೆ ಭೇಟಿ ನೀಡಬಹುದು ಎಂದು ಕ್ಷೇತ್ರೀಯ ಭವಿಷ್ಯ ನಿಧಿ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚುನಾವಣಾ ಕಾರ್ಯತಂತ್ರದಲ್ಲಿ ಮಹಿಳಾ ಕಾಂಗ್ರೆಸ್ ಪಾತ್ರ ಕುರಿತು ಮೈಸೂರಲ್ಲಿ

ನಾಳೆಯಿಂದ ಮಹಿಳಾ ಕಾಂಗ್ರೆಸ್ ರಾಜ್ಯ ಮಟ್ಟದ ಸಭೆ

● ರಾಜ್ಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಡಾ.ಬಿ.ಪುಷ್ಪಾ ಅಮರನಾಥ್ ಮಾಹಿತಿ
● ಮಹಿಳಾ ಕಾಂಗ್ರೆಸ್ ರಾಷ್ಟ್ರಾಧ್ಯಕ್ಷೆ ನೆಟ್ಟಾ ಡಿ'ಸೋಜಾ ಸೇರಿ ಕಾಂಗ್ರೆಸ್ ನಾಯಕರು ಭಾಗಿ

ಮೈಸೂರು,ಮಾ.23(ಪಿಎಂ)- ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್‌ನ ರಾಜ್ಯ ಮಟ್ಟದ ಸಭೆಯನ್ನು ಮಾ.25 ಮತ್ತು 26ರಂದು ಮೈಸೂರಿನಲ್ಲಿ ಆಯೋಜಿಸಿದ್ದು, ಚುನಾವಣೆಯಲ್ಲಿ ಗೆಲುವಿನ ತಂತ್ರ ರೂಪಿಸುವ ಸಂಬಂಧ ಈ ಸಭೆ ನಡೆಯಲಿದೆ ಎಂದು ರಾಜ್ಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಡಾ.ಬಿ.ಪುಷ್ಪಾ ಅಮರನಾಥ್ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಆಲಿವ್ ಗಾರ್ಡನ್ ಹಾಲ್‌ನಲ್ಲಿ ಈ ಸಭೆ ನಡೆಯಲಿದ್ದು, ಸಭೆಗೆ ಇಡೀ ರಾಜ್ಯ ಮಟ್ಟದ 250ಕ್ಕೂ ಹೆಚ್ಚು ಪದಾಧಿಕಾರಿಗಳು, 36 ಸಂಘಟನಾ ಜಿಲ್ಲೆಯ ಮಹಿಳಾ ಕಾಂಗ್ರೆಸ್ ಜಿಲ್ಲಾಧ್ಯಕ್ಷರು ಪಾಲ್ಗೊಳ್ಳಲಿದ್ದಾರೆ. ಜೊತೆಗೆ ಅಖಿಲ ಭಾರತ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ನೆಟ್ಟಾ ಡಿ'ಸೋಜಾ ಅವರು ಎರಡು ದಿನಗಳ ಕಾಲ ಸಭೆಯಲ್ಲಿ ಮಾರ್ಗದರ್ಶನ ನೀಡಲಿದ್ದಾರೆ ಎಂದರು.

ಮಾ.25ರ ಬೆಳಗ್ಗೆ 10.30ಕ್ಕೆ ಸಭೆ ಉದ್ಘಾಟನೆಗೊಳ್ಳಲಿದೆ. ಚುನಾವಣೆಯ ಗೆಲುವಿನ ಕಾರ್ಯ ತಂತ್ರದಲ್ಲಿ ಮಹಿಳಾ ಕಾಂಗ್ರೆಸ್‌ನ ಪಾತ್ರದ ಬಗ್ಗೆ ಸಭೆಯಲ್ಲಿ ರೂಪುರೇಷೆ ಸಿದ್ಧಪಡಿಸಲಾಗುವುದು. ಈಗಾಗಲೇ ಕಾಂಗ್ರೆಸ್ ರಾಜ್ಯದ ಜನತೆಗೆ ನಾಲ್ಕು ಗ್ಯಾರಂಟಿಗಳನ್ನು ನೀಡಿದೆ. ಈ ಭರವಸೆ ಈಡೇರಿಸಲು ಸಾಧ್ಯವಿಲ್ಲ ವೆಂದು ಬಿಜೆಪಿ ಮತ್ತು ಜೆಡಿಎಸ್ ಪ್ರತಿಪಾದಿಸುತ್ತಿವೆ. ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರ ನೀಡಿದ್ದ ಬಹುಪಾಲು ಭರವಸೆಗಳನ್ನು ಈಡೇರಿಸಿದೆ ಎಪಿಎಲ್-ಬಿಪಿಎಲ್ ತಾರತಮ್ಯವಿಲ್ಲದೆ ಎಲ್ಲರಿಗೂ ಕಾಂಗ್ರೆಸ್‌ನ ಗ್ಯಾರಂಟಿ ಸೌಲಭ್ಯ ದೊರೆಯಲಿದೆ. ಬಿಜೆಪಿಗರು, ಜೆಡಿಎಸ್‌ನವರಿಗೂ ಈ ಸೌಲಭ್ಯ ದೊರೆಯಲಿದೆ ಎಂದು ಕುಟುಕಿದರು.


ರಾಜ್ಯಾದ್ಯಂತ ಮಹಿಳೆಯರಿಗೆ ಕಾಂಗ್ರೆಸ್ ಎಷ್ಟು ಕ್ಷೇತ್ರದಲ್ಲಿ ಅವಕಾಶ ನೀಡಬಹುದು ಎಂಬುದಕ್ಕೆ ಪ್ರತಿಕ್ರಿಯಿಸಿ, ಕೆಲವೇ ಕೆಲವು ಮಹಿಳೆಯರು ಟಿಕೆಟ್ ಆಕಾಂಕ್ಷಿಗಳಾಗಿದ್ದು, ಮೈಸೂರು ಭಾಗದಲ್ಲಿ ಅತ್ಯಂತ ಕಡಿಮೆ. ಪಕ್ಷದಿಂದ ಸರ್ವೆ ಮಾಡಿದಾಗ ಗೆಲ್ಲುವ ಅವಕಾಶ ಕಂಡುಬಂದರೆ ಖಂಡಿತ ಅಂತಹ ಮಹಿಳೆಯರಿಗೆ ಕಾಂಗ್ರೆಸ್ ಟಿಕೆಟ್ ದೊರೆಯಲಿದೆ. ಈ ಸಂಬಂಧ ಹೈಕಮಾಂಡ್ ಸೂಕ್ತ ತೀರ್ಮಾನ ಕೈಗೊಳ್ಳಲಿದೆ ಎಂದು ತಿಳಿಸಿದರು.

ವಿಧಾನಸಭಾ ಚುನಾವಣೆಯಲ್ಲಿ ತಮ್ಮ ಸ್ಪರ್ಧೆ ಸಂಬಂಧ ಪ್ರತಿಕ್ರಿಯಿಸಿ, ನಾನು ಅರ್ಜಿ ಹಾಕಿದ್ದೇನೆ. ಆದರೆ ಕ್ಷೇತ್ರ ಉಲ್ಲೇಖಿಸಿಲ್ಲ. ಇಂದಿನ ಸ್ಥಿತಿಗತಿಯಲ್ಲಿ ಗೆಲ್ಲುವಿನ ಮಾನದಂಡವೇ ಮುಖ್ಯ. ಈ ನಿಟ್ಟಿನಲ್ಲಿ ಪಕ್ಷ ಅಭ್ಯರ್ಥಿಗಳ ಆಯ್ಕೆ ಮಾಡಲಿದೆ. ರಾಜ್ಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆಯಾಗಿ ರಾಜ್ಯ ಸುತ್ತುವ ಮೂಲಕ ಪಕ್ಷದ ಪರವಾಗಿ ಕೆಲಸ ಮಾಡುತ್ತಿದ್ದೇನೆ. ಎಲ್ಲಿಯಾದರೂ ಅವಕಾಶ ಕೊಡಿ ಎಂದು ಕೇಳಿದ್ದೇನೆ. ಕೆಲವೇ ದಿನಗಳಲ್ಲಿ ಅಭ್ಯರ್ಥಿಗಳ ಪಟ್ಟಿ ಬಿಡುಗಡೆಯಾಗಲಿದೆ ಎಂದು ತಿಳಿಸಿದರು.

ತಿ.ನರಸೀಪುರದಲ್ಲಿ ಅವಕಾಶ ಕೊಟ್ಟರೆ ಸ್ಪರ್ಧಿಸುತ್ತೀರಾ ಎಂಬುದಕ್ಕೆ ಪ್ರತಿಕ್ರಿಯಿಸಿ, ಅಲ್ಲಿಗೆ ನಾನು ಆಕಾಂಕ್ಷಿಯಲ್ಲ. ಈಗಾಗಲೇ ಅಲ್ಲಿ ನಮ್ಮ ನಾಯಕರಾದ ಡಾ.ಹೆಚ್.ಸಿ. ಮಹದೇವಪ್ಪ ಮತ್ತು ಅವರ ಪುತ್ರ ಕೆಲಸ ಮಾಡುತ್ತಿದ್ದಾರೆ ಅವರಿಗೆ ಸಂಪೂರ್ಣ ಬೆಂಬಲ ಕೊಡುತ್ತೇನೆ ಎಂದರು. ಮಹಿಳಾ ಕಾಂಗ್ರೆಸ್ ರಾಜ್ಯ ಉಪಾಧ್ಯಕ್ಷೆ ಪುಷ್ಪವಲ್ಲಿ, ನಗರಾಧ್ಯಕ್ಷೆ ಪುಷ್ಪಾಲತಾ ಚಿಕ್ಕಣ್ಣ, ಜಿಲ್ಲಾಧ್ಯಕ್ಷೆ ಲತಾಸಿದ್ದಶೆಟ್ಟಿ ಗೋಷ್ಠಿಯಲ್ಲಿದ್ದರು.

ಮಹಿಳಾ ಮೀಸಲಿಗೆ ಇಚ್ಛಾಸಕ್ತಿ ಕೊರತೆ

ರಾಜಕೀಯದಲ್ಲಿ ಮಹಿಳಾ ಪ್ರಾತಿನಿಧ್ಯ ಕಡಿಮೆ ಇದೆಯೇ ಎಂಬುದಕ್ಕೆ ಉತ್ತರಿಸಿ, ಸ್ಥಳೀಯ ಸಂಸ್ಥೆಗಳಲ್ಲಿ ಆ ಕೊರತೆ ಇಲ್ಲ. ರಾಜೀವ್‌ಗಾಂಧಿ ಕಾಲದಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳಾ ಮೀಸಲಾತಿ ಕಲ್ಪಿಸಲಾಯಿತು. ಇದರಿಂದ ಈ ಹಂತದಲ್ಲಿ ಮಹಿಳಾ ಪ್ರಾತಿನಿಧ್ಯ ಹೆಚ್ಚಾಯಿತು. ಮೀಸಲಾತಿಯಿಂದ ನಾನು ಜಿಪಂ ಅಧ್ಯಕ್ಷೆ ಆಗುವ ಅವಕಾಶ ಲಭಿಸಿತು. ಸ್ಥಳೀಯ ಸಂಸ್ಥೆಗಳಲ್ಲಿ ಕೊಟ್ಟಂತೆ ವಿಧಾನಸಭೆ ಲೋಕಸಭೆಯಲ್ಲಿ ಕೊಡಬೇಕು. ಆದರೆ ನಮ್ಮ ಸಮಾಜ, ನಾಯಕರು ಹಾಗೂ ರಾಜಕೀಯ ಪಕ್ಷಗಳಿಗೂ ಈ ವಿಚಾರದಲ್ಲಿ ಇಚ್ಛಾಸಕ್ತಿ ಕೊರತೆ ಇದೆ ಎಂದು ಪುಷ್ಪಾ ಅಮರನಾಥ್ ಹೇಳಿದರು.




'ಪ್ರಣಯಂ' | ಚಿತ್ರದ ಲಿರಿಕಲ್ ಹಾಡು ಅಶ್ವಿನಿ ಪುನೀತ್‌ರಾಜಕುಮಾರ್ ಬಿಡುಗಡೆ

ಯುವ ಜೋಡಿಗಳ ಪ್ರಣಯದ ಕಥಾಹಂದರ ಒಳಗೊಂಡ ಚಿತ್ರ 'ಪ್ರಣಯಂ'. 'ಪಲ್ಲಕ್ಕಿ', 'ಗಣಪ', 'ಪಾರಿಜಾತ'ಚಿತ್ರಗಳನ್ನು ನೀಡಿದ ಪರಮೇಶ್ ಮನಸ್ವಿ ವೆಂಚರ್ಸ್ ಹಾಗೂ ಪಿಟು ಪ್ರೊಡಕ್ಷನ್ಸ್ ಬ್ಯಾನರ್ ಅಡಿ ಕಥೆ ಬರೆದು ನಿರ್ಮಾಣ ಮಾಡಿರುವ ಈ ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಯಾಗಿತ್ತು. ಈಗ ಈ ಚಿತ್ರಕ್ಕಾಗಿ ಜಯಂತ್ ಕಾಯ್ಕಿಣಿ ಬರೆದ 'ಮಳೆಗಾಲ ಬಂತು ಸನಿಹ' ಹಾಡಿನ ಲಿರಿಕಲ್ ವೀಡಿಯೋವನ್ನು ಶ್ರೀಮತಿ ಅಶ್ವಿನಿ ಪುನೀತ್‌ರಾಜ್‌ಕುಮಾರ್ ಅವರು ಬಿಡುಗಡೆ ಮಾಡಿದರು. ಎಸ್.ದತ್ತಾತ್ರೇಯ ಅವರ ನಿರ್ದೇಶನದಲ್ಲಿ ಮೂಡಿಬಂದಿರುವ ಈ ಚಿತ್ರದಲ್ಲಿ ಎಂಗೇಜ್‌ಮೆಂಟ್ ಆದನಂತರ ಯುವಜೋಡಿಗಳ ನಡುವೆ ನಡೆಯೋ ಪ್ರೀತಿ ಪ್ರೇಮದ ಕಥೆಯನ್ನು ಹೇಳಿದ್ದಾರೆ. ಯುವ ನಟ ರಾಜವರ್ಧನ್, ನೈನಾ ಗಂಗೂಲಿ ಚಿತ್ರದ ನಾಯಕ, ನಾಯಕಿ. ಈಗಾಗಲೇ ಚಿತ್ರದ ಚಿತ್ರೀಕರಣ ಪೂರ್ಣಗೊಂಡು ಬಿಡುಗಡೆಯ ಹಂತಕ್ಕೆ ಬಂದಿದೆ.

ಕಾರ್ಯಕ್ರಮದಲ್ಲಿ ಮಾತನಾಡಿದ ಜಯಂತ್ ಕಾಯ್ಕಿಣಿ, ಪರಮೇಶ್‌ಗೂ ನನಗೂ ದಶಕದ ಹಿಂದಿನ ನಂಟು. ಅವರ 'ಕರಿಯ', 'ಗಣಪ', 'ಪಾರಿಜಾತ' ಚಿತ್ರಗಳಿಗೆ ಹಾಡು ಬರೆದಿದ್ದೆ. ಮಳೆಗಾಲದಲ್ಲಿ ಪ್ರೇಮಿಗಳಿಬ್ಬರು ತಮ್ಮ ಭಾವನೆಗಳನ್ನು ಈ ಹಾಡಿನ ಮೂಲಕ ವ್ಯಕ್ತಪಡಿಸುತ್ತಾರೆ. ಸಮಾಜವನ್ನು ಬೆಸೆಯುವ ಒಂದೇ ಮಾಧ್ಯಮ ಎಂದರೆ ಅದು ಸಿನಿಮಾ ಎಂದು ಹೇಳಿದರು.

ಝೇಂಕಾರ್ ಮ್ಯೂಸಿಕ್‌ನ ಭರತ್ ಜೈನ್ ಮಾತನಾಡಿ, ಝೇಂಕಾರ್ ಪರಮೇಶ್ ನಡುವಿನ ಸಂಬಂಧ ತುಂಬಾ ಹಳೆಯದ್ದು. ಈ ಚಿತ್ರದಲ್ಲಿ ಮನೋಮೂರ್ತಿ ಆರು ಮೆಲೋಡಿ ಹಾಡುಗಳನ್ನು ಮಾಡಿಕೊಟ್ಟಿದ್ದಾರೆ. ಕುನಾಲ್ ಗಾಂಜಾವಾಲ, ಶ್ರೇಯಾ ಘೋಷಾಲ್ ಇತರರು ಹಾಡಿದ್ದಾರೆ, ನಮ್ಮ ಸಂಬಂಧ ಹೀಗೇ ಬೆಳೆಯಲಿ ಎಂದರು. ನಿರ್ಮಾಪಕ ಪರಮೇಶ್ ಮಾತನಾಡಿ, ಮುಂಗಾರು ಮಳೆಯ ಒಂದು ಹಾಡು ಆಗಲೇ 25–30 ಕೋಟಿ ಮಾಡಿತ್ತು. ಈ ಥರದ ಶಕ್ತಿ ಇರುವುದು ಮೆಲೋಡಿ ಸಾಂಗ್‌ಗೆ ಮಾತ್ರ. ಮುಂಗಾರು ಮಳೆ ಥರದ ಒಂದು ಮ್ಯೂಸಿಕಲ್ ಹಿಟ್ ಕೊಡಬೇಕೆಂದು, ತುಂಬಾ ಟ್ಯೂನ್ ಹುಡುಕಿ ಇದನ್ನು ಫೈನಲ್ ಮಾಡಿದ್ದೇನೆ. ಭರತ್ ಅವರ ಕಂಪನಿಗೆ ದೊಡ್ಡ ಹೆಸರು ಬರಬೇಕು. ಹಾಡು ಆ ಲೆವೆಲ್‌ಗೆ ರೀಚ್ ಆಗುತ್ತೆ ಎಂಬ ನಂಬಿಕೆಯಿದೆ. 'ಪ್ರಣಯಂ' ನಿಶ್ಚಿತಾರ್ಥದಿಂದ ಮದುವೆ ಆಗುವವರೆಗೆ ನಡೆಯುವ ಕಥೆ. ಮುಂದಿನ ತಿಂಗಳು ಚಿತ್ರವನ್ನು ತೆರೆಗೆ ತರುವ ಉದ್ದೇಶವಿದೆ. ಎಲ್ಲ ಕಲಾವಿದರು ಸಹಕಾರದಿಂದ ಚಿತ್ರ ಚೆನ್ನಾಗಿ ಬಂದಿದೆ ಎಂದರು.

'ಉಂಡೆನಾಮ' ಪೋಸ್ಟರ್ ಬಿಡುಗಡೆ



ಮೊನ್ನೆಯಷ್ಟೆ ಸ್ಯಾಂಡಲ್‌ವುಡ್ ಸೆಲೆಬ್ರಿಟಿಗಳ ಬಾಯಲ್ಲಿ 'ಉಂಡೆನಾಮ' ಎಂದು ಹೇಳಿಸುವ ಮೂಲಕ ಟೈಟಲ್ ರಿವೀಲ್ ಮಾಡಿ ಸದ್ದು ಮಾಡಿದ್ದ 'ಉಂಡೆನಾಮ' ಚಿತ್ರ ತಂಡ, ಯುಗಾದಿ ಹಬ್ಬಕ್ಕೆ ಚಿತ್ರದ ಪೋಸ್ಟರ್ ಬಿಡುಗಡೆ ಮಾಡಿ ಮತ್ತೊಮ್ಮೆ ಸದ್ದು ಮಾಡಿದ್ದಾರೆ. ವಿಶಿಷ್ಟ ಹಾಗೂ ವಿಶೇಷವಾಗಿರುವ ಈ ಪೋಸ್ಟರ್ ಚಿತ್ರ ಪ್ರೇಮಿಗಳಲ್ಲಿ ತೀವ್ರ ಕುತೂಹಲ ಮೂಡಿಸಿದೆ.

ಟಿ.ಆರ್.ಚಂದ್ರಶೇಖರ್ ಅರ್ಪಿಸಿ, ಸಿ.ನಂದ ಕಿಶೋರ್ ಎನ್.ಕೆ. ಸ್ಟುಡಿಯೋಸ್‌ನ ಅಡಿಯಲ್ಲಿ 'ಉಂಡೆನಾಮ' ಚಿತ್ರವನ್ನು ನಿರ್ಮಿಸಿದ್ದಾರೆ.

ಸಂಭಾಷಣೆಗಾರ ಕೆ.ಎಲ್. ರಾಜಶೇಖರ್ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡಿದ್ದಾರೆ. ಈ ಚಿತ್ರವು ಏಪ್ರಿಲ್ 14 ರಂದು ರಾಜ್ಯಾದ್ಯಂತ ತೆರೆ ಕಾಣಲಿದೆ. ಈ ಚಿತ್ರದ ಮುಖ್ಯ ಭೂಮಿಕೆಯಲ್ಲಿ ಕೋಮಲ್ ಅವರ ಜೊತೆ ಹರೀಶ್‌ರಾಜ್, ಧನ್ಯ ಬಾಲಕೃಷ್ಣ, ತಬಲಾನಾಣಿ, ಅಪೂರ್ವ, ವೈಷ್ಣವಿ, ತನಿಷ ಕುಪ್ಪಂಡ, ಬ್ಲಾಕ್ ಜನಾರ್ಧನ್ ಮುಂತಾದವರು ನಟಿಸಿದ್ದಾರೆ.



ಐದು ಭಾಷೆಗಳಲ್ಲಿ ಮಕ್ಕಳ ಪ್ಯಾನ್ ಇಂಡಿಯಾ ಚಿತ್ರ

ಲಿಲ್ಲಿ

ಕೆ.ಬಾಬುರೆಡ್ಡಿ ಹಾಗೂ ಜಿ.ಸತೀಶ್ ಕುಮಾರ್ ನಿರ್ಮಿಸಿರುವ, ಶಿವಂ ನಿರ್ದೇಶನದ ಮೊದಲ ಪ್ಯಾನ್ ಇಂಡಿಯಾ ಮಕ್ಕಳ ಚಿತ್ರ "ಲಿಲ್ಲಿ". ಇತ್ತೀಚೆಗೆ ಈ ಚಿತ್ರದ ಹಾಡು, ಟ್ರೇಲರ್ ಹಾಗೂ ಪೋಸ್ಟರ್ ಬಿಡುಗಡೆ ಸಮಾರಂಭ ನಡೆಯಿತು. ನಟಿ ರಾಗಿಣಿ ದ್ವಿವೇದಿ, ಡಾ॥ಮೌಲಾ ಶರೀಫ್, ಕರ್ನಾಟಕ ಚಲನಚಿತ್ರ ನಿರ್ಮಾಪಕರ ಸಂಘದ ಅಧ್ಯಕ್ಷ ಉಮೇಶ್ ಬಣಕಾರ್ ಹಾಗೂ ತೆಲುಗು ಚಿತ್ರನಟ ಶಿವಕೃಷ್ಣ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಹಾಡು ಬಿಡುಗಡೆ ಮಾಡಿದ ನಟಿ ರಾಗಿಣಿ, ಎಲ್ಲದಕ್ಕಿಂತ ಮುಖ್ಯ ಮಾನವೀಯತೆ ಎಂಬ ಉತ್ತಮ ಕಥಾಹಂದರ ಹೊಂದಿರುವ ಈ ಮಕ್ಕಳ ಚಿತ್ರ ದೊಡ್ಡಮಟ್ಟದ ಯಶಸ್ಸು ಕಾಣಲಿ ಎಂದು ಹಾರೈಸಿದರು. ಉಮೇಶ್ ಬಣಕಾರ್, ಮೌಲಾ ಶರೀಫ್ ಹಾಗೂ ನಟ ಶಿವಕೃಷ್ಣ ಸಹ ಚಿತ್ರತಂಡಕ್ಕೆ ಶುಭ ಕೋರಿದರು.

ನಿರ್ದೇಶಕ ಶಿವಂ ಮಾತನಾಡುತ್ತಾ, ನಾನು ಕನ್ನಡದಲ್ಲೂ ಕೆಲವು ಚಿತ್ರಗಳಿಗೆ ಕೆಲಸ ಮಾಡಿದ್ದೇನೆ. ಆದರೆ ಇದು ನಿರ್ದೇಶಕನಾಗಿ ಮೊದಲ ಚಿತ್ರ. ಮಾನವೀಯತೆಯ ಮೌಲ್ಯವನ್ನು ಸಾರುವ ಚಿತ್ರವಿದು. ಯಾವುದೇ ಒಂದು ವಿಷಯವನ್ನು ಮಕ್ಕಳ ಮೂಲಕ ಹೇಳಿದಾಗ ಬೇಗ ತಲುಪುತ್ತದೆ. ಈ ಹಿಂದೆ ಮಣಿರತ್ನಂ ಅವರ " ಅಂಜಲಿ" ಚಿತ್ರ ಎಲ್ಲರ ಮನ ಗೆದ್ದಿತ್ತು. ಈಗ "ಲಿಲ್ಲಿ" ಸಹ ಮಕ್ಕಳ ಜೊತೆಗೆ ಹಿರಿಯರಿಗೂ ಇಷ್ಟವಾಗುತ್ತದೆ. ಕನ್ನಡ, ತೆಲುಗು, ತಮಿಳು, ಮಲೆಯಾಳಂ ಹಾಗೂ ಹಿಂದಿ ಭಾಷೆಗಳಲ್ಲಿ ನಮ್ಮ ಚಿತ್ರ ಸದ್ಯದಲ್ಲೇ ತೆರೆ ಕಾಣಲಿದೆ ಎಂದರು.

ಮಕ್ಕಳ ಚಿತ್ರ ಅಂತ ಯಾವುದಕ್ಕೂ ಕೊರತೆ ಬಾರದ ಹಾಗೆ ಈ ಸಿನಿಮಾ ನಿರ್ಮಾಣವಾಗಬೇಕು. ಉತ್ತಮ ಕಥೆಯಿರುವ ಈ ಚಿತ್ರ ಎಲ್ಲಾ ಭಾಷೆಯ ಜನರಿಗೂ ತಲುಪಬೇಕು ಎಂದು ನಾನು ನಿರ್ದೇಶಕರಿಗೆ ಹೇಳಿದ್ದೆ. ಅಂದುಕೊಂಡಿದ್ದಕ್ಕಿಂತ ಚಿತ್ರ ಚೆನ್ನಾಗಿ ಬಂದಿದೆ ಎನ್ನುತ್ತಾರೆ ನಿರ್ಮಾಪಕ ಬಾಬು ರೆಡ್ಡಿ. ಚಿತ್ರದ ಪ್ರಮುಖ ಪಾತ್ರದಲ್ಲಿ ನಟಿಸಿರುವ ಬೇಬಿ ನೇಹಾ, ಮಾಸ್ಟರ್ ವೇದಾಂತ್ ವರ್ಮ, ಬೇಬಿ ಪ್ರಣೀತಾ ರೆಡ್ಡಿ ಹಾಗೂ ರಾಜ್ ವೀರ್ ಅವರು ತಮ್ಮ ಪಾತ್ರ ಹಾಗೂ ಚಿತ್ರದ ಬಗ್ಗೆ ಮಾತನಾಡಿದರು.



ಬಿಗ್ ಬಾಸ್ ಶಶಿ ಅಭಿನಯದ 'ಪ್ರೇಮಿಗಳ ಗಮನಕ್ಕೆ'

ಇತ್ತೀಚಿನ ದಿನಗಳಲ್ಲಿ ನಗರ ಪ್ರದೇಶಗಳಲ್ಲಿ ವಾಸಿಸುವ ಯುವಜನತೆಯಲ್ಲಿ ಲಿವಿಂಗ್ ಟುಗೆದರ್ ರಿಲೇಶನ್‌ಶಿಪ್ ಹೆಚ್ಚಾಗುತ್ತಿದೆ. ವಯಸ್ಸಿಗೆ ಬಂದ ಯುವಕ, ಯುವತಿಯರು ಮದುವೆ ಮಾಡಿಕೊಳ್ಳದೆ ಒಂದೇ ಮನೆಯಲ್ಲಿ ಅನ್ಯೋನ್ಯತೆಯಿಂದ ವಾಸವಾಗಿರುವ ಸಂಬಂಧ ಇದು. ಇಂಥದೇ ಸಂಬಂಧದ ಮೇಲೆ ಹೆಣೆಯಲಾದಂಥ ಕಥೆಯಿರುವ ಚಿತ್ರವೊಂದು ತೆರೆಗೆ ಬರಲು ಸಿದ್ದವಾಗಿದೆ. ಆ ಚಿತ್ರದ ಹೆಸರು 'ಪ್ರೇಮಿಗಳ ಗಮನಕ್ಕೆ'. ವಿನ್ಸೆಂಟ್ ಇನ್ಬರಾಜ್ ಅವರು ಈ ಚಿತ್ರದ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಅರುಳ್ ಸೆಲ್ವನ್ ಅವರ ಛಾಯಾಗ್ರಹಣ, ಡೆನ್ನಿಸ್ ವಲ್ಲಭನ್ ಅವರ ಸಂಗೀತ ಸಂಯೋಜನೆ ಈ ಚಿತ್ರಕ್ಕಿದೆ. ಅಲ್ಲದೆ ಸಿಟಾಡಿಲ್ ಫಿಲಂಸ್ ಮೂಲಕ ಸುಬ್ಬು ಅವರು ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ.

ಕೊರೊನಾ ಸಂದರ್ಭದಲ್ಲಿ ಇಡೀ ದೇಶವೇ ಲಾಕ್‌ಡೌನ್ ಆಗಿ ಹೊರಗಡೆ ಎಲ್ಲೂ ಹೋಗದಂಥ ಸಂದರ್ಭದಲ್ಲಿ ಬೆಂಗಳೂರಿನ ಎಲ್ಲಾ ಐಟಿ, ಬಿಟಿ ಕಂಪನಿಗಳು ತಮ್ಮ ಉದ್ಯೋಗಿಗಳಿಗೆ ಮನೆಗಳಿಂದಲೇ ಕೆಲಸ ಮಾಡುವ ಅವಕಾಶವನ್ನು ಕಲ್ಪಿಸಿಕೊಟ್ಟವು. ಅದರಂತೆ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಈ ಚಿತ್ರದ ನಾಯಕ, ನಾಯಕಿ–ಇಬ್ಬರೂ ಒಂದೇ ಮನೆಯಲ್ಲಿ ವಾಸಿಸತೊಡಗುತ್ತಾರೆ. ಆಗ ಅವರಿಗೆ ಎದುರಾಗುವ ಸಂದರ್ಭಗಳನ್ನು ಹೇಗೆ ಫೇಸ್ ಮಾಡಿದರು ಎಂಬುದರ ಕುರಿತು ಈ ಚಿತ್ರದಲ್ಲಿ ಹೇಳಲಾಗಿದೆ. ಬಿಗ್ ಬಾಸ್ ಖ್ಯಾತಿಯ ಶಶಿ ಈ ಚಿತ್ರದ ನಾಯಕನಾಗಿ ಕಾಣಿಸಿಕೊಂಡಿದ್ದು, ಚಿರಶ್ರೀ ನಾಯಕಿಯ ಪಾತ್ರವನ್ನು ನಿರ್ವಹಿಸಿದ್ದಾರೆ, ಸುಬ್ಬು ಮುಂತಾದವರು ತಾರಾಗಣದಲ್ಲಿದ್ದಾರೆ. ಜುಲೈ ಅಥವಾ ಆಗಸ್ಟ್ ವೇಳೆಗೆ ಚಿತ್ರವನ್ನು ತೆರೆಗೆ ತರುವ ಯೋಜನೆ ಚಿತ್ರತಂಡಕ್ಕಿದೆ.



ರಭಸ ವೀರೇನ್ ಕೇಶವ್ ಹೊಸ ಚಿತ್ರ

ಕಾಕ್‌ಟೈಲ್

ಇತ್ತೀಚೆಗಷ್ಟೇ ಬಿಡುಗಡೆಯಾಗಿದ್ದ, ವೀರೇನ್ ಕೇಶವ್ ನಾಯಕನಾಗಿ ನಟಿಸಿರುವ 'ಕಾಕ್‌ಟೈಲ್' ಚಿತ್ರ ಒಂದಷ್ಟು ಸದ್ದು ಮಾಡಿತ್ತು. ಆ ಚಿತ್ರದ ಮೂಲಕ ಚಿತ್ರರಂಗದಲ್ಲಿ ಭರವಸೆಯ ನಾಯಕನೆಂದು ವೀರೇನ್ ಕೇಶವ್ ಗುರುತಿಸಿಕೊಂಡಿದ್ದರು. ಅಲ್ಲದೆ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಚಿತ್ರದ ಅಭಿನಯಕ್ಕಾಗಿ ಅತ್ಯುತ್ತಮ ನಾಯಕ ನಟ ಪ್ರಶಸ್ತಿಯನ್ನು ಪಡೆದುಕೊಂಡಿದ್ದರು. ಈಗ 'ರಭಸ' ಎನ್ನುವ ಹೊಸ ಚಿತ್ರದಲ್ಲಿ ನಾಯಕನಾಗಿ ಅಭಿನಯಿಸುತ್ತಿದ್ದಾರೆ. ವಿಜಯಲಕ್ಷ್ಮಿ ಕಂಬೈನ್ಸ್ ಅಡಿಯಲ್ಲಿ ಡಾ.ಶಿವಪ್ಪ ಅವರೊಂದಿಗೆ ಶ್ರೀನಿವಾಸ್.ಕೆ.ಬಿ, ಫಿರೋಜ್ ನದಾಫ್ ಮತ್ತು ಮೆಹಬೂಬ್ ಸಾಬ್.ಬಿ.ಹವಾಲ್ದಾರ್ ಮುಂಡರಗಿ ಸಹಯೋಗದಲ್ಲಿ ಈ ಚಿತ್ರವು ನಿರ್ಮಾಣವಾಗುತ್ತಿದೆ. ರಾಜ್ ಚೈತನ್ಯ ಈ ಚಿತ್ರಕ್ಕೆ ಕಥೆ ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. 'ರಭಸ' ಚಿತ್ರವು ಬಹುದೊಡ್ಡ ತಾರಾಗಣ ಹೊಂದಿದ್ದು ಜತೆಗೆ ಹೆಸರಾಂತ ತಾಂತ್ರಿಕರು ಇದರಲ್ಲಿ ಕೆಲಸ ಮಾಡುತ್ತಿದ್ದಾರೆ. ಸಂಪೂರ್ಣ ಆಕ್ಷನ್, ಜೊತೆ ಜೊತೆಗೆ ಕ್ಯೂಟ್ ಲವ್‌ಸ್ಟೋರಿ, ಸೆಂಟಿಮೆಂಟ್ಸ್, ಎಮೋಷನ್ಸ್, ಡ್ರಾಮಾ ಎಲ್ಲವು ಕೂಡಿರುವ ಎಂಟರ್‌ಟೈನ್‌ಮೆಂಟ್ ಪ್ಯಾಕೇಜ್ ಇದಾಗಿದೆ. ಚಿತ್ರದ ತಾರಾಗಣ, ತಂತ್ರಜ್ಞರ ವಿವರಗಳನ್ನು ಸದ್ಯದಲ್ಲೆ ತಿಳಿಸುವುದಾಗಿ ಚಿತ್ರತಂಡವು ಹೇಳಿ ಕೊಂಡಿದೆ. ಬೆಂಗಳೂರು, ಮೈಸೂರು, ಚಿಕ್ಕಮಗಳೂರು, ಕೊಡಗು, ನೇಪಾಳ, ಬ್ಯಾಂಕಾಕ್ ಹಾಗೂ ಗೋವಾದ ಸುಂದರ ತಾಣಗಳಲ್ಲಿ ಏಪ್ರಿಲ್–ಮೇ ತಿಂಗಳಲ್ಲಿ ರಭಸ ಚಿತ್ರದ ಚಿತ್ರೀಕರಣ ನಡೆಸಲು ಯೋಜನೆ ಹಾಕಿಕೊಂಡಿರುವುದಾಗಿ ನಿರ್ಮಾಪಕ ಡಾ.ಶಿವಪ್ಪ ಮಾಹಿತಿ ಹಂಚಿಕೊಂಡಿದ್ದಾರೆ.


ಏ.28ಕ್ಕೆ ಕನ್ನಡ ಸೇರಿ 5 ಭಾಷೆಗಳಲ್ಲಿ 'ಪೊನ್ನಿಯಿನ್ ಸೆಲ್ವನ್–2'

ಮಣಿರತ್ನಂ ಅವರ ನಿರ್ದೇಶನದ ಪ್ಯಾನ್‌ಇಂಡಿಯಾ ಸಿನಿಮಾ 'ಪೊನ್ನಿಯಿನ್ ಸೆಲ್ವನ್–2' ಬಿಡುಗಡೆಗೆ ರೆಡಿಯಾಗಿದೆ. ಏ.28ರಂದು ಈ ಚಿತ್ರ ಅದ್ದೂರಿಯಾಗಿ ತೆರೆ ಕಾಣುತ್ತಿದೆ. ಈಗಾಗಲೇ ಟೀಸರ್ ಮೂಲಕ 'ಪೊನ್ನಿಯಿನ್ ಸೆಲ್ವನ್' ಚಿತ್ರದ ಸೀಕ್ವೆಲ್ ಮೋಡಿ ಮಾಡುತ್ತಿದೆ. ಇದೀಗ ಚಿತ್ರತಂಡ ಚಿತ್ರದ ಮೊದಲ ಹಾಡಾದ ಕಿರುನಗೆಯ ಲಿರಿಕಲ್ ವೀಡಿಯೋ ಬಿಡುಗಡೆ ಮಾಡಿದೆ.

ಮ್ಯೂಸಿಕ್ ಮಾಂತ್ರಿಕ ಎ.ಆರ್.ರೆಹಮಾನ್ ಸಂಗೀತ ಸಂಯೋಜನೆಯಲ್ಲಿ ಮೂಡಿಬಂದಿರುವ ಕಿರುನಗೆ ಹಾಡಿಗೆ ಜಯಂತ್ ಕಾಯ್ಕಿಣಿ ಅವರು ಚೆಂದದ ಸಾಲುಗಳನ್ನು ಪೋಣಿಸಿದ್ದು, ಗಾಯಕಿ ರಕ್ಷಿತಾ ಸುರೇಶ್ ಹಾಡಿದ್ದಾರೆ.

ಸಿನಿಪದಬಂಧ–466

ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ______

ವಿಳಾಸ ______

ದೂರವಾಣಿ ಸಂಖ್ಯೆ ______

ವಿಜೇತರು: ಎಸ್.ಚಂಚಲ, #179, 4ನೇ ಕ್ರಾಸ್, ಕಂದಾಯ ನಗರ, 1ನೇ ಹಂತ, ಶ್ರೀರಾಂಪುರ, ಮೈಸೂರು-34

ಎಡದಿಂದ ಬಲಕ್ಕೆ

1. ಪ್ರಮೀಳಾ ಜೋಷಾಯ್ ಬಲೆ ಬೀಸಿದ ಹೆಂಗಸು	3
2.ಶಿವಣ್ಣ ರಾಧಿಕಳನ್ನು ಹುಟ್ಟಿದ ಮನೆಗೆ ಕರೆದ ಬಗೆ !	7
7.ರವಿಚಂದ್ರನ್ ವಿಲಾಸ ಪ್ರಿಯ	3
8.ಶಶಿಕುಮಾರ್ – ಚಂದ್ರಿಕಾ ಅಭಿನಯಕ್ಕೆ ಭಾರ್ಗವ ನಿರ್ದೇಶಕ	9
9.ಬಂಜೆಯ ತೊಟ್ಟಿಲು ಕಥೆ ಆಧರಿಸಿರುವ ಚಿತ್ರ	2
10.ಸಂತಸ ಪಡುವ ಉದ್ಯಾನ	3
12.ಮಾಲಾಶ್ರೀ "ಸಹೋದರಿ"	2
15. ಕಾಶೀನಾಥ್ – ಪಂಚಮಿ ಅಭಿನಯದಲ್ಲಿ ಸಿಹಿಯಾದ ಪ್ರೀತಿ	9
18." _ _ _ _ _ _ _ ತಂದ ಪ್ರಥಮ ಚುಂಬನ.....,"	7
19.ಬೆಂಗಳೂರಿನ ಉತ್ಸವ	3

ಮೇಲಿನಿಂದ ಕೆಳಕ್ಕೆ

1.ಶಿವಣ್ಣ ಭಾಗ್ಯಶ್ರೀ ಸೆರಗು ಹಿಡಿದು ಸುತ್ತುತ್ತಿದ್ದಾನೆ.	5
2.ಇಲ್ಲೇ ಎಡದಿಂದ ಬಲಕ್ಕೆ 7 ರಲ್ಲಿರುರುವ ಹಾಡಿನ ಗುನುಗು	6
3.ಶಿವರಾಜ್ ಕುಮಾರ್,ವಿಜಯ್ ರಾಘವೇಂದ್ರ, ರಾಧಿಕಾ ಅಭಿನಯದ ಚಿತ್ರ	2
4.ಕೆರೆಗೆ ಹಾರವಾದವಳು ಇಲ್ಲಿ ಆರಂಭದಲ್ಲಿ ಚಿಕ್ಕವಳಾಗಿದ್ದಾಳೆ.	4
5.ಜಯಮಾಲಾ ಬೆಟ್ಟದ ಚೆಲುವೆ	4
6.ಕಥಾ ಸಂಗಮದೊಳಗೆ ಇದೊಂದು ಸಣ್ಣಕತೆ	4
11.ಅಂಬರೀಶ್,ಸುಮನ್ ರಂಗನಾಥ್ ಅಭಿನಯದ ಚಿತ್ರ	6
12.ಅನಂತ್ ನಾಗ್ ಕ್ರೂರತೆ	4
13.ಪುತ್ರನ ಜೊತೆ ಪುತ್ರನ ಪುತ್ರ ಇದ್ದಾನೆ	5
14.ಇಂದ್ರಜಿತ್ ಲಂಕೇಶ್ ಅವರ ಕಲಾಕೃತಿ	4
15.ಅನುರಾಗದಲ್ಲಿ ಮೂಡಿದ ಕರ್ಕಶ ಧ್ವನಿ	4
17.ರವಿಯೊಂದಿಗೆ ಬಂದವನು ಇಲ್ಲಿ ತಲೆ ಕೆಳಗು	2

ಸಿನಿ ಪದಬಂಧ 465ರ ಸರಿ ಉತ್ತರ

ಯು	ಗಾ	ದಿ	■	ಬೇ	ವು	ಬೆ	ಲ್ಲ	■	■	ಏ
ಗ	■	■	■	■	■	ಳ್ಳಿ	■	ರಾ	ಗಿ	ಣಿ
ಪು	ರು	ಷೋ	ತ್ತ	ಮ	■	ಮೋ	■	ಣಿ	■	ಆ
ರು	■	■	■	ಕ	ನ್ನ	ಡ	■	ಮ	■	ಟ
ಷ	■	ಚಂ	■	ರಂ	■	■	■	ಹಾ	■	■
■	ವೇ	ದ	ಪ್ರ	ದ	■	ಅ	ನು	ರಾ	ಧ	■
■	■	ನ	■	■	■	ಭಿ	■	ಣಿ	■	ಅ
ಆ	■	ದ	■	ಕ	ವ	ನ	■	■	■	ಮ
ಟ	■	ಗೊಂ	■	ರಾ	■	ಯ	ಮ	ಕಿಂ	ಕ	ರ
ಆ	ಗುಂ	ಬೆ	■	ವ	■	■	■	■	■	ಜ್ಯೋ
ಡು	■	■	ಗಾ	ಳಿ	ಮಾ	ತು	■	ಆ	ರ	ತಿ

ಸ್ವಾಗತ ಕಮಾನು, ಸಿಗ್ನಲ್ ಲೈಟ್, ಅಂಗನವಾಡಿ ಲೋಕಾರ್ಪಣೆ

ಹಂತ ಹಂತವಾಗಿ ನಂ.ಗೂಡನ್ನು ಸ್ಯಾಟಲೈಟ್ ಸಿಟಿಯಾಗಿಸಲು ಭದ್ರ ಬುನಾದಿ: ಸಂಸದ



ನಂಜನಗೂಡು, ಮಾ.23– ನಗರದ ಮಧ್ಯೆ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ ಸಂಚಾರ ದಟ್ಟಣೆ ನಿಯಂತ್ರಿಸಿ, ಅಪಘಾತ ತಪ್ಪಿಸುವ ಸಲುವಾಗಿ ಈಗಾಗಲೇ 2 ಪ್ರಮುಖ ವೃತ್ತಗಳಲ್ಲಿ ಟ್ರಾಫಿಕ್ ಸಿಗ್ನಲ್ ಅಳವಡಿಸಲಾಗಿದ್ದು, ಹಂತ ಹಂತವಾಗಿ ನಂಜನಗೂಡನ್ನು ಸ್ಯಾಟಲೈಟ್ ಸಿಟಿಯನ್ನಾಗಿಸಲು ಭದ್ರ ಬುನಾದಿ ಹಾಕಲಾಗುತ್ತಿದೆ ಎಂದು ಸಂಸದ ವಿ. ಶ್ರೀನಿವಾಸ ಪ್ರಸಾದ್ ತಿಳಿಸಿದರು.

ನಗರದಲ್ಲಿ 45 ಲಕ್ಷ ರೂ. ವೆಚ್ಚದ ಸ್ವಾಗತ ಕಮಾನು ಗೇಟ್ ಮತ್ತು ದೇವಿರಮ್ಮನಹಳ್ಳಿ ಬಳಿಯ ಬಸವೇಶ್ವರ ವೃತ್ತದಲ್ಲಿ ಅಳವಡಿಸಿರುವ ಟ್ರಾಫಿಕ್ ಸಿಗ್ನಲ್ ಲೈಟ್ ಹಾಗೂ 16 ಲಕ್ಷ ರೂ. ವೆಚ್ಚದಲ್ಲಿ ನೀಲಕಂಠನಗರದಲ್ಲಿ ಅಂಗನವಾಡಿ ಕೇಂದ್ರ ಹಾಗೂ 10 ಲಕ್ಷ ರೂ. ವೆಚ್ಚದಲ್ಲಿ ಹಳ್ಳದಕೇರಿ ಬಡಾವಣೆಯಲ್ಲಿ ಅಂಗನವಾಡಿ ಕೇಂದ್ರ ಲೋಕಾರ್ಪಣೆಗೊಳಿಸಿ ಮಾತನಾಡಿದರು.

ನಂಜನಗೂಡನ್ನು ಸ್ಯಾಟಲೈಟ್ ಸಿಟಿಯನ್ನಾಗಿ ಮಾಡಬೇಕೆಂಬುದು ನನ್ನ ಬಹು ದಿನದ ಕನಸಾಗಿತ್ತು. ಏಕಾಏಕಿ ಎಲ್ಲವನ್ನು ಮಾಡಲು ಸಾಧ್ಯವಾಗುವುದಿಲ್ಲ. ಹಂತ ಹಂತವಾಗಿ ಅಭಿವೃದ್ಧಿಗೆ ಒತ್ತು ನೀಡಲಾಗುತ್ತಿದೆ. ನಗರದ ಮಧ್ಯೆ ಹಾದು ಹೋಗಿರುವ 766 ರಾಷ್ಟ್ರೀಯ ಹೆದ್ದಾರಿಯ ಸಂಚಾರ ವೇಗ ನಿಯಂತ್ರಿಸಿ ಸ್ಥಳೀಯರಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ವಿಶ್ವೇಶ್ವರಯ್ಯ ವೃತ್ತ ಹಾಗೂ ದೇವಿರಮ್ಮನಹಳ್ಳಿ ಬಳಿಯ ಬಸವೇಶ್ವರ ವೃತ್ತದಲ್ಲಿ ಟ್ರಾಫಿಕ್ ಸಿಗ್ನಲ್ ಅಳವಡಿಸಲಾಗಿದೆ. ನಾನು ಕಂದಾಯ ಸಚಿವನಾಗಿದ್ದಾಗ ಸಂಚಾರ ಪೊಲೀಸ್ ಠಾಣೆ ಮಂಜೂರು ಮಾಡಿಸಿದೆ. ಇದೀಗ ನಗರ ಪ್ರವೇಶಿಸುವ ನಾಲ್ಕು ದಿಕ್ಕಲ್ಲೂ ಸ್ವಾಗತ ಕಮಾನು ಗೇಟ್ ನಿರ್ಮಿಸಲಾಗಿದೆ. ಹೀಗೆ ತಮ್ಮೂರಿನಲ್ಲಿ ವ್ಯವಸ್ಥಿತವಾಗಿ ಅಭಿವೃದ್ಧಿಗೆ ಒತ್ತು ನೀಡುವ ಮೂಲಕ ಮತ ನೀಡಿದ ಜನರಿಗೆ ಅನುಕೂಲ ಆಗುವ ನಿಟ್ಟಿನಲ್ಲಿ ಕೆಲಸ ಮಾಡಿದ ಆತ್ಮತೃಪ್ತಿ ನನಗಿದೆ ಎಂದರು.

ಮಕ್ಕಳ ಶಿಕ್ಷಣಕ್ಕೆ ಮತ್ತು ಕಲಿಕೆಗೆ ಅಂಗನವಾಡಿ(ಶಿಶುವಿಹಾರ) ಕಟ್ಟಡಗಳು ಅತ್ಯವಶ್ಯಕ. ಆದ್ದರಿಂದಲೇ ಅಂಗನವಾಡಿ ಮತ್ತು ಶಾಲಾ ಕಟ್ಟಡಗಳಿಗೆ ನಾನು ಮೊದಲ ಆದ್ಯತೆ ನೀಡಿದ್ದೇನೆ. ಬಡಜನರು ಹೆಚ್ಚು ವಾಸಿಸುವ ಬಡಾವಣೆ ಹಾಗೂ ಗ್ರಾಮಗಳಲ್ಲಿ ಅಂಗನವಾಡಿಗಳ ಸಬಲೀಕರಣಕ್ಕೆ ಒತ್ತು ನೀಡುವ ನಿಟ್ಟಿನಲ್ಲಿ ಎಲ್ಲೆಲ್ಲಿ ಅಂಗನವಾಡಿ ಕಟ್ಟಡಗಳ ಕೊರತೆಯಿದೆ ಎಂಬುದನ್ನು ಪಟ್ಟಿ ನೀಡಿದರೆ ಸಂಸದರ ನಿಧಿಯಿಂದ ಅನುದಾನ ಬಿಡುಗಡೆ ಮಾಡಿಕೊಡಲಾಗುವುದು. ಬಡಮಕ್ಕಳ ಅಪೌಷ್ಠಿಕತೆ ನಿವಾರಣೆ ಮಾಡಲು ಅಂಗನವಾಡಿಗಳು ಸಶಕ್ತವಾಗಿ ಕಾರ್ಯನಿರ್ವಹಿಸಬೇಕು ಎಂದರು.

ನಗರಸಭಾಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ, ಉಪಾಧ್ಯಕ್ಷೆ ನಾಗಮಣಿ, ಸದಸ್ಯರಾದ ಮಹದೇವಪ್ರಸಾದ್, ಗಿರೀಶ್, ಮಂಜುಳಾ ಅನಂತ್, ಆಯುಕ್ತ ನಂಜುಂಡಸ್ವಾಮಿ, ತಾಪಂ ಮಾಜಿ ಅಧ್ಯಕ್ಷ ಬಿ.ಎಸ್. ಮಹದೇವಪ್ಪ, ಮುಖಂಡರಾದ ಅನಂತ್, ಪುಟ್ಟಸ್ವಾಮಿ, ಶಂಕರಪ್ಪ, ಎಇಇ ಶ್ರೀನಿವಾಸ್ ಸೇರಿದಂತೆ ಇತರರಿದ್ದರು.

ವಿದ್ಯುತ್ ಕಂಬಗಳಿಗೆ ಕಾರು ಡಿಕ್ಕಿ: ಚಾಲಕ ಪಾರು

ಕಂಪಲಾಪುರ, ಮಾ.23– ಚಾಲಕನ ನಿಯಂತ್ರಣ ಕಳೆದುಕೊಂಡ ಕಾರು ಅಡ್ಡಾದಿಡ್ಡಿ ಚಲಿಸಿದ ಪರಿಣಾಮ 2 ವಿದ್ಯುತ್ ಕಂಬಗಳಿಗೆ ಡಿಕ್ಕಿ ಹೊಡೆದಿರುವ ಘಟನೆ ಗುರುವಾರ ಮಧ್ಯಾಹ್ನ ಕಂಪಲಾಪುರ ಕೊಪ್ಪಲು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ದೀಪಕ್ ಎಂಬಾತನೇ ಅಡ್ಡಾದಿಡ್ಡಿಯಾಗಿ ಕಾರು ಚಲಾಯಿಸಿದವರು. ಈತ ತನ್ನ ಟೊಯೋಟಾ ಕ್ವಾಲಿಸ್ (ಕೆಎ.03 ಎಂಬಿ.4216) ಕಾರನ್ನು ಅತಿವೇಗವಾಗಿ ಚಾಲನೆ ಮಾಡುವ ಮೂಲಕ ಕಂಪಲಾಪುರಕೊಪ್ಪಲಿನ ಮಾರ್ಗ ಎಡಭಾಗದ ಜೋಡಿ ವಿದ್ಯುತ್ ಕಂಬಗಳಿಗೆ ಡಿಕ್ಕಿ ಹೊಡೆದಿದ್ದಾನೆ. ಪರಿಣಾಮ 2 ಕಂಬಗಳು ಮುರಿದು ಕಾರಿನ ಮೇಲೆ ಬಿದ್ದಿವೆ. ತಕ್ಷಣ ಗ್ರಾಮಸ್ಥರು ಚೆಸ್ಕಾಂಗೆ ಕರೆ ಮಾಡಿ ವಿದ್ಯುತ್ ಸಂಪರ್ಕ ಕಡಿತಗೊಳಿಸಿದ್ದರಿಂದ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

ಕಾರು ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದ ರಭಸಕ್ಕೆ ಆ ರಸ್ತೆಯಲ್ಲಿದ್ದ ವಿದ್ಯುತ್ ಕಂಬಗಳು ಅಲುಗಾಡಿ, ಮನೆಯಲ್ಲಿದ್ದ ಟಿವಿ ಸೇರಿದಂತೆ ಎಲೆಕ್ಟ್ರಾನಿಕ್ ವಸ್ತುಗಳು ಕೆಟ್ಟು ಹೋಗಿವೆ. ನಂತರ ಜೆಸಿಬಿ ಮೂಲಕ ಕಾರಿನ ಮೇಲಿದ್ದ ಕಂಬ ತೆರವುಗೊಳಿಸಲಾಯಿತು. ಘಟನೆಗೆ ಕಾರು ಚಾಲಕ ದೀಪಕ್ ಪಾನಮತ್ತನಾಗಿದ್ದೆ ಕಾರಣ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಸ್ಥಳಕ್ಕೆ ಚೆಸ್ಕಾಂನ ಜೆಇ ಚಂದ್ರಶೇಖರ್ ಹಾಗೂ ಪಿರಿಯಾಪಟ್ಟಣ ಪೊಲೀಸರು ಭೇಟಿ ನೀಡಿ ಪರಿಶೀಲಿಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಸರಗೂರಲ್ಲಿ ಶ್ರೀ ಚಾರುಕೀರ್ತಿ ಶ್ರೀಗಳಿಗೆ ಶ್ರದ್ಧಾಂಜಲಿ



ಸರಗೂರು, ಮಾ.23– ಪಟ್ಟಣದ ಅನಂತನಾಥ ಜೈನ ಬಸದಿಯಲ್ಲಿ ಜೈನ ಸಮಾಜದಿಂದ ಶ್ರವಣಬೆಳಗೊಳದ ಶ್ರೀಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಅವರಿಗೆ ಗುರುವಾರ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮಾಜಿ ಪುರಸಭಾಧ್ಯಕ್ಷ ಎಸ್.ಬಿ.ಸತೀಶ್ ಕುಮಾರ್ ಮಾತನಾಡಿ, ಪಟ್ಟಣದಲ್ಲಿ ಪಂಚಕಲ್ಯಾಣ ನಡೆದ ವೇಳೆ ಶ್ರೀಗಳು ಸರಗೂರಿಗೆ ಆಗಮಿಸಿ 10 ದಿನ ವಾಸ್ತವ್ಯ ಹೂಡಿ ಕಾರ್ಯಕ್ರಮ ನಡೆಸಿಕೊಟ್ಟಿದ್ದರು ಎಂದು ಅವರನ್ನು ಸ್ಮರಿಸಿದರು.

ಇಂದು ಅವರು ಇಹಲೋಕ ತ್ಯಜಿಸಿರುವುದು ಭಕ್ತರಿಗೆ ತುಂಬಲಾದರ ನಷ್ಟವಾಗಿದ್ದು, ಜೈನ ಸಮುದಾಯ ಶೋಕತಪ್ತವಾಗಿದೆ ಎಂದರು.

ಜೈನ ಸಮಾಜದ ಮಾಜಿ ಅಧ್ಯಕ್ಷ ಎಸ್.ಬಿ.ಪದ್ಮಪ್ರಭ ಮಾತನಾಡಿ, ಪ್ರಾಕೃತ ಭಾಷೆಯಿಂದ ಜಯ ಧವಳ ಮತ್ತು ಮಹಾ ಧವಳ ಗ್ರಂಥವನ್ನು ಕನ್ನಡಕ್ಕೆ ತರ್ಜುಮೆ ಮಾಡಿದ ಶ್ರೀಗಳಿಗೆ ಮಾಜಿ ಪ್ರಧಾನಿ ದಿ.ಇಂದಿರಾಗಾಂಧಿ ಅವರು ಕರ್ಮಯೋಗಿ ಎಂಬ ಬಿರುದು ನೀಡಿದ್ದಾರೆ ಎಂದರು.

ಈ ವೇಳೆ ಜೈನ ಸಮಾಜದ ಅಧ್ಯಕ್ಷ ಎಸ್.ಬಿ.ನಾಗರಾಜು, ಗೌರವಾಧ್ಯಕ್ಷ ಬ್ರಹ್ಮದೇವಯ್ಯ, ಪ್ರಧಾನ ಕಾರ್ಯದರ್ಶಿ ಎಸ್.ಎನ್. ದೇವೇಂದ್ರಯ್ಯ, ಎಸ್.ಎಸ್.ಸೋಮಪ್ರಭ, ಎಸ್.ಬಿ.ಜೀವೇಂದ್ರಕುಮಾರ್, ನಿತಿನ್, ಬ್ರಹ್ಮಪ್ಪ, ಬ್ರಹ್ಮದೇವ್, ವಿಮಲ್ ಜೈನ್, ಅನಂತಮತಿ ಮಹಿಳಾ ಸಮಾಜದ ಅಧ್ಯಕ್ಷೆ ಮಂಜುಳಾ ಪ್ರವೀಣ್, ವಿಜಯಾ ಸತೀಶ್ ಕುಮಾರ್, ಪರಿಮಳಾ ರತ್ನಾಕರಯ್ಯ ಮತ್ತು ಜೈನ್ ಸಮಾಜದ ಶ್ರಾವಕ, ಶ್ರಾವಕಿಯರು ಇದ್ದರು.

ಇಂದು ನಂ.ಗೂಡಲ್ಲಿ ಜಿಲ್ಲಾ ಮಟ್ಟದ ಎಸ್‌ಟಿ ಸಮಾವೇಶ



ನಂಜನಗೂಡು, ಮಾ.23– ನಗರದ ವಿದ್ಯಾವರ್ಧಕ ಶಾಲಾ ಮೈದಾನದಲ್ಲಿ ಮಾ. 24ರಂದು ಸಂಜೆ 5 ಗಂಟೆಗೆ ಬಿಜೆಪಿ ವತಿಯಿಂದ ಜಿಲ್ಲಾ ಮಟ್ಟದ ಎಸ್‌ಟಿ ಸಮಾವೇಶ ಮತ್ತು ಕಾರ್ಯಕರ್ತರ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ತಾಲೂಕು ಬಿಜೆಪಿ ಅಧ್ಯಕ್ಷ ಪಿ.ಮಹೇಶ್ ಹೊರಳವಾಡಿ ಮನವಿ ಮಾಡಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಂಜನಗೂಡು ಕ್ಷೇತ್ರದಲ್ಲಿ ಬಿಜೆಪಿ ಸದೃಢವಾಗಿದ್ದು, ಕ್ಷೇತ್ರದಲ್ಲಿ 750 ಕೋಟಿಗೂ ಹೆಚ್ಚಿನ ಅನುದಾನ ತಂದು ಅಭಿವೃದ್ಧಿ ಮಾಡುವ ಮೂಲಕ ಜನೋಪಯೋಗಿ ಶಾಸಕರೆಂದು ಹೆಸರು ಪಡೆದಿರುವ ಶಾಸಕ ಬಿ.ಹರ್ಷವರ್ಧನ್‌ರ ಗೆಲುವು ನಿಶ್ಚಿತ. ಅವರನ್ನು ಹೆಚ್ಚಿನ ಸಂಖ್ಯೆಯಲ್ಲಿ ಬೆಂಬಲಿಸಿ ಅವರ ಕೈ ಬಲಪಡಿಸುವ ಉದ್ದೇಶದಿಂದ ಮತ್ತು ಕ್ಷೇತ್ರದಲ್ಲಿ ಬಿಜೆಪಿ ಪಕ್ಷದ ಶಕ್ತಿ ಪ್ರದರ್ಶನ ಮಾಡುವ ಉದ್ದೇಶದಿಂದ ಈ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗಿದ್ದು, ಕಾರ್ಯಕ್ರಮದಲ್ಲಿ 15 ಸಾವಿರ ಜನ ಸೇರುವ ನಿರೀಕ್ಷೆಯಿದೆ ಎಂದರು.

ಈ ಬೃಹತ್ ಸಮಾವೇಶವನ್ನು ರಾಜ್ಯ ಬಿಜೆಪಿ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮಾಜಿ ಸಚಿವರು ಮತ್ತು ಸುರಪುರದ ಶಾಸಕ ರಾಜುಗೌಡ ನಾಯಕ್, ಸಂಸದ ವಿ.ಶ್ರೀನಿವಾಸಪ್ರಸಾದ್ ಭಾಗವಹಿಸಲಿದ್ದಾರೆ. ಅಧ್ಯಕ್ಷತೆಯನ್ನು ಶಾಸಕ ಬಿ.ಹರ್ಷವರ್ಧನ್ ವಹಿಸಲಿದ್ದಾರೆ. ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ಮಹದೇವಯ್ಯ, ಪ್ರವಾಸೋದ್ಯಮ ನಿಗಮ ಅಧ್ಯಕ್ಷ ಕಾ.ಪು. ಸಿದ್ದಲಿಂಗಸ್ವಾಮಿ, ಬಿಜೆಪಿ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ಜಿಲ್ಲಾ ಎಸ್‌ಟಿ ಮೋರ್ಚಾ ಅಧ್ಯಕ್ಷ ಅಣ್ಣಯ್ಯ ನಾಯಕ, ಒಬಿಸಿ ಮೋರ್ಚಾ ರಾಜ್ಯ ಉಪಾಧ್ಯಕ್ಷ ಸುರೇಶ್‌ಬಾಬು ಮತ್ತು ಪಕ್ಷದ ಎಲ್ಲಾ ಹಂತದ ಚುನಾಯಿತ ಜನಪ್ರತಿನಿಧಿಗಳು ಭಾಗವಹಿಸಲಿದ್ದು ಕಾರ್ಯಕರ್ತರು ಮತ್ತು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಅವರು ಮನವಿ ಮಾಡಿದರು.

ಗೋಷ್ಠಿಯಲ್ಲಿ ನಗರಸಭಾಧ್ಯಕ್ಷ ಎಚ್.ಎಸ್. ಮಹದೇವಸ್ವಾಮಿ, ಉಪಾಧ್ಯಕ್ಷೆ ನಾಗಮಣಿ, ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ, ಎಸ್.ಎಂ.ಕೆಂಪಣ್ಣ, ತಾಪಂ ಮಾಜಿ ಅಧ್ಯಕ್ಷ ಬಿ.ಎಸ್.ಮಹದೇವಪ್ಪ, ಮುಖಂಡರಾದ ಸೋಮಣ್ಣ, ಸಿದ್ದರಾಜು, ಗಾಯತ್ರಿ, ಅಬ್ದುಲ್ ರಜಾಕ್, ಮಹದೇವಸ್ವಾಮಿ ಇದ್ದರು.

ಶ್ರದ್ಧಾಭಕ್ತಿಯಿಂದ ರಂಜಾನ್ ಆಚರಿಸಿ



ಬನ್ನೂರು, ಮಾ.23– ಹಬ್ಬಗಳು ಧಾರ್ಮಿಕತೆಯ ಪ್ರತೀಕವಾಗಿದ್ದು, ಮುಸ್ಲಿಂ ಬಾಂಧವರು ಒಂದು ತಿಂಗಳ ಕಾಲ ಉಪವಾಸ ಮಾಡುವ ಮೂಲಕ ಶ್ರದ್ಧಾಭಕ್ತಿಯಿಂದ ರಂಜಾನ್ ಆಚರಿಸುವಂತೆ ಶಾಸಕ ಎಂ.ಅಶ್ವಿನ್‌ಕುಮಾರ್ ತಿಳಿಸಿದರು.

ಪಟ್ಟಣದ ಬಿಸ್ಮಿಲ್ಲಾ ನಗರದಲ್ಲಿ ಮುಸ್ಲಿಂ ಬಾಂಧವರಿಗೆ ರಂಜಾನ್ ಹಬ್ಬದ ಶುಭ ಕೋರಿ ಮಾತನಾಡಿದ ಅವರು, ಭಾರತ ವಿವಿಧ ಧಾರ್ಮಿಕ ಆಚರಣೆಯುಳ್ಳ ದೇಶವಾಗಿದ್ದು, ಹಿಂದೂ, ಮುಸ್ಲಿಂಮರು ಅನ್ಯೋನ್ಯವಾಗಿದ್ದಾರೆ ಎಂದ ಅವರು, ಮುಸ್ಲಿಂ ಬಾಂಧವರು ಶಾಂತಿಯುತವಾಗಿ ಹಬ್ಬ ಆಚರಿಸುವಂತೆ ಮನವಿ ಮಾಡಿದರು. ಜೆಡಿಎಸ್ ಮುಖಂಡ ಫೈರೋಜ್ ಖಾನ್ ಮಾತನಾಡಿ, ಶಾಸಕ ಅಶ್ವಿನ್‌ಕುಮಾರ್ ರಂಜಾನ್ ಶುಭ ಕೋರಿರುವುದು ಸಮುದಾಯದವರಲ್ಲಿ ಸಂತಸವನ್ನುಂಟು ಮಾಡಿದೆ. ಕ್ಷೇತ್ರದಲ್ಲಿ ಈಗಾಗಲೇ ಜೆಡಿಎಸ್ ಅಬ್ಬರ ಜೋರಾಗಿದ್ದು, ಮುಂಬರುವ ದಿನಗಳಲ್ಲಿ ಮಾಜಿ ಸಿಎಂ ಕುಮಾರಸ್ವಾಮಿ ಅವರ ಕಾರ್ಯವೈಖರಿಯನ್ನು ಮನೆ ಮನೆಗೆ ತಿಳಿಸುವ ಮೂಲಕ ಹೆಚ್ಚು ಮತಗಳ ಅಂತರದಲ್ಲಿ ಅಶ್ವಿನ್ ಅವರನ್ನು ವಿಜಯಶೀಲರನ್ನಾಗಿ ಮಾಡುವಂತೆ ತಿಳಿಸಿದರು. ಕಾರ್ಯಕ್ರಮದಲ್ಲಿ ಮುಸ್ಲಿಂ ಮುಖಂಡರಿದ್ದರು.

ಎಲ್ಲರ ಪ್ರೀತಿಗೆ ಪಾತ್ರರಾಗಿದ್ದ ಧ್ರುವನಾರಾಯಣ್: ಬಣ್ಣನೆ



ತಿ.ನರಸೀಪುರ, ಮಾ.23– ಮಾಜಿ ಸಂಸದ ಆರ್.ಧ್ರುವನಾರಾಯಣ್ ಎಲ್ಲರನ್ನೂ ವಿಶ್ವಾಸ ದಿಂದ ಕಾಣುವ ಮೂಲಕ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದರು ಎಂದು ಗ್ರಾಪಂ ಮಾಜಿ ಸದಸ್ಯ ತಲಕಾಡು ರಘು ನಾಯಕ್ ಬಣ್ಣಿಸಿದರು.

ತಾಲೂಕಿನ ತಲಕಾಡಿನಲ್ಲಿ ವಿವಿಧ ಪಕ್ಷಗಳ ಮುಖಂಡರು ಆಯೋಜಿಸಿದ್ದ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಅವರ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿದ ಅವರು, ತಲಕಾಡಿನ ಕೀರ್ತಿ ನಾರಾಯಣ ದೇವಾಲಯಕ್ಕೆ ಕೋಟ್ಯಾಂತರ ರೂ. ಅನುದಾನ ಬಿಡುಗಡೆಗೊಳಿಸಿ ಜೀರ್ಣೋದ್ಧಾರ ಸೇರಿದಂತೆ ಸಾಕಷ್ಟು ಅಭಿವೃದ್ಧಿ ಕಾರ್ಯ ಮಾಡುವ ಮೂಲಕ ಎಲ್ಲರ ಪ್ರೀತಿ ವಿಶ್ವಾಸ ಗಳಿಸಿ ಜನರ ಅಚ್ಚುಮೆಚ್ಚಿನ ನಾಯಕನಾಗಿದ್ದರು ಎಂದರು.

ಧ್ರುವನಾರಾಯಣ್ ಶುದ್ಧ ರಾಜಕಾರಣದ ಆರಂಭದ ಬಿಂದುವಾಗಿದ್ದರು. ಮಾತು ಎಷ್ಟು ಮೃದುವಾಗಿರುತ್ತಿತ್ತೋ, ಅಷ್ಟೇ ಅವರ ನಿರ್ಧಾರ ಕಠಿಣವಾಗಿರುತ್ತಿದ್ದವು. ಅವರ ನಿರ್ಧಾರಗಳಲ್ಲಿ ಯಾವುದೇ ಕಲ್ಮಶ ಇರುತ್ತಿರಲಿಲ್ಲ. ಅಭಿವೃದ್ಧಿ ವಿಚಾರದಲ್ಲಿ ರಾಜಿಯಾಗುತ್ತಿರಲಿಲ್ಲ. ಕಾಮಗಾರಿಗಳ ಗುಣಮಟ್ಟದ ಬಗ್ಗೆ ಆಗಾಗ್ಗೆ ಪರಿಶೀಲಿಸುತ್ತಿದ್ದರು ಎಂದರು.

ತಲಕಾಡಿನ ನಾಯಕ ಜನಾಂಗದ ಯಜಮಾನ ಜೆ.ರಾಜು, ಸತೀಶ್ ನಾಯಕ, ಚಿಕ್ಕಣ, ಗ್ರಾಪಂ ಮಾಜಿ ಅಧ್ಯಕ್ಷ ಮಲ್ಲಾಣಿ, ಗ್ರಾಪಂ ಸದಸ್ಯರಾದ ಕುಮಾರ್ ನಾಯಕ್, ಉಮೇಶ್, ನಾಗರಾಜ್ ಮೂರ್ತಿ, ಹಸ್ತಿಕೇರಿ ನಾಗರಾಜು, ಸಿದ್ದರಾಜು, ಪುಟ್ಟಸ್ವಾಮಿ, ಶ್ರೀಧರ್, ಕುಕ್ಕೂರು ನಾರಾಯಣ್, ಗ್ರಾಪಂ ಮಾಜಿ ಉಪಾಧ್ಯಕ್ಷ ತಿಪ್ಪೇಕಾಳಿ ರಂಗನಾಥ್, ನವೀದ್ ಪಾಷ, ನಾರಾಯಣ ಉಪಸ್ಥಿತರಿದ್ದರು.



ತಿ.ನರಸೀಪುರದ ಗೋಪಾಲಪುರ ನಿವಾಸಿ ಹಾಗೂ ಮೈಸೂರು ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಎಂ. ಮಹೇಶ್ ಅವರು ತಮ್ಮ ತಾಯಿ ಪುಟ್ಟಸಿದ್ದಮ್ಮ, ತಂದೆ ಮಾದಯ್ಯ ಅವರ ಸ್ಮರಣಾರ್ಥ ಬಿ.ಜಿ.ಪುರದ ಶ್ರೀಮಂಟೇಸ್ವಾಮಿ ಮಠದಲ್ಲಿ ಬಸವಗಳಿಗೆ ಚಾವಣಿ ಹಾಕಿಸಿ ಮಠದ ಪೀಠಾಧ್ಯಕ್ಷ ಶ್ರೀಚನ್ನರಾಜ ಅರಸ್ ಅವರಿಗೆ ಹಸ್ತಾಂತರಿಸಿದರು. ಈ ವೇಳೆ ಮಹದೇವಸ್ವಾಮಿ, ಶಿವಕುಮಾರ್, ಕೆಂಪರಾಜು, ಚೆನ್ನಾಜಮ್ಮ, ಇಂದ್ರಮ್ಮ, ಶೃತಿ, ಮಂಜುಳಾ ಹಾಜರಿದ್ದರು.

ಮರಕ್ಕೆ ಬೈಕ್ ಡಿಕ್ಕಿ: ಸವಾರ ಸಾವು



ಮಲ್ಲುಂಡಿ, ಮಾ.23– ರಸ್ತೆ ಬದಿಯ ಮರಕ್ಕೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ನಂಜನಗೂಡು ತಾಲೂಕಿನ ಹೆಡಿಯಾಲ ಬಳಿ ಬುಧವಾರ ನಡೆದಿದೆ.

ಚನ್ನಪಟ್ಟಣ ಗ್ರಾಮದ ನಿವಾಸಿ ಸಂತೋಷ್(24) ಮೃತಪಟ್ಟವರು. ಈತ ತನ್ನ ಬೈಕ್‌ನಲ್ಲಿ ಹೆಡಿಯಾಲದಿಂದ ಚನ್ನಪಟ್ಟಣ ಗ್ರಾಮಕ್ಕೆ ಬರುವ ವೇಳೆ ನಿಯಂತ್ರಣ ಕಳೆದುಕೊಂಡ ಬೈಕ್ ರಸ್ತೆ ಬದಿಯಲ್ಲಿದ್ದ ಆಲದಮರಕ್ಕೆ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಸಂತೋಷ್ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಈ ಸಂಬಂಧ ಹುಲ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಪಿರಿಯಾಪಟ್ಟಣದಲ್ಲಿ ನೂತನವಾಗಿ ನಿರ್ಮಿಸಿರುವ ಅಂಬೇಡ್ಕರ್ ಭವನವನ್ನು ಶಾಸಕ ಕೆ.ಮಹದೇವ್ ಉದ್ಘಾಟಿಸಿದರು. ಈ ವೇಳೆ ಸಂಸದ ಪ್ರತಾಪ್ ಸಿಂಹ ಸೇರಿದಂತೆ ಇನ್ನಿತರರಿದ್ದರು.

ಅಲ್ಪಸಂಖ್ಯಾತರು ಜೆಡಿಎಸ್ ಬೆಂಬಲಿಸಿ



ಹುಣಸೂರು, ಮಾ.23– ಅಲ್ಪಸಂಖ್ಯಾತರು ಜೆಡಿಎಸ್ ಪಕ್ಷ ಬೆಂಬಲಿಸಬೇಕು ಎಂದು ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷರೂ ಆದ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ಇಲ್ಲಿನ ಶಬ್ಬೀರ್ ನಗರದ ಮುಖ್ಯ ರಸ್ತೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಲ್ಪಸಂಖ್ಯಾತರು ಆರ್ಥಿಕವಾಗಿ ಬಹಳ ಹಿಂದುಳಿದಿದ್ದಾರೆ. ಹೀಗಾಗಿ ನಮ್ಮ ಕೈ ಬಿಡಬೇಡಿ ಎಂದು ಕಾರ್ಯಕರ್ತರು ಮನವಿ ಮಾಡಿದ್ದಾರೆ. ಅಲ್ಪಸಂಖ್ಯಾತರು ಬಹಳ ಕಷ್ಟದಿಂದ ಚಿಕ್ಕಮನೆಗಳಲ್ಲಿ ವಾಸಿಸುತ್ತಿದ್ದೀರಾ. ನಿಮಗೆ ನಿವೇಶನ ನೀಡಲು ಪ್ರಥಮ ಆದ್ಯತೆ ನೀಡುತ್ತೇನೆ ಎಂದರು.

ತಾಲೂಕಿನ ಚುನಾಯಿತ ಪ್ರತಿನಿಧಿಗಳು ಆಶ್ವಾಸನೆ ನೀಡುತ್ತಾ ಬಂದಿದ್ದು, ಅದನ್ನು ಈಡೇರಿಸುವಲ್ಲಿ ವಿಫಲವಾಗಿದ್ದಾರೆ ಎಂದ ಅವರು, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರ್‌ಸ್ವಾಮಿ ತಾಲೂಕಿನ ರೈತರ 1.22 ಕೋಟಿ ಸಾಲಮನ್ನಾ ಮಾಡಿದ್ದಾರೆ ಹಾಗೂ ಮಹಿಳೆಯರು ಮೈಕ್ರೋ ಫೈನಾನ್ಸ್‌ನಲ್ಲಿ ಮಾಡಿದ ಸಾಲ ಮನ್ನಾ ಮಾಡುತ್ತೇವೆ ಎಂದು ಭರವಸೆ ನೀಡಿದ್ದಾರೆ. ಹೀಗಾಗಿ ಮುಂಬರುವ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿಸುವಂತೆ ಮನವಿ ಮಾಡಿದರು. ಈ ಸಂದರ್ಭ ತಾಲೂಕು ಜೆಡಿಎಸ್ ಅಧ್ಯಕ್ಷ ದೇವರಾಜ ಒಡೆಯರ್, ನಗರಾಧ್ಯಕ್ಷ ಹೆಚ್.ಎಂ. ಫಜ಼ಲುಲ್ಲಾ, ರಂಜಿತಾ ಚಿಕ್ಕಮಾದು, ಮಹಮ್ಮದ್ ಫಜ಼ಲ್, ಮಹಮ್ಮದ್ ರಫೀಕ್, ಸಿರಾಜ್ ಪಾಷ, ಅಮಾನ್, ಸರ್ದಾರ್, ಹೆಚ್.ಎಂ.ನಸರುಲ್ಲಾ, ಫರಾಜ್ ಇನ್ನಿತರಿದ್ದರು.

ಕೇತಹಳ್ಳಿಗೆ ಆಗಮಿಸದ ಪಂಚರತ್ನ ರಥಯಾತ್ರೆ

ಶಾಸಕ ಅಶ್ವಿನ್ ವಿರುದ್ಧ ಜೆಡಿಎಸ್ ಕಾರ್ಯಕರ್ತರ ಅಸಮಾಧಾನ



ತಿ.ನರಸೀಪುರ, ಮಾ.24– ಬೆಳಗ್ಗೆಯಿಂದ ರಾತ್ರಿವರೆಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರಿಗಾಗಿ ಭಾರೀ ಗಾತ್ರದ ಹಾರ ತುರಾಯಿ ಹಿಡಿದು ಕಾದರೂ ಕೇತಹಳ್ಳಿ ಗ್ರಾಮಕ್ಕೆ ಪಂಚರತ್ನ ರಥಯಾತ್ರೆ ಆಗಮಿಸದ ಹಿನ್ನೆಲೆಯಲ್ಲಿ ಶಾಸಕ ಎಂ.ಅಶ್ವಿನ್ ಕುಮಾರ್ ವಿರುದ್ಧ ಜೆಡಿಎಸ್ ಕಾರ್ಯಕರ್ತರು ಹಾಗೂ ಮುಖಂಡರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ತಾಲೂಕಿನ ಕೇತಹಳ್ಳಿ ಗ್ರಾಮದಲ್ಲಿ ಜೆಡಿಎಸ್ ಹಿರಿಯ ಮುಖಂಡರಾದ ನಂಜೇಗೌಡ ಹಾಗೂ ಕುಂಬಾರ ಸಂಘದ ಗೌರವಾಧ್ಯಕ್ಷ ರಾಜಣ್ಣ ನೇತೃತ್ವದಲ್ಲಿ ಪಂಚರತ್ನ ರಥಯಾತ್ರೆ ಸ್ವಾಗತಿಸಲು ಕಾರ್ಯಕರ್ತರು ಹಾಗೂ ಮುಖಂಡರು ರಾತ್ರಿಯವರೆಗೂ ಕಾದಿದ್ದರೂ ಗ್ರಾಮಕ್ಕೆ ಕುಮಾರಣ್ಣ ಹಾಗೂ ರಥಯಾತ್ರೆ ಕರೆತರಲು ಬಿಡದ ಶಾಸಕರ ನಿರ್ಲಕ್ಷ್ಯಕ್ಕೆ ಹಲವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಾರ್ಯಕರ್ತ ಆನಂದ್ ಸಾಧು ಮಾತನಾಡಿದರು. ಇದೇ ವೇಳೆ ಕಾರ್ಯಕರ್ತರಾದ ಸಿದ್ದರಾಜು, ಮಹೇಶ್ ನಾಯಕ, ವಿನೋದ್, ರಾಜು, ಮಂಜು, ಬಸವಣ್ಣ, ಮಹೇಶ್, ಲೋಕೇಶ್, ಪ್ರತಾಪ್, ಲಿಂಗರಾಜು, ಎಂ.ಸಿದ್ದಶೆಟ್ಟಿ, ಕುಮಾರ್, ಸಂಜು, ರಾಜಶೆಟ್ಟಿ, ಗ್ರಾಪಂ ಸದಸ್ಯ ಸಿದ್ಧನಾಯಕ, ಸೋಮು, ಮರಿಸ್ವಾಮಿ ಹಾಗೂ ಇನ್ನಿತರರಿದ್ದರು.

ಕೋಳಗಾಲದಲ್ಲಿ ನೂತನ ಹಾಲಿನ ಡೈರಿ ಉದ್ಘಾಟನೆ



ಹೆಚ್.ಡಿ.ಕೋಟೆ, ಮಾ.23– ತಾಲೂಕಿನ ಕೋಳಗಾಲ ಗ್ರಾಮವನ್ನು 2 ಕೋಟಿಗೂ ಹೆಚ್ಚು ಅನುದಾನದಲ್ಲಿ ಅಭಿವೃದ್ಧಿಪಡಿಸಿದ್ದೇನೆ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ತಾಲೂಕಿನ ಕೋಳಗಾಲ ಗ್ರಾಮದಲ್ಲಿ ನೂತನ ಹಾಲು ಉತ್ಪಾದಕರ ಸಹಕಾರ ಸಂಘವನ್ನು ಹಾಲು ಅಳೆಯುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ತಾಲೂಕಿನಲ್ಲಿ ಪ್ರತಿ ಗ್ರಾಮಗಳನ್ನು ಹಂತ ಹಂತವಾಗಿ ಅಭಿವೃದ್ಧಿ ಮಾಡುತ್ತಿದ್ದೇನೆ ಎಂದರು.


ತಾಲೂಕಿನ ನಿರುದ್ಯೋಗಿ ಯುವಕರಿಗೆ ಉದ್ಯೋಗ ದೊರಕಿಸಿಕೊಡಬೇಕು. ಅಲ್ಲದೇ ತಾಲೂಕಿನ ಹೆಚ್ಚಿನ ಅಭಿವೃದ್ಧಿಗೆ ಕನಸು ಕಂಡಿದ್ದೇನೆ. ಹೀಗಾಗಿ ಕ್ಷೇತ್ರದ ಜನತೆ ಮುಂದಿನ ಚುನಾವಣೆಯಲ್ಲಿ ಮತ್ತೊಮ್ಮೆ ಆಶೀರ್ವಾದ ಮಾಡಬೇಕು ಎಂದು ಮನವಿ ಮಾಡಿದರು.

ಹಾಲು ಉತ್ಪಾದನೆಯಲ್ಲಿ ಹೆಚ್.ಡಿ.ಕೋಟೆ ತಾಲೂಕು ಜಿಲ್ಲೆಯಲ್ಲೇ 3ನೇ ಸ್ಥಾನದಲ್ಲಿರುವುದು ನಿಜಕ್ಕೂ ಹೆಮ್ಮೆಯ ವಿಚಾರ ಎಂದ ಅವರು ಮೈಮುಲ್ ನಿರ್ದೇಶಕ ಈರೇಗೌಡರು ತಾಲೂಕಿನಲ್ಲಿ 162 ಸಹಕಾರ ಸಂಘ ಸ್ಥಾಪಿಸಿದ್ದಾರೆ. ಇದರಿಂದ ರೈತರು ನೆಮ್ಮದಿಯಿಂದ ಜೀವನ ಮಾಡುತ್ತಿದ್ದಾರೆ. ನಿಜಕ್ಕೂ ಅವರ ಕಾರ್ಯ ಶ್ಲಾಘನೀಯ ಎಂದರು.

ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ನಾಮಫಲಕ ಅನಾವರಣಗೊಳಿಸಿ ಮಾತನಾಡಿದ ಮೈಮುಲ್ ನಿರ್ದೇಶಕ ಹಿರೇಗೌಡ, ಸಹಕಾರ ಸಂಘಗಳು ಸರ್ಕಾರದ 2ನೇ ಮುಖ್ಯ ವಾಹಿನಿಯಾಗಿದ್ದು, ಸಹಕಾರ ಸಂಘಗಳಿಂದ ಸಿಗುವ ಸೌಲಭ್ಯಗಳನ್ನು ಪ್ರತಿಯೊಬ್ಬರೂ ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಹಾಲು ಉತ್ಪಾದಕರ ಸಹಕಾರ ಸಂಘದ ವಿಚಾರದಲ್ಲಿ ಯಾವುದೇ ಕಾರಣಕ್ಕೂ ರಾಜಕೀಯ ಬೆರಸಬಾರದು. ಗುಣಮಟ್ಟದ ಹಾಲನ್ನು ಸಂಘಕ್ಕೆ ನೀಡುವ ಮೂಲಕ ಹಾಲು ಒಕ್ಕೂಟ ಹಾಗೂ ಗ್ರಾಮದ ಹಾಲಿನ ಡೈರಿ ಬೆಳವಣಿಗೆಗೆ ಸಹಕರಿಸಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ನಿರ್ದೇಶಕಿ ದಾಕ್ಷಾಯಿಣಿ, ವ್ಯವಸ್ಥಾಪಕ ನಿರ್ದೇಶಕ ವಿಜಯಕುಮಾರ್, ಡೈರಿ ಅಧ್ಯಕ್ಷ ವಿ.ರಮೇಶ್, ಮುಖ್ಯ ಕಾರ್ಯದರ್ಶಿ ಮಹೇಶ್ ನಾಯಕ, ವಿಸ್ತೀರಣಾಧಿಕಾರಿ ಆರೀಫ್ ಇಕ್ಬಾಲ್, ಮುಖಂಡರಾದ ಕ್ಯಾತನಹಳ್ಳಿ ನಾಗರಾಜ್, ಜಿನ್ನಹಳ್ಳಿ ರಾಜನಾಯಕ, ಮರಿದೇವಯ್ಯ, ಮಹೇಶ್ ನಾಯ್ಕ, ಸವಿತಾ, ಮಲ್ಲು, ಅನಿತಾ, ಕೆ.ಟಿ.ತಿಮ್ಮನಾಯ್ಕ, ಚಂದ್ರಶೇಖರ್, ನಿರ್ದೇಶಕರಾದ ರಮೇಶ್, ನಾಗರಾಜು, ನಂಜುಂಡ ನಾಯಕ, ದೇವನಾಯಕ, ವಿನೋದ್‌ಕುಮಾರ್, ಲಕ್ಷ್ಮಯ್ಯ, ಮಲ್ಲಿಕಾರ್ಜುನ್, ತಿಮ್ಮರಾಜು, ಚಿಕ್ಕಣ್ಣ, ಚಂದ್ರಶೇಖರ್, ರಾಮರಾಜೇ ಅರಸ್, ಜಯಲೀಲಾ, ಸುಮ ಇತರರಿದ್ದರು.





ಅರಮನೆ ನಗರಿಯಲ್ಲಿ ನಿಮ್ಮ ಕನಸಿನ ನಿವೇಶನ ಖರೀದಿಸಲು ಇದು ಸರಿಯಾದ ಸಮಯ

ಬೆಂಗಳೂರಿನ ನಂತರ ಎಲ್ಲ ಕ್ಷೇತ್ರಗಳಲ್ಲಿಯೂ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ನಗರ ಮೈಸೂರು. ಇತ್ತೀಚೆಗೆ ನಗರದಲ್ಲಿ ಅಭಿವೃದ್ಧಿಗೆ ಪೂರಕವಾದ ಸಾಕಷ್ಟು ಬೆಳವಣಿಗೆಗಳಾಗುತ್ತಿವೆ. ದಶಪಥ ಹೆದ್ದಾರಿ ಉದ್ಘಾಟನೆ, ಸೆಮಿಕಂಡಕ್ಟರ್ ಘಟಕ ಸ್ಥಾಪನೆಯ ನಿರ್ಧಾರ, ಫಿಲಂ ಸಿಟಿ ಯೋಜನೆ, ವಿವಿಧ ಐಟಿ ಕಂಪನಿಗಳ ಕ್ಯಾಂಪಸ್ ಆರಂಭಕ್ಕೆ ಸಿದ್ಧತೆ, ಏರ್‌ಪೋರ್ಟ್ ರನ್ ವೇ ವಿಸ್ತರಣೆ ಸೇರಿದಂತೆ ಇನ್ನೂ ಹಲವಾರು ಬೆಳವಣಿಗೆಗಳ ಫಲವಾಗಿ ಮೈಸೂರು ಅಭಿವೃದ್ಧಿಯ ಪಥದಲ್ಲಿ ವೇಗವಾಗಿ ಸಾಗುತ್ತಿದೆ. ಈ ಹಿಂದೆಯೆಲ್ಲಾ ಉದ್ಯೋಗಕ್ಕಾಗಿ ಬೇರೆ ಬೇರೆ ಸ್ಥಳಗಳಿಗೆ ಯುವಜನತೆ ತೆರಳುತ್ತಿದ್ದರು. ಈಗ ಉದ್ಯೋಗ ಅರಸಿ ವಿವಿಧ ಸ್ಥಳಗಳಿಂದ ಮೈಸೂರಿಗೆ ಬರುವವರ ಸಂಖ್ಯೆ ಹೆಚ್ಚಾಗಲಿದೆ.

ಮೈಸೂರಿಗೆ ಅತ್ಯಾಧುನಿಕ ಸಂಪರ್ಕ ವ್ಯವಸ್ಥೆ:

ಮೈಸೂರು–ಬೆಂಗಳೂರು ದಶಪಥ ಹೆದ್ದಾರಿ ಉದ್ಘಾಟನೆಯಾಗಿದೆ. ಜೊತೆಗೆ ಮೈಸೂರು ನಂಜನಗೂಡು, ಮೈಸೂರು–ಕುಶಾಲನಗರ ಹೆದ್ದಾರಿ ಕೆಲಸವೂ ಆರಂಭವಾಗಲಿದೆ. ಮೈಸೂರು ವಿಮಾನ ನಿಲ್ದಾಣ ಉನ್ನತೀಕರಣಗೊಳ್ಳುತ್ತಿದ್ದು, ರನ್‌ವೇ ವಿಸ್ತರಣೆಗೆ ಸರ್ಕಾರ ಅನುದಾನ ಬಿಡುಗಡೆ ಮಾಡಿದೆ. ಮೈಸೂರಿನಿಂದ ವಿವಿಧ ನಗರಗಳಿಗೆ ಅತ್ಯುತ್ತಮ ರೈಲು ಸಂಪರ್ಕ ಇದೆ. ವಂದೇ ಭಾರತ್ ರೈಲು ಈಗಾಗಲೇ ಸಂಚರಿಸುತ್ತಿದ್ದು, ಕೆಲವೇ ವರ್ಷಗಳಲ್ಲಿ ಬುಲೆಟ್ ಟ್ರೈನ್ ಸಹ ಬರಲಿದೆ. ಈ ಎಲ್ಲ ಬೆಳವಣಿಗೆಗಳಿಂದಾಗಿ ಮೈಸೂರಿಗೆ ಅತ್ಯಾಧುನಿಕ ಸಂಪರ್ಕ ವ್ಯವಸ್ಥೆ ಸಿಗಲಿದೆ.

ವಿಸ್ತಾರಗೊಳ್ಳುತ್ತಿದೆ ಉದ್ಯೋಗ ಮಾರುಕಟ್ಟೆ:

ಈಗಾಗಲೇ ಮೈಸೂರಿನಲ್ಲಿ ಇನ್ಫೋಸಿಸ್, ಎಲ್‌&ಟಿ ಸೇರಿದಂತೆ ಸಾಕಷ್ಟು ಬೃಹತ್ ಸಂಸ್ಥೆಗಳು ಹಾಗೂ ಉತ್ಪಾದನಾ ಘಟಕಗಳಿವೆ. ಐಬಿಎಂ ಸೇರಿದಂತೆ ಇನ್ನೂ ಹಲವಾರು ಐಟಿ ಸಂಸ್ಥೆಗಳು ಮೈಸೂರಿನಲ್ಲಿ ತಮ್ಮ ಕ್ಯಾಂಪಸ್ ಆರಂಭಿಸುತ್ತಿವೆ, ತಂತ್ರಜ್ಞಾನದ ವಸಾಹತು ಆರಂಭವಾಗುತ್ತಿದೆ. ದೇಶದ ಪ್ರಥಮ ಸೆಮಿ ಕಂಡಕ್ಟರ್ ಘಟಕ ಸಹ ಮೈಸೂ–ರಿನಲ್ಲಿ ಆರಂಭವಾಗುತ್ತಿದೆ. ನಮ್ಮ ನಗರದ ಸುತ್ತ ಕಾವೇರಿ, ಕಪಿಲಾ ನದಿಗಳಿರುವ ಕಾರಣ ವರ್ಷಪೂರ್ತಿ ಭರಪೂರ ನೀರು ಸರಬರಾಜು ಇರುತ್ತದೆ. ಆದ್ದರಿಂದ ಹಲವಾರು ಕಾರ್ಖಾನೆಗಳು, ಉತ್ಪಾದನಾ ಘಟಕಗಳು ಮೈಸೂರಿನಲ್ಲಿ ಆರಂಭವಾಗಲಿವೆ. ಮೈಸೂರಿನಲ್ಲಿ ವರ್ಷವಿಡೀ ಪ್ರವಾಸಿಗರು ಇರುವುದರಿಂದ ಇಲ್ಲಿ ಪ್ರವಾಸೋದ್ಯಮಕ್ಕೆ ಸಂಬಂಧಿಸಿದ ಉದ್ಯೋಗಗಳು ಹಾಗೂ ಉದ್ಯಮಗಳಿಗೆ ಅತ್ಯುನ್ನತ ಅವಕಾಶಗಳಿವೆ.

ಎಲ್ಲರಿಗೂ ಇದೆ ಹೂಡಿಕೆಯ ಅವಕಾಶ:

ಮೈಸೂರಿನ ರಿಯಲ್ ಎಸ್ಟೇಟ್ ಕ್ಷೇತ್ರ ಹಿಂದೆಂದಿಗಿಂತಲೂ ಹೆಚ್ಚು ಕ್ರಿಯಾಶೀಲವಾಗಿದೆ. ಬೆಂಗಳೂರು ಸೇರಿದಂತೆ ಬೇರೆ ಜಿಲ್ಲೆಗಳ ಸಾಕಷ್ಟು ಜನರು ಮೈಸೂರಿನಲ್ಲಿ ನಿವೇಶನ ಕೊಂಡಿದ್ದಾರೆ. ನಗರದ ಪ್ರಮುಖ ಸ್ಥಳಗಳಲ್ಲಿ ಅಲಯನ್ಸ್ ಸ್ಕ್ವೇರ್‌ನ ವಿವಿಧ ಬಡಾವಣೆಗಳಿವೆ. ಇಲ್ಲಿ ಕೈಗೆಟುಕುವ ದರದಲ್ಲಿ ನಿವೇಶನಗಳು ದೊರೆಯುವುದರಿಂದ ಎಲ್ಲ ವರ್ಗದವರೂ ನಿವೇಶನ ಕೊಳ್ಳಬಹುದು. ಈಗ ಮಾರುಕಟ್ಟೆ ಬೆಳೆಯುತ್ತಿದೆ. ದರಗಳು ಇನ್ನೂ ಹೆಚ್ಚಾಗುವ ಮುನ್ನವೇ ಸೈಟ್ ಖರೀದಿಸಿದರೆ ವಿಶೇಷವಾಗಿ ಮಧ್ಯಮ ವರ್ಗದವರಿಗೆ ಬಹಳ ಉಪಯೋಗವಾಗಲಿದೆ.

ಅಲಯನ್ಸ್ ಸ್ಕ್ವೇರ್‌ನಲ್ಲಿ ಹೂಡಿಕೆ ಮಾಡಲು ಪ್ರಮುಖ ಕಾರಣಗಳು:

ರಿಯಲ್ ಎಸ್ಟೇಟ್ ಕ್ಷೇತ್ರದಲ್ಲಿ 20ಕ್ಕೂ ಹೆಚ್ಚು ವರ್ಷಗಳ ಅನುಭವ

1. 25 ಸಾವಿರಕ್ಕೂ ಹೆಚ್ಚು ವಿಶ್ವಾಸಾರ್ಹ ಗ್ರಾಹಕರು
2. 40ಕ್ಕೂ ಹೆಚ್ಚು ಬಡಾವಣೆಗಳು
3. ಸಮರ್ಪಕ ದಾಖಲೆಗಳೊಂದಿಗೆ ಪಾರದರ್ಶಕ ವ್ಯವಹಾರ
4. ಗ್ರಾಹಕ ಸ್ನೇಹಿ, ಅನುಭವಿ ತಂಡ



ಖಾಸಗಿ ಸಹಭಾಗಿತ್ವದಲ್ಲಿ ಇಂಟೆಗ್ರೇಟೆಡ್ ಟೌನ್‌ಶಿಪ್, ಅಂತರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ, ಫಿಲಂ ಸಿಟಿ, ಅಂತರಾಷ್ಟ್ರೀಯ ಮ್ಯೂಸಿಯಂ, ಕಿದ್ವಾಯಿ ಆಸ್ಪತ್ರೆ ಸ್ಥಾಪನೆ, ಪಾರಂಪರಿಕ ಕಟ್ಟಡಗಳ ಸಂರಕ್ಷಣೆ ಸೇರಿದಂತೆ ಇನ್ನೂ ಹಲವು ಅಭಿವೃದ್ಧಿಪರ ಯೋಜನೆಗಳು ಮೈಸೂರಿಗೆ ಸಿಕ್ಕಿವೆ. ಈ ಬೆಳವಣಿಗೆಯಿಂದಾಗಿ ಮೈಸೂರಿನಲ್ಲಿ ನಿವೇಶನ ಕೊಳ್ಳುವವರಿಗೆ ಇದು ಸಕಾಲ.

– **ಬಿ.ಎಸ್.ಪ್ರಶಾಂತ್,** ವ್ಯವಸ್ಥಾಪಕ ನಿರ್ದೇಶಕರು, ಅಲಯನ್ಸ್ ಸ್ಕ್ವೇರ್

ALLIANCE SQUARE PROPERTIES
☎ 0821-2541100



